
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಜುಲೈ 29, 2009 ರೂ. 12/-

ತಿರುವಳ್ಳುವರ್ ಪ್ರತಿಮೆ
ವಿರೋಧ ಬೇಡ






ಪ್ರೀತಿ ಇಲ್ಲದ ಈ ಪ್ರೀತಿ

ದಿಗಂತನ ಮಾನ ಹರಾಜು

ಭಜರಂಗಿಗಳ

ಸೆಕ್ಸ್ ಸಿಡಿ



ಹರತಾಳ-ಬೇಳೂರು
ಜಟಾಪಟಿ



ಾಸರಹಳ್ಳಿ ಶಾಸಕನ ಭೂಕಬಳಿಕೆ



ರೋಹಿ ಕೊಲೆಯಲ್ಲಿ ಬಿಜೆಪಿ ಕೈ




ರವಿ ಪೂಜಾರಿಯ ಆರೆಸ್ಸೆಸ್ ಲಿಂಕ್

ಹಿಂಸೆ ಮತ್ತು ಪ್ರತಿರೋಧಗಳ ಒಂದು ಕಥನ

ಶ್ರೀಕುಮಾರ್ ಅವರ ಹೆಚ್ಚುಗಾರಿಕೆಯೆಂದರೆ, ಅವರು ತನ್ನ ಸೇವಾವಧಿಯಲ್ಲಿ ಕಣ್ಣಾರೆ ಕಂಡದ್ದನ್ನು ತಮ್ಮೊಳಗೇ ಬಚ್ಚಿಟ್ಟುಕೊಳ್ಳದೆ ಸಾರ್ವಜನಿಕರ ಎದುರು ಅದನ್ನು ಬಹಿರಂಗಪಡಿಸುವ ಧೈರ್ಯ ತೋರಿಸಿದ್ದು. ತನ್ನ ಮೇಲಧಿಕಾರಿಗಳು ಮತ್ತು ಮುಖ್ಯಮಂತ್ರಿಯ ವಿನಂತಿ, ಎಚ್ಚರಿಕೆ-ಇದು ಯಾವುದೂ ನಡೆಯದಿದ್ದಾಗ ಬೆದರಿಕೆ ಮತ್ತು ಸೇವಾಹಿಂಬಡ್ತಿಗಳಿಗೂ ಮಣಿಯದೆ, ಶ್ರೀಕುಮಾರ್ ಈಗಾಗಲೇ ಸುಪ್ರೀಮ್ ಕೋರ್ಟು ಮತ್ತು ವಿಶೇಷ ತನಿಖಾ ತಂಡಗಳ ಎದುರು ಗುಜರಾತ್‌ನ ಘಟನಾವಳಿ ಕುರಿತು ಅಫಿಡವಿಟ್‌ಗಳನ್ನು ಸಲ್ಲಿಸಿದ್ದಾರೆ. ಈ ಅಫಿಡವಿಟ್‌ಗಳು ಓರ್ವ ಹಿರಿಯ ಪೊಲೀಸ್ ಅಧಿಕಾರಿಯ ಪ್ರಮಾಣ ವಚನಗಳಾಗಿರುವುದರಿಂದ, ನ್ಯಾಯಾಲಯ ಇವನ್ನು ಸಾಕ್ಷಿ ಎಂದೇ ಪರಿಗಣಿಸಬೇಕಾಗುತ್ತದೆ. ಹೀಗೆ ಶ್ರೀಕುಮಾರ್ ನಿವೃತ್ತರಾದ ಮೇಲೂ ನರೇಂದ್ರ ಮೋದಿ ಮತ್ತು ಅವನ ಪಟಾಲಂಗೆ ದುಃಸ್ವಪ್ನದ ಹಾಗೆ ಕಾಡುತ್ತಿದ್ದಾರೆ.

62ರ ಹರೆಯದ ಆರ್.ಬಿ. ಶ್ರೀಕುಮಾರ್ ಕೇರಳದವರಾದರೂ ಗುಜರಾತ್ ಸರ್ಕಾರದ ಸೇವೆಯಲ್ಲಿದ್ದು ಈಗ ನಿವೃತ್ತರಾಗಿರುವ ಓರ್ವ ಹಿರಿಯ ಪೊಲೀಸ್ ಅಧಿಕಾರಿ. ಗುಜರಾತ್ ಹಿಂಸಾಕಾಂಡ ಸಂಭವಿಸಿದ 2002 ರಲ್ಲಿ ಶ್ರೀಕುಮಾರ್ ಅಹಮದಾಬಾದ್‌ನಲ್ಲಿ ಸಶಸ್ತ್ರ ಪೊಲೀಸ್ ಪಡೆಯ ಅಡಿಷನಲ್ ಡಿಜಿಪಿ ಹುದ್ದೆಯಲ್ಲಿದ್ದರು. ಅದಕ್ಕೂ ಮೊದಲು 1977-78 ರ ಅವಧಿಯಲ್ಲಿ ಅವರು ಆ ನಗರದ ಪೊಲೀಸ್ ಡೆಪ್ಯೂಟಿ ಕಮಿಷನರ್ ಆಗಿದ್ದರು. ಹಾಗಾಗಿ ಅಹಮದಾಬಾದ್‌ನ ಮುಸ್ಲಿಮ್ ಕಾಲೋನಿಗಳು ಮತ್ತು ಬಡಜನರ ಕೊಳಗೇರಿಗಳೂ ಸೇರಿದಂತೆ ನಗರದ ಪ್ರತಿಯೊಂದು ಬಡಾವಣೆಯನ್ನೂ ಅವರು ಬಲ್ಲವರಾಗಿದ್ದರು. ಪ್ರಸ್ತುತ ಪುಸ್ತಕದಲ್ಲಿ ಶ್ರೀಕುಮಾರ್, ಗುಜರಾತ್ ಪೊಲೀಸ್ ಪಡೆಯ ಹಿರಿಯ ಅಧಿಕಾರಿಯಾಗಿ 2002 ಫೆಬ್ರವರಿ 28 ರಿಂದ ಹಲವು ತಿಂಗಳ ಕಾಲ ಆ ರಾಜ್ಯದ ಹಲವೆಡೆ ವಿಶೇಷವಾಗಿ ಅಹಮದಾಬಾದ್‌ನಲ್ಲಿ ಮುಸ್ಲಿಮರ ಮೇಲೆ ನಡೆದ ಘೋರ ಹಿಂಸೆಯನ್ನು ತಾನು ನಿಭಾಯಿಸಿದ ಅಥವಾ ನಿಭಾಯಿಸಲು ಯತ್ನಿಸಿ ಸೋತ ಪರಿಯನ್ನು ನಿರೂಪಿಸಿದ್ದಾರೆ.


ಶ್ರೀಕುಮಾರ್

ಸಹಜವಾಗಿಯೇ ಅವರ ಪುಸ್ತಕದ ಬಹುಭಾಗ ಕರ್ತವ್ಯ ನಿರ್ವಹಣೆಯಲ್ಲಿ ಅವರು ಇಲಾಖೆಯ ಮೇಲಧಿಕಾರಿಗಳಿಂದಲೂ, ಅಧಿಕಾರಸ್ಥ ಬಿಜೆಪಿ ರಾಜಕಾರಣಿಗಳಿಂದಲೂ ಎದುರಿಸಿದ ಅಡೆತಡೆ ಹಾಗೂ ಬೆದರಿಕೆಗಳನ್ನೂ ವಿವರಿಸಲು ಮೀಸಲಾಗಿದೆ. ಅದರ ಜೊತೆಗೆ ಶ್ರೀಕುಮಾರ್ ತನ್ನ ಈ ಕಥನದಲ್ಲಿ ಗುಜರಾತ್‌ನ ಗೋಧ್ರಾ ಮತ್ತು ತದನಂತರದ ಸತತ ಹಿಂಸೆಗೆ ಓರ್ವ ಭಾರತೀಯ ಪ್ರಜೆಯಾಗಿ, ಆಸ್ತಿಕ ಹಿಂದೂವಾಗಿ ಮತ್ತು ಕೇವಲ ಮನುಷ್ಯ ಮಾತ್ರನಾಗಿ ತಾನು ಹೇಗೆ ಸ್ಪಂದಿಸಿದೆ ಎಂಬುದನ್ನೂ ಹೃದಯ ಸ್ಪರ್ಶಿ ವಿವರಗಳ ಮುಖಾಂತರ ನಿರೂಪಿಸುತ್ತಾರೆ. "ಧರ್ಮದ ಹೆಸರಿನಲ್ಲಿ" ಬಣ್ಣಿಸುವ ಹಲವು ಹೃದಯವಿದ್ರಾವಕ ಘಟನೆಗಳು, 1992-93 ರ ಮುಂಬಯಿ ಹಿಂಸಾಕಾಂಡ ಕುರಿತ ನ್ಯಾಯಮೂರ್ತಿ ಶ್ರೀಕೃಷ್ಣ ಆಯೋಗದ ವರದಿಯನ್ನು ನೆನಪಿಸುತ್ತವೆ. ಮಾನವಹಕ್ಕುಗಳ ಖ್ಯಾತ ಹೋರಾಟಗಾರ್ತಿ ತೀಸ್ತಾ ಸೆಟಲ್‌ವಾಡ್ ಮುತುವರ್ಜಿ ವಹಿಸಿ ಪ್ರಕಟಿಸಿದ ಶ್ರೀಕೃಷ್ಣ ಆಯೋಗದ ವರದಿ, ಸ್ವತಃ ತೀಸ್ತಾ ಅವರೇ ವಿಷಯ ಸಂಗ್ರಹ ಮಾಡಿ ಹೊರತಂದ ಗುಜರಾತ್ ಹಿಂಸಾಕಾಂಡ ಕುರಿತ ಸಚಿತ್ರ ವರದಿ ಹಾಗೂ ನ್ಯಾಯಮೂರ್ತಿ ಸುರೇಶ್ ಹೊಸಬೆಟ್ ಅವರ ವರದಿಗಳಂತೆ, ಶ್ರೀಕುಮಾರ್ ಅವರ ಈ ಕೃತಿ ಕೂಡ ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಮತ್ತು ಸಂಸ್ಕೃತಿ ಕುರಿತ ಒಂದು ಅಸಾಧಾರಣ ದಾಖಲೆಯಾಗಿದೆ. "ಧರ್ಮದ ಹೆಸರಿನಲ್ಲಿ" ಕೃತಿಯಲ್ಲಿ ನಮಗೆ ಎದುರಾಗುವ ಅನೇಕ ಸನ್ನಿವೇಶಗಳು ಕಾಫ್ಕ ಮತ್ತು ಸಾದತ್ ಹಸನ್ ಮಾಂಟೋ ಕತೆಗಳನ್ನು ನೆನಪಿಸುತ್ತವೆ. ಉದಾಹರಣೆಗೆ ಪುಸ್ತಕದ ಮೊದಲ ಪುಟದಲ್ಲೇ ಆಘಾತದಂತೆ ನಮ್ಮ ಮೇಲೆ ಎರಗುವ ಈ ಸಾಲುಗಳು:


ಸಾರಾ

"2002 ಫೆಬ್ರವರಿ 28


ನನ್ನ ಬದುಕನ್ನು ಬದಲಾಯಿಸಿದ ದಿವಸ

ಅಹಮದಾಬಾದಿನಲ್ಲಿ ಆರ್ಮ್ಡ್ ಬೆಟಾಲಿಯನ್‌ನಲ್ಲಿ ನಾನು ಆಗ ಅಡಿಷನಲ್ ಡಿಜಿಪಿಯಾಗಿದ್ದೆ. ಗುಜರಾತಿನ ಪ್ರಮುಖ ನಗರಗಳಲ್ಲಿ ಕೋಮು ಘರ್ಷಣೆ ಬಿಗಿಗೊಳ್ಳುತ್ತಿತ್ತು.

ನಾನು ಮತ್ತು ನನ್ನ ಮಗಳು ದೀಪಾ ರಾತ್ರಿ ಫ್ಲ್ಯಾಟಿನ ಮೇಲ್ಭಾಗದಲ್ಲಿ ನಿಂತು ಅಹಮದಾಬಾದ್ ನಗರವನ್ನು, ನಡುಗುತ್ತಿರುವ ಹೃದಯಗಳೊಡನೆ ನೋಡುತ್ತಾ ನಿಂತಿದ್ದೆವು. ಮುಸ್ಲಿಮರು ವಾಸಿಸುತ್ತಿದ್ದ ಕಾಲೋನಿಗಳಿಂದ ಬೆಂಕಿ ಮತ್ತು ಕಪ್ಪು ಹೊಗೆ ಮೇಲಕ್ಕೇಳುತ್ತಿದ್ದುದನ್ನು ಕಾಣಬಹುದಾಗಿತ್ತು. ಅದೇ ಫ್ಲ್ಯಾಟಿನಲ್ಲಿ ವಾಸವಾಗಿದ್ದ ಓರ್ವ ಪೊಲೀಸ್ ಅಧಿಕಾರಿಯ ಮಗಳೂ ನಮ್ಮ ಜೊತೆಯಲ್ಲಿದ್ದಳು. ಥಟ್ಟನೆ ಆ ಹುಡುಗಿ ಸಂತೋಷದಿಂದ "ಅಂಕಲ್ ನೋಡಿದಿರಾ, ಅವರೆಲ್ಲ ವಾಸಿಸುತ್ತಿದ್ದ ಸ್ಥಳದಿಂದ ಹೊಗೆ ಮೇಲೇಳುತ್ತಿದೆ. ಎಲ್ಲರೂ ಬೆಂದು ಹೋಗಿರಬಹುದು; ಸತ್ತಿರಬಹುದು......"

22 ವರ್ಷ ಪ್ರಾಯದ ಆ ಹುಡುಗಿಯ ಮುಖವನ್ನು ನಾನು ಒಂದು ನಡುಕದೊಡನೆ ನೋಡಿದೆ. ಆ ರಾತ್ರಿ ನನಗೆ ನಿದ್ರಿಸಲು ಸಾಧ್ಯವಾಗಲಿಲ್ಲ; ಮುಂದಿನ ಕೆಲವು ರಾತ್ರಿಗಳೂ ಕೂಡಾ." (ಪುಟ 1)

ಗುಜರಾತ್‌ನಲ್ಲಿ ಗೋಧ್ರಾ ಘಟನೆಗೆ ಪ್ರತೀಕಾರವಾಗಿ ಮುಸ್ಲಿಮರ ಮೇಲೆ ನಡೆದ ಹಿಂಸೆ, ತನ್ನ ಅತ್ಯಂತ ಉಗ್ರ ರೂಪದಲ್ಲಿ ಕಾಣಿಸಿಕೊಂಡದ್ದು ಅಹಮದಾಬಾದ್‌ನಲ್ಲಿ. ಶ್ರೀಕುಮಾರ್ ನಗರದ ಅತ್ಯುನ್ನತ ಪೊಲೀಸ್ ಅಧಿಕಾರಿಯಾಗಿ, ಈ ಹಿಂಸೆಯಲ್ಲಿ ರಾಜ್ಯದ ಮುಖ್ಯಮಂತ್ರಿ ನರೇಂದ್ರ ಮೋದಿ ಮತ್ತು ಅವನ ಮಂತ್ರಿ ಮಂಡಲದ ಹಲವರು ಶಾಮೀಲಾಗಿದ್ದುದನ್ನು ಹತ್ತಿರದಿಂದ ನೋಡಿದ್ದರು ಮಾತ್ರವಲ್ಲ ಆ ಬಗ್ಗೆ ತನ್ನ ಜೀವವನ್ನೇ ಪಣಕ್ಕೊಡ್ಡಿ ದಾಖಲೆಗಳನ್ನೂ ಸಾಕ್ಷ್ಯಾಧಾರಗಳನ್ನೂ ಸಂಗ್ರಹಿಸಿದ್ದರು; ವಿವರಗಳನ್ನು ತನ್ನ ಡೈರಿಯಲ್ಲೂ ಬರೆದಿಟ್ಟುಕೊಂಡಿದ್ದರು. ರಾಜ್ಯದಲ್ಲಿ ಹಿಂಸೆಯ ಸರಣಿ ಪ್ರಾರಂಭವಾದ ಮುನ್ನಾ ದಿನ ಅಂದರೆ 2002 ಫೆಬ್ರವರಿ 27 ರಂದು ನರೇಂದ್ರ ಮೋದಿ, ಉನ್ನತ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ "ಪ್ರತೀಕಾರದಲ್ಲಿ ತೊಡಗುವ ಹಿಂದೂಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಕೂಡದು" ಎಂದು ಮೌಖಿಕ ಆದೇಶ ನೀಡಿದ್ದನು. ಮೋದಿ ಲಿಖಿತ ಆದೇಶ ನೀಡಲಿಲ್ಲ; ಹಾಗೆ ಮಾಡುವುದು ಕ್ರಿಮಿನಲ್ ಕಾನೂನು ಹಾಗೂ ಸಂವಿಧಾನದ ಉಲ್ಲಂಘನೆಯಾಗುತ್ತದೆ ಎಂದು ಅವನಿಗೆ ಗೊತ್ತಿತ್ತು. ಆದರೆ ಶ್ರೀಕುಮಾರ್‌ರಂತಹ ದಿಟ್ಟ ಅಧಿಕಾರಿಗಳಿಂದಾಗಿ ಹಿಂಸೆಗೆ ಮೋದಿ ಮತ್ತು ಬಿಜೆಪಿಯ ಇತರ ನಾಯಕರು ಕೊಟ್ಟ ಸಮ್ಮತಿ ಮತ್ತು ಪ್ರೋತ್ಸಾಹ ಈಗ ಜಗಜ್ಜಾಹೀರಾಗಿದೆ.



"ಧರ್ಮದ ಹೆಸರಿನಲ್ಲಿ"
-ಮಲಯಾಳಂ ಮೂಲ: ಆರ್.ಬಿ. ಶ್ರೀಕುಮಾರ್. ಅನುವಾದ: ಸಾರಾ ಅಬೂಬಕ್ಕರ್. ಚಂದ್ರಗಿರಿ ಪ್ರಕಾಶನ, 2-21-1631/2 ಮೈಕ್ರೋವೇವ್ ಸ್ಟೇಷನ್ ರಸ್ತೆ, ಮಂಗಳೂರು 575006, 2009, ಪುಟ 88, ಬೆಲೆ ರೂ. 70.00

ಇದಕ್ಕೆ ಪ್ರತಿಯಾಗಿ ಅಹಮದಾಬಾದ್‌ನ ಪೊಲೀಸ್ ಕಮಿಷನರ್ ಪಿ.ಸಿ. ಪಾಂಡೆ ನಡೆಯುತ್ತಿದ್ದ ಹಿಂಸಾಕೃತ್ಯಗಳನ್ನು ಪೊಲೀಸರು ಸುಮ್ಮನೆ ನಿಂತು ನೋಡುತ್ತಿದ್ದುದನ್ನು ಟಿವಿ ಕ್ಯಾಮೆರಾಗಳ ಎದುರೇ ಹೀಗೆ ಸಮರ್ಥಿಸಿದ, "ಹಿಂದೂಗಳ ಮನಸ್ಸಿನಲ್ಲಾದ ಗಾಯಗಳ ನೋವಿನಲ್ಲಿ ಪೊಲೀಸರೂ ಪಾಲುಗೊಳ್ಳುತ್ತಾರೆ. ಆದುದರಿಂದ ಹಿಂದೂಗಳ ವಿರುದ್ಧ ಕ್ರಮ ಕೈಗೊಳ್ಳಲು ಮಿತಿ ಇದೆ." (ಪುಟ2).

ಪಿ.ಸಿ. ಪಾಂಡೆಗೆ ತಾನು ಮತ್ತು ತನ್ನ ಕೈಕೆಳಗಿನ ಸಿಬ್ಬಂದಿ, ಸಂಬಳ ಪಡೆಯುವುದು ಪ್ರಜೆಗಳಿಗೆ ಜೀವರಕ್ಷಣೆ ನೀಡುವುದಕ್ಕೆ ಎಂಬುದೇ ಮರೆತುಹೋಗಿತ್ತು. ಪಾಂಡೆಯಂತಹ ಸಂವಿಧಾನಬದ್ಧ ಹೊಣೆಗಾರಿಕೆಗಳು ಇರುವ ಪೊಲೀಸ್ ಅಧಿಕಾರಿಯೇ ಯಾಕೆ, ಮನುಷ್ಯ ಮಾತ್ರನಾದ ಯಾರೂ "ಹಿಂದೂಗಳ ಮನಸ್ಸಿನಲ್ಲಾದ ಗಾಯ" ಮತ್ತು "ಹಿಂದೂಗಳ ಪ್ರತೀಕಾರ" ಎಂಬ ತರ್ಕವನ್ನು ಎತ್ತಿ ಹಿಡಿಯಕೂಡದು. ಗೋಧ್ರಾ ಘಟನೆಯಲ್ಲಿ 59 ಜನ ರಾಮಭಕ್ತ ಹಿಂದೂಗಳು ಜೀವಂತ ಸುಟ್ಟು ಹೋದದ್ದರಿಂದ ಹಿಂದೂ ಮನಸ್ಸಿಗೆ ನೋವಾಗಿರುವುದು ಹೌದು. ಹಿಂದೂಗಳಷ್ಟೇ ಯಾಕೆ, ದೇಶದ ಇತರ ಧರ್ಮಗಳ ಪ್ರಜೆಗಳಿಗೂ ಅದರಿಂದ ನೋವಾಗಿದೆ. ಹಿಂದೂಗಳ ಮನಸ್ಸಿಗೆ ಗಾಯವಾದರೆ, ಅಮಾಯಕ ಮುಸ್ಲಿಮರ ದೇಹಗಳ ಮೇಲೆ ಯಾಕೆ ಹಿಂಸೆ ನಡೆಸಬೇಕು? "ಹಿಂದೂಗಳ ಮನಸ್ಸಿಗೆ ನೋವಾಗಿದೆ" ಎಂಬ ಕಾರಣಕ್ಕೆ ಮುಸ್ಲಿಮರ ದೇಹಗಳ ಮೇಲೆ ಹಿಂಸೆ ಎಸಗುವುದು ಹಾಗೂ ಅವರ ಆಸ್ತಿಪಾಸ್ತಿ ನಾಶಗೊಳಿಸುವುದು, ರಾಮಜನ್ಮಭೂಮಿ ಚಳವಳಿಯ ಉದ್ದಕ್ಕೂ ನಡೆದುಕೊಂಡುಬಂದಿದೆ. ದೇಶಾದ್ಯಂತ ಮುಸ್ಲಿಮರ

ಪುಸ್ತಕ ಪರಿಚಯ

ಮೇಲೆ ನಡೆದ ಈ ದೈಹಿಕ, ಜೈವಿಕ ಮತ್ತು ಭೌತಿಕ ಆಕ್ರಮಣದಲ್ಲಿ ಸಾವಿರಾರು ಜನ ಜೀವ ಕಳೆದುಕೊಂಡಿದ್ದಾರೆ; ಮಾರಣಾಂತಿಕವಾಗಿ ಗಾಯಗೊಂಡಿದ್ದಾರೆ; ಶಾಶ್ವತವಾಗಿ ಊನಗೊಂಡಿದ್ದಾರೆ ಹಾಗೂ ಲಕ್ಷಾಂತರ ಜನ ತಮ್ಮ ಮನೆ ಮಾರು ಕಳೆದುಕೊಂಡು ತಮ್ಮ "ಸ್ವಂತ ಅಂಗಳದಲ್ಲಿ ನಿರಾಶ್ರಿತರಾಗಿದ್ದಾರೆ." (ಪುಟ 21). ಗುಜರಾತ್ ಹಿಂಸಾಕಾಂಡ ಒಂದರಲ್ಲೇ 1 ಲಕ್ಷ 70 ಸಾವಿರ ಜನ ಮುಸ್ಲಿಮರು ನಿರಾಶ್ರಿತರಾದರು. ತಮ್ಮ ಮನಸ್ಸುಗಳಿಗಾದ ಗಾಯಗಳ ಬಗ್ಗೆ ಇಷ್ಟು ಸೂಕ್ಷ್ಮಜ್ಞರಾಗಿರುವ ಅಡ್ವಾಣಿ, ಮೋದಿಗಳಂತಹ "ಹಿಂದೂ"ಗಳಿಗೆ ಮುಸ್ಲಿಮರ ದೇಹಗಳು ಹಾಗೂ ಅವರ ಬದುಕಿನ ಭೌತಿಕ ಹಂದರದ ಮೇಲೆ ನಡೆದ ಆಕ್ರಮಣದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ; ದಯೆಯೇ ಇಲ್ಲದ ಧರ್ಮ ಅವರದ್ದು. ಅವರು ಪ್ರತಿಪಾದಿಸುವ "ಹಿಂದೂತ್ವ"ದ ಕೇಂದ್ರದಲ್ಲಿಯೇ ಅಸಾಧಾರಣ ಕ್ರೌರ್ಯವಿದೆ. ಶ್ರೀಕುಮಾರ್ ತನ್ನ ಪುಸ್ತಕದ ಪ್ರತಿ ಪುಟದಲ್ಲೂ "ಹಿಂದೂತ್ವದ" ಈ ಅಮಾನುಷತೆಯನ್ನು ಕಾಣಿಸುತ್ತಾರೆ. ಹಿಂದೂಗಳ ಮನಸ್ಸಿಗೆ ಗಾಯವಾಗಿದೆ ಎಂದು ಮುಸ್ಲಿಮರನ್ನು ಹೊಡೆದು ಸಾಯಿಸುವಾಗ ಈ ಮುಸ್ಲಿಮರ ಮನಸ್ಸುಗಳು ಏನಾದವು? ಅಹಮದಾಬಾದ್‌ನ ನರೋ ದಾಪಾಟಿಯಾದ ಕಗ್ಗೊಲೆ, ಬರೋಡದ ಬೆಸ್ಟ್ ಬೇಕ ಪ್ರಕರಣ, ಗುಲ್ಬರ್ಗ್ ಹೌಸಿಂಗ್ ಸೊಸೈಟಿಯ ಎಹ್ಸಾ ಜಾಫ್ರಿ (ಮಾಜಿ ಲೋಕಸಭಾ ಸದಸ್ಯ) ಮತ್ತು ಇತ ನಿವಾಸಿಗಳ ಹತ್ಯೆ ಮುಂತಾದ ಘೋರ ಪ್ರಸಂಗಗಳ ವರ್ಣಿಸುವಾಗ ಶ್ರೀಕುಮಾರ್ ಭಾವುಕರಾಗುವುದಿ ಭಾವುಕತೆ, ದುರಂತವನ್ನು ಚಿಲ್ಲರೆಗೊಳಿಸುತ್ತದೆ. ಮನುಷ್ಯ ನೆಲೆಯೂ ದೇಹವೇ ಆಗಿರುವುದರಿಂದ ದೇಹ ಪವಿ ಅದರೊಳಗಿನ ಜೀವ ಪವಿತ್ರ ಎಂಬ ವಿವೇಕ ಕಳಕೊಂ ವರು ನಡೆಸಿದ ಕೃತ್ಯಗಳು ಅವು ಎಂಬಂತೆ ಶ್ರೀಕುಮಾ ಈ ಘಟನೆಗಳನ್ನು ನಿರೂಪಿಸುತ್ತಾರೆ; ಆಳವಾದ ಧಾರ್ಮಿ ಶ್ರದ್ಧೆಯುಳ್ಳ ಹಿಂದೂವಾಗಿದ್ದುಕೊಂಡೇ 1992-93 ಮುಂಬಯಿ ಹಿಂಸಾಕಾಂಡದಲ್ಲಿ "ಹಿಂದೂತ್ವವಾದಿ"ಗಳ ವಹಿಸಿದ ಪಾತ್ರದ ಬಗ್ಗೆ ವಸ್ತುನಿಷ್ಠ ವರದಿ ನೀಡಿ ನ್ಯಾಯಮೂರ್ತಿ ಶ್ರೀಕೃಷ್ಣರ ಹಾಗೆಯೇ ಶ್ರೀಕುಮಾ ಕೂಡ ಶ್ರದ್ಧಾವಂತ ಹಿಂದೂವಾಗಿದ್ದೇ (ಬಹುಶಃ ಕಾರಣದಿಂದಲೇ) ಗುಜರಾತ್‌ನಲ್ಲಿ ಹಿಂದೂತ್ವವಾದಿಗ ಪಾಪಕೃತ್ಯಗಳ ಬಗ್ಗೆ ಸಾಕ್ಷಿ ನುಡಿಯುತ್ತಾರೆ.

ಶ್ರೀಕುಮಾರ್ ತನ್ನ ಪುಸ್ತಕದಲ್ಲಿ ಒಂದೆಡೆ, ಗುಜರಾ ಹಿಂಸೆಯನ್ನು "ಯೋಜನೆ ರೂಪಿಸಿ ಜನಸಾಮಾನ್ಯರಿಂ ನಡೆಸಿದ ಭೀಕರ ಕೃತ್ಯ" ಎಂದು ವರ್ಣಿಸುತ್ತಾರೆ. ಈ ಮಾತು ಎಷ್ಟು ಸರಳವಾಗಿದೆಯೋ ಅಷ್ಟೇ ಭಯಾನಕವೂ ಆಗಿದೆ. ಅಧಿಕಾರಶಾಹಿಯ ದಬ್ಬಾಳಿಕೆ ಅಥವಾ ಪೊಲೀಸ ದೌರ್ಜನ್ಯವನ್ನು ಎದುರಿಸಬಹುದು; ವಿದೇಶಿ ಆಕ್ರಮ ವನ್ನೂ ಕೂಡ ಹಿಮ್ಮೆಟ್ಟಿಸಬಹುದು. ಆದರೆ ನಿಮ ನೆರೆಹೊರೆಯವರೇ ನಿಮ್ಮನ್ನು ಹಲ್ಲು ಕಚ್ಚಿ ದ್ವೇಷಿಸಲ ಆರಂಭಿಸಿದರೆ? ಅಷ್ಟಕ್ಕೂ ಸುಮ್ಮನಾಗದೆ ನಿಮ ಮನೆಯನ್ನು ಸುತ್ತುವರಿದು, ನಿಮ್ಮ ಮನೆಯ ಗ್ಯಾಸ ಸಿಲಿಂಡರ್‌ನ್ನೇ ಹೊರಗೆಳೆದು ಹೊತ್ತಿಸಿದರೆ? ನಿಮ ಕಣ್ಣೆದುರೇ ನಿಮ್ಮ ಮಕ್ಕಳನ್ನೋ ಹೆತ್ತವರನ್ನೋ ಕೊ ಮಾಡಿದರೆ? ಮನೆಯ ಹೆಂಗಸರನ್ನು ಅವಮಾನಿಸಿದರೆ ಮುಸ್ಲಿಮರು ಗುಜರಾತ್‌ನಲ್ಲಿ, ಮುಂಬೈನಲ್ಲಿ ಭಾಗಲ್ಪುರುಗಳಲ್ಲಿ ಇದನ್ನೆಲ್ಲ ಅನುಭವಿಸಿದ್ದಾರೆ. ಈ ಘೋರ ಹಿಂಸೆಯನ್ನು "ಕೋಮುಗಲಭೆ" ಎಂದು ಕನ್ನಡ ಮಾಧ್ಯಮಗಳು ಕರೆಯುತ್ತಿರುವುದು ಒಂದು ಮಾನಗೆಟ್ಟ ಹಸಿಸುಳ್ಳು. ಅಸಹಾಯಕರ ಮೇಲೆ ನಡೆಯುವ ಗುಂಪು ಹಿಂಸೆ ಗಲಭೆ ಹೇಗಾಗುತ್ತದೆ? ಗಲಭೆಯಲ್ಲಿ ಸಮಬಲವಾದ ಎರಡು ತಂಡಗಳು ಇರಬೇಕಲ್ಲವೆ? ಗುಜರಾತ್‌ನಲ್ಲಿ, ಮುಂಬಯಿಯಲ್ಲಿ, ಅಷ್ಟೇ ಯಾಕೆ, ಅಡ್ವಾಣಿಯ ರಥಯಾತ್ರೆಯ ನಂತರ ದೇಶದ ಹೆಚ್ಚಿ ಊರುಗಳಲ್ಲಿ, ಕರ್ನಾಟಕದ ಕರಾವಳಿಯಲ್ಲಿ ಸಹ ನಡೆದಿರುವುದು ಕೋಮು ಗಲಭೆಗಳಲ್ಲ; ಅವ ಅಸಹಾಯಕ ಮುಸ್ಲಿಮರ ಮೇಲೆ ಹಿಂದೂತ್ವ ಪರಿವಾರ ನಡೆಸಿದ ಗುಂಪು ಹಿಂಸೆ. ಓರ್ವ ಹಿರಿಯ ಪೊಲೀಸ ಅಧಿಕಾರಿಯಾಗಿ ಶ್ರೀ ಕುಮಾರ್ ಗುಜರಾತ್ ಹಿಂಸಾಕಾಂಡದ ಬಗ್ಗೆ ಕಂಡು ಕೊಂಡದ್ದೂ ಇದೇ ಸತ್ಯವನ್ನು

ಶ್ರೀಕುಮಾರ್ ಅವರ ಹೆಚ್ಚುಗಾರಿಕೆಯೆಂದರೆ, ಅವರು ತನ್ನ ಸೇವಾವಧಿಯಲ್ಲಿ ಕಣ್ಣಾರೆ ಕಂಡದ್ದನ್ನು ತಮ್ಮೊಳಗೇ ಬಚ್ಚಿಟ್ಟುಕೊಳ್ಳದೆ ಸಾರ್ವಜನಿಕರ ಎದುರು ಅದನ್ನು ಬಹಿರಂಗಪಡಿಸುವ ಧೈರ್ಯ ತೋರಿಸಿದ್ದು. ತನ್ನ ಮೇಲಧಿಕಾರಿಗಳು ಮತ್ತು ಮುಖ್ಯಮಂತ್ರಿಯ ವಿನಂತಿ, ಎಚ್ಚರಿಕೆ-ಇದು ಯಾವುದೂ ನಡೆಯದಿದ್ದಾಗ ಬೆದರಿಕೆ ಮತ್ತು ಸೇವಾಹಿಂಬಡ್ತಿಗಳಿಗೂ ಮಣಿಯದೆ, ಶ್ರೀಕುಮಾರ್ ಈಗಾಗಲೇ ಸುಪ್ರೀಮ್ ಕೋರ್ಟು ಮತ್ತು ವಿಶೇಷ ತನಿಖಾ ತಂಡಗಳ ಎದುರು ಗುಜರಾತ್‌ನ ಘಟನಾವಳಿ ಕುರಿತು ಅಫಿಡವಿಟ್‌ಗಳನ್ನು ಸಲ್ಲಿಸಿದ್ದಾರೆ. ಈ ಅಫಿಡವಿಟ್‌ಗಳು ಓರ್ವ ಹಿರಿಯ ಪೊಲೀಸ್ ಅಧಿಕಾರಿಯ ಪ್ರಮಾಣ ವಚನಗಳಾಗಿರುವುದರಿಂದ ನ್ಯಾಯಾಲಯ ಇವನ್ನು ಸಾಕ್ಷಿ ಎಂದೇ ಪರಿಗಣಿಸಬೇಕಾಗುತ್ತದೆ. ಹೀಗೆ ಶ್ರೀಕುಮಾರ್ ನಿವೃತ್ತರಾದ ಮೇಲೂ ನರೇಂದ್ರ ಮೋದಿ ಮತ್ತು ಅವನ ಪಟಾಲಂಗೆ ದುಃಸ್ವಪ್ನದ ಹಾಗೆ ಕಾಡುತ್ತಿದ್ದಾರೆ. ಈಗ ಸುಪ್ರೀಮ್‌ಕೋರ್ಟ್, ನಿವೃತ್ತ ಸಿಬಿಐ ಮುಖ್ಯಸ್ಥ ಆರ್.ಕೆ. ರಾಘವನ್ ನೇತೃತ್ವದಲ್ಲಿ ಗುಜರಾತ್ ಹಿಂಸಾಕಾಂಡ ಹಾಗೂ ಅದರಲ್ಲಿ ನರೇಂದ್ರ ಮೋದಿ ವಹಿಸಿದ ಪಾತ್ರವನ್ನು ವಿಚಾರಣೆ ಮಾಡಲು ಒಂದು ವಿಶೇಷ ತನಿಖಾ ತಂಡವನ್ನು ನೇಮಿಸಿದೆ. ಗುಜರಾತ್‌ನಲ್ಲಿ ನೊಂದ ಮುಸ್ಲಿಮರಿಗೆ ನ್ಯಾಯ ಸಿಗುತ್ತದೋ ಇಲ್ಲವೋ, ಆ ನಿಟ್ಟಿನಲ್ಲಿ ಈಗ ಪ್ರಯತ್ನಗಳಂತೂ ಪ್ರಾರಂಭವಾಗಿದೆ. ಇದರಲ್ಲಿ ಶ್ರೀಕುಮಾರ್ ಮತ್ತು ತೀಸ್ತಾ ಸೆಟಲ್‌ವಾಡ್ ವಹಿಸಿದ ಪಾತ್ರದ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ.

ಸಾರಾ ಅಬೂಬಕ್ಕರ್ ಅವರ ಅನುವಾದ ಸಮರ್ಪಕ ವಾಗಿದ್ದರೂ ಅಲ್ಲಲ್ಲಿ ಕನ್ನಡದ ಜಾಯಮಾನಕ್ಕೆ ಒಗ್ಗದ ಪದ ಮತ್ತು ವಾಕ್ಯದ ನಮೂನೆಗಳು ಕಾಣಿಸಿಕೊಳ್ಳುತ್ತವೆ. ಆದರೆ ಅದೇನೂ ಅಂತಹ ಮಹತ್ವದ ಸಂಗತಿ ಅಲ್ಲ. ಇಂತಹ ಒಂದು ಮೌಲಿಕ ಕೃತಿಯನ್ನು ಅನುವಾದಿಸಿದ ಲೇಖಕಿ ನಮ್ಮ ಕೃತಜ್ಞತೆಗೆ ಪಾತ್ರರು.

● ಜಿ. ರಾಜಶೇಖರ

ಹೀಗೊಂದು ಮರಣ ಪತ್ರ



"ನನ್ನ ದೇಹದ ಅಂತಿಮ ವಿಲೇವಾರಿಗೆ ಯಾವ
ರೋಹಿತರೂ ಬರಬಾರದು. ನನಗೆ ಅರಿಷಿಣ ಕುಂಕುಮ
ಚ್ಚಬಾರದು. ನನ್ನ ಮೃತದೇಹದ ದರ್ಶನಕ್ಕೆ ಯಾರೂ
ಬಾರದು. ನನ್ನ ದೇಹವನ್ನು ಮೆಡಿಕಲ್ ಕಾಲೇಜಿನ
ಶೋಧನಾ ವಿಭಾಗಕ್ಕೆ, ಕಣ್ಣುಗಳನ್ನು ಕಣ್ಣಿನ ಬ್ಯಾಂಕಿಗೆ
ಡಬೇಕು. ನನ್ನ ನಿಧನದ ಸುದ್ದಿಯನ್ನು ಪತ್ರಿಕೆಗಳಿಗೆಲ್ಲ
ಡಬಾರದು. ನನ್ನ ಜೀವಿತಾವಧಿಯಲ್ಲೇ ಸಾಕಷ್ಟು
ವನ್ನು ತಿಂದಿರುವೆನಾದ್ದರಿಂದ ನನ್ನ ಬಾಯಲ್ಲಿ
ುವಿಟ್ಟು ಅಕ್ಕಿ ಕಾಳು ಹಾಕಬಾರದು. ನಾನು ಬದುಕಿ
ದಲೇ ಅನಾಥಾಶ್ರಮದ ಮಕ್ಕಳಿಗೆ ನಿಯಮಿತವಾಗಿ
ತ ಹಾಕಿರುವೆನಾದ್ದರಿಂದ ನನ್ನ ನಿಧನಾನಂತರ ನನ್ನನ್ನು
ಸಂತಕ್ಕೆ ಕಳುಹಿಸುವ ನೆಪದಲ್ಲಿ ಇನ್ಯಾರೂ
ರಿಭೋಜನ ಮಾಡುವ ಅಗತ್ಯವಿಲ್ಲ. ಯಾರೋ
ಬಂಧಿಕರು ಹಠಮಾಡಿದರು ಅಂತ ಅಥವಾ
ರಿಗಾದರೂ ಬೇಜಾರಾಗುತ್ತದೆ ಅಂತ ಪುರೋಹಿತರನ್ನು
ಮ ವೇಳೆ ಕರೆ ತಂದು ವಿಧಿವಿಧಾನ ಮಾಡಿದರೆ
ಖಂಡಿತಾ ಅವರೆಲ್ಲರನ್ನು 'ಕಾಡು'ತ್ತೇನೆ."


–ಮೊನ್ನೆ ತೀರಿಕೊಂಡ ಲೇಖಕಿ ಬಿ.ಎಸ್. ವೆಂಕಟ
ಅವರ ಈ ಮರಣ ಪತ್ರವನ್ನು ಬ್ಲಾಗ್ ಒಂದರಲ್ಲಿ
ದಿದೆ.

ಇದನ್ನು ಓದಿದಾಗ ನನಗನ್ನಿಸಿದ್ದೇನೆಂದರೆ ವೆಂಕಟ
ಯವರು ಯಾವುದೋ ಲೇಖನವನ್ನು ಬರೆಯಲು
ಂತವನ್ನು ಬಯಸಿ ತಮ್ಮ ಕೊಠಡಿಯ ಬಾಗಿಲನ್ನು
ಚ್ಚಿಕೊಂಡ ಹಾಗೆ ಈ ಜಗತ್ತಿನಿಂದ ಯಾವುದೇ
ಗದ್ದಲವಿಲ್ಲದೆ ನಿರ್ಗಮಿಸಿದರು ಎಂದು. ಹಾಗೆ
ಯುವಾಗ ತಾನು ಬದುಕಿದ್ದಂತೆಯೇ ನಿರ್ಗಮಿಸಿದರು
ಕ ಎಂದು.

ಯಾರೇ ಆಗಲಿ, ಅವರು ಈ ಜಗತ್ತಿನಲ್ಲಿ ಹೇಗೆ
ಕಿದರು ಎಂಬುದು ಎಷ್ಟು ಮುಖ್ಯವೋ ಅಷ್ಟೇ
ಅವರನ್ನು ಹೇಗೆ ಬೀಳ್ಕೊಡಲಾಯಿತು ಎಂಬುದು
ಕ.

ಇದರ ಬಗ್ಗೆ ಯೋಚಿಸುತ್ತಿದ್ದಾಗ ನನಗೆ ನೆನಪಾಗಿದ್ದು ಅಪ್ಪ. ಅವತ್ತು ದೆಹಲಿಯಿಂದ ಬಂದು ಅಪ್ಪನನ್ನು ನೋಡಿದಾಗ ಅವರು ಟಾಟಾ ಹೇಳುತ್ತಿರುವಂತೆ ಒಂದು ಕೈ ಮೇಲಕ್ಕೆ ಚಾಚಿತ್ತು. ಅವರು ತಮ್ಮ ಫೇವರೆಟ್ ಆದ ನೀಲಿ ಬಣ್ಣದ ಸ್ವೆಟರ್ ಧರಿಸಿದ್ದರು. ಕಣ್ಣೀರು ತುಂಬಿದ್ದ ನನ್ನ ಕಣ್ಣುಗಳಿಗೆ ಏನೋ ಸರಿ ಇಲ್ಲ ಅನಿಸುತ್ತಿತ್ತು. ಮರುಕ್ಷಣವೇ ಅದೇನೆಂದು ಗೊತ್ತಾಯಿತು. ಅದೇ ಕ್ಷಣ ನನ್ನ ತಂಗಿ ಬೇಬಿ ಕೂಡ "ವಿಭೂತಿಯನ್ನು ಅಳಿಸು ಗೌರು" ಅಂದಳು. ಅವತ್ತು ನಮ್ಮ ಮನೆಗೆ ಬಂದಿದ್ದ ಅದ್ಯಾರೋ ಅಪ್ಪನ ಹಣೆಗೆ ವಿಭೂತಿ ಬಳಿದಿದ್ದರು. ತಣ್ಣಗಾಗಿದ್ದ ಅಪ್ಪನನ್ನು ಮುಟ್ಟಲಾಗದೇ ಬೇಬಿ ನನಗಾಗಿ ಕಾದಿದ್ದು ನಾನು ಬಂದಕೂಡಲೇ ಹಾಗೆ ಹೇಳಿದ್ದಳು. ದುಃಖದ ಜೊತೆಗೆ ನನಗೆ ಕೋಪವೂ ಬಂತು. ನನ್ನಪ್ಪ ಎಂದೂ ವಿಭೂತಿ (ಚಿಕ್ಕವರಿದ್ದಾಗ ಹೊರತುಪಡಿಸಿ) ಧರಿಸಿದವರಲ್ಲ, ಪೂಜೆ ಮಾಡಿದವರಲ್ಲ, ಲಿಂಗ ಕಟ್ಟಿಕೊಂಡವರಲ್ಲ, ಅಂತಹ ನನ್ನ ಅಪ್ಪ, ಅಸಹಾಯಕರಾಗಿದ್ದಾಗ, ಪ್ರತಿಭಟಿಸದಂತಾಗಿದ್ದಾಗ ಅವರ ಹಣೆಗೆ ವಿಭೂತಿ ಹಚ್ಚಿದ್ದರು. ಅದನ್ನು ಕೂಡಲೇ ಒರೆಸಿದ ನಾನು "ನನ್ನಪ್ಪನನ್ನು ಯಾರೂ ಮುಟ್ಟಬೇಡಿ, ಇಂತಹದ್ದನ್ನೆಲ್ಲ ಮಾಡಬೇಡಿ" ಎಂದು ಆರ್ಭಟಿಸಿದ್ದೆ.

ಆದರೂ ಅದೆಲ್ಲ ಅಲ್ಲಿಗೇ ನಿಲ್ಲಲಿಲ್ಲ. ಮರುದಿನ ಆಗಮಿಸಿದ ಅಪ್ಪನ ಅಣ್ಣ ಶಿವರುದ್ರಪ್ಪ ಮತ್ತು ಇತರೆ ಸಂಬಂಧಿಗಳು ಅಪ್ಪನಿಗೆ ಅವಮಾನ ಮಾಡದಂತೆ ತಡೆಯುವುದೇ ಒಂದು ಕೆಲಸವಾಗಿ ಹೋಯಿತು. ಅವರ್ಯಾರೂ ಅಪ್ಪನಿಗೆ ಪೂಜೆ ಮಾಡದಂತೆ, ಕುಂಕುಮ ವಿಭೂತಿ ಹಚ್ಚದಂತೆ ನಾವೆಲ್ಲರೂ ಕಟ್ಟೆಚ್ಚರ ವಹಿಸಿದೆವು. ಅಪ್ಪನನ್ನು ತೋಟಕ್ಕೆ ಕರೆದುಕೊಂಡು ಹೋದಾಗ ನೋಡುತ್ತೇವೆ, ಅಲ್ಲಿ ಯಾರೋ ಆಗಲೇ ಒಂದು ಚಟ್ಟವನ್ನು ಕಟ್ಟಿದ್ದರು. ವಾಹನದಿಂದ ಅಪ್ಪನನ್ನು ಇಳಿಸಿ ಆ ಚಟ್ಟದಲ್ಲಿ ಎತ್ತಿಕೊಂಡು ಹೋಗುವ ಉದ್ದೇಶ ಅವರದ್ದಾಗಿತ್ತು. ಕೂಡಲೇ ಆ ಚಟ್ಟವನ್ನು ನನ್ನ ಅಪ್ಪನ ಹತ್ತಿರ ತರಕೂಡದು ಎಂದು ನಾನು ಮತ್ತು ಬೇಬಿ ಹೇಳಿದೆವು. ಇತ್ತ ಅಪ್ಪ ಇನ್ನೂ ತೋಟದ ಮನೆಯಲ್ಲಿದ್ದಾಗ ಅತ್ತ ಒಂದು ಮಾವಿನ ಮರದಡಿ ತೋಡಿದ್ದ ಗುಂಡಿಯ ಸುತ್ತ ಪೂಜೆಗಳು ಪ್ರಾರಂಭವಾದವು. ಅದನ್ನೆಲ್ಲ ಕಂಡು ರವೀಂದ್ರ ರೇಶ್ಮೆಯವರಿಗೆ ಆಘಾತವಾಯಿತು. ನಾನಿದ್ದಲ್ಲಿಗೆ ಬಂದು "ಲಂಕೇಶರನ್ನು ಲಿಂಗಾಯತರ ಸಂಪ್ರದಾಯದಂತೆ ಬೀಳ್ಕೊಡುತ್ತಿದ್ದೀರಾ? ಅವರು ಇದನ್ನೆಲ್ಲ ವಿರೋಧಿಸುತ್ತಿದ್ದರು" ಎಂದರು. "ಇಲ್ಲ ಆ ಜಾಗಕ್ಕೆ ಸಿಂಪಲ್ಲಾದ ಪೂಜೆ ಮಾಡಬೇಕೆಂಬುದು ಅಮ್ಮನ ಆಶೆ, ಅಷ್ಟೇ. ಇದರಲ್ಲಿ ಸಂಪ್ರದಾಯ ಇಲ್ಲ. ಈಗಾಗಲೇ ಅವರಿಗೆಲ್ಲ ಹೇಳಿದ್ದೇನೆ. ನನ್ನಪ್ಪನನ್ನು ಅವರು ಮುಟ್ಟಬಾರದು ಎಂದು. ಇನ್ನು ಲಿಂಗಾಯತರ ಪದ್ಧತಿ ಅಂತೆಲ್ಲ ಏನೂ ಇಲ್ಲ" ಎಂದು ಸ್ಪಷ್ಟಪಡಿಸಿದೆ. ಆದರೆ ನಾನು ಹೇಳಿದಷ್ಟು ಅವತ್ತಿನ ಪರಿಸ್ಥಿತಿ ಸರಳವಾಗಿರಲಿಲ್ಲ.



ನನ್ನ ದೊಡ್ಡಪ್ಪ ಮತ್ತು ಅವರ ಮಗ ನಾಗರಾಜು "ಇದೇನಿದು, ಲಿಂಗಾಯತರು ತೋಡುವಂತೆ ಗುಂಡಿಯನ್ನು ತೋಡಿಲ್ಲ" ಎಂದು ತಕರಾರು ಎತ್ತಿದರು. ಅದೆಲ್ಲ ಬೇಡ ಅಂದರೆ ಅವರು ಕೇಳಲು ಸಿದ್ಧರಾಗಿರಲಿಲ್ಲ. ಅದರಲ್ಲೂ ದೊಡ್ಡಪ್ಪ ಇದ್ದವರು ಇನ್ನೊಂದು ವಿಚಾರ ಕೈಗೆತ್ತಿಕೊಂಡರು. "ಹೀಗೆ ಅಂಗಾತ ಮಲಗಿಸುವುದು ಸರಿಯಲ್ಲ, ಕಾಲುಗಳನ್ನು ಮಡಚಿ ನಮ್ಮ ಸಂಪ್ರದಾಯದಂತೆ ಕೂರಿಸಿರಬೇಕು" ಎಂದರು. ಅಷ್ಟೊತ್ತಿಗಾಗಲೇ ಅಪ್ಪ ಹೋಗಿ 36 ಗಂಟೆಗಳಾಗಿದ್ದವು. ಆದ್ದರಿಂದ "ಏನು? ಅಪ್ಪನ ಕೈಕಾಲು ಮುರಿತೀರಾ? ಅಂತ ನಾನು ಕೇಳಿದರೆ ದೊಡ್ಡಪ್ಪ ಏನಂದಿದ್ದರು ಗೊತ್ತಾ "ಮುರುದ್ರೆ ನೋವಾಗಲ್ಲ." ಅದನ್ನು ಕೇಳಿ ನನಗೆ ಅಳಬೇಕೋ, ಕೋಪಗೊಳ್ಳಬೇಕೋ, ಗೊತ್ತಾಗಲಿಲ್ಲ. "ಅದೆಲ್ಲ ಗೊತ್ತಿಲ್ಲ. ಅಪ್ಪನ ನಂಬಿಕೆಗೆ ವಿರುದ್ಧವಾಗಿ ಯಾರೂ ಏನನ್ನೂ ಮಾಡುವಂತಿಲ್ಲ. ಆ ಜಾಗಕ್ಕೆ ನೀವೆಲ್ಲ ಪೂಜೆ ಮಾಡಿಸಲು ಬಿಟ್ಟಿದ್ದೇ ಹೆಚ್ಚು" ಎಂದು ಹೇಳಿ ಕೊನೆಗೂ ಅವರ ಬಾಯಿ ಮುಚ್ಚಿಸಿದ್ದೆ.

ಇನ್ನೇನು ಎಲ್ಲ ಮುಗಿಯಿತು. ಗುಂಡಿಗೆ ಮಣ್ಣು ಹಾಕಬೇಕು. ಆಗ ಗುಂಡಿಯಲ್ಲಿ ಅಪ್ಪನ ಪಕ್ಕ ನಿಂತಿದ್ದ ಒಬ್ಬ ಅದೆಲ್ಲಿಂದಲೋ ಲಿಂಗವೊಂದನ್ನು ಅಪ್ಪನ ಕತ್ತಿಗೆ ಕಟ್ಟಿದ. ಅದನ್ನು ನೋಡಿ ನನಗೆ ರೇಗಿತು. "ಅದನ್ನು ಬಿಚ್ಚು ಈಗಲೇ ಬಿಚ್ಚು" ಎಂದು ಅರಚಿದೆ. ಅದೇ ಹೊತ್ತಿಗೆ ದೊಡ್ಡಪ್ಪ ಕರೆದುಕೊಂಡು ಬಂದಿದ್ದ ತಮಟೆಯವರು ಜೋರಾಗಿ ಬಾರಿಸಲಾರಂಭಿಸಿದ್ದರು. ಸುತ್ತಮುತ್ತಲಿದ್ದವರೆಲ್ಲ ಜೋರಾಗಿ ಅಳುತ್ತಿದ್ದರು. ಆ ಗದ್ದಲದಲ್ಲಿ ನನ್ನ ಮಾತು ಕೇಳಿಸುವಂತಿರಲಿಲ್ಲ. ಬೇಬಿಗೆ ರೇಗಿಹೋಯಿತು. "ತಮಟೆಯವರಿಗೆ ನಿಲ್ಲಿಸಲು ಹೇಳಿ" ಎಂದು ಚೀರಿದಳು. ಅವಳೊಂದಿಗೆ ಪ್ರಕಾಶ್ ರೈ ಕೂಡ ದನಿಗೂಡಿಸಿದ್ದರಿಂದ ತಕ್ಷಣವೇ ಅವರು ತಮ್ಮ ಅಬ್ಬರವನ್ನು ನಿಲ್ಲಿಸಿದರು. ಗುಂಡಿಯಲ್ಲಿದ್ದವ ಅಪ್ಪನಿಗೆ ತೊಡಿಸಿದ್ದ ಲಿಂಗವನ್ನು ತೆಗೆಯಲು ಮತ್ತೆ ಹೇಳಿದಾಗ ಆತನಿಗೆ ಕೇಳಿಸಿತು: ಬೇರೆ ದಾರಿ ಇಲ್ಲದೆ ಅದನ್ನವನು ಬಿಚ್ಚಿದ. ಜಾತಿ ಸಂಪ್ರದಾಯದ ಮಾತು ಬದಿಗಿರಲಿ, ಅಪ್ಪನ ಸಂಪ್ರದಾಯವನ್ನಂತೂ ನಾವು ಪಾಲಿಸಿದೆವು. ಅದು ಹೇಗೆಂದರೆ ಅಪ್ಪನ ಸಂಪ್ರದಾಯದಲ್ಲಿ ಅತ್ಯಗತ್ಯವಾಗಿದ್ದ ಪೇಪರ್ ಮತ್ತು ಪೆನ್, ಸಿಗರೇಟ್ ಪ್ಯಾಕ್ ಮತ್ತು ಬೆಂಕಿಪೊಟ್ಟಣ, ಒಂದು ಬ್ಲಾಕ್ ಲೇಬಲ್ ವಿಸ್ಕಿ ಬಾಟಲ್, ಕುದುರೆ ರೇಸ್ ಪುಸ್ತಕ, ಇಸ್ಪೀಟು ಕಾರ್ಡ್‌ಗಳು, ಕಾದಂಬರಿ ಇತ್ಯಾದಿಗಳನ್ನೆಲ್ಲ ಅವರೊಂದಿಗೆ ಬೀಳ್ಕೊಟ್ಟೆವು.

ಇದೆಲ್ಲ ಮುಗಿದ ನಂತರ ಇನ್ನೊಂದು ಪ್ರಸಂಗ ನಡೆಯಿತು. ಮನೆಯವರಿಗೆ ಮಾತ್ರ ಅಪ್ಪನಿಗೆ ಇಷ್ಟವಾದ ತಿಂಡಿತಿನಿಸುಗಳನ್ನು ಮಾಡಿದ ಅಮ್ಮ ಅದನ್ನು ಅಪ್ಪನ ಸಮಾಧಿಗೂ ತೆಗೆದುಕೊಂಡು ಹೋದರು. ಅದ್ಯಾರೋ ಹೇಳಿದರು ಅಂತಲೋ ಅಥವಾ ಸಂಪ್ರದಾಯ ಹಾಗೆ ಮಾಡಬೇಕು ಅಂತಿದೆ ಎಂತಲೋ (ಅಮ್ಮನಿಗೂ ಸಂಪ್ರದಾಯಗಳಲ್ಲಿ ನಂಬಿಕೆ ಇಲ್ಲ) ಒಂದು ತಟ್ಟೆಯಲ್ಲಿ ಒಬ್ಬಟ್ಟು, ಚಿತ್ರಾನ್ನ ಇತ್ಯಾದಿಗಳನ್ನು ಇಟ್ಟು ಕಾಗೆಗಳು ಬಂದು ತಿನ್ನಲಿ ಎಂದು ನೋಡಿದರು. ಅದೆಷ್ಟೇ ಹೊತ್ತಾದರೂ ಕಾಗೆಗಳು ಆ ತಟ್ಟೆ ಇದ್ದ ಕಡೆ ಬರಲೇ ಇಲ್ಲ. ನಾನು ಮತ್ತು ಬೇಬಿ "ನಿನ್ನ ಈ ತಮಾಷೆ ಕಂಡು ಅಪ್ಪ ಒಳಗಿಂದಲೇ ಜೋರಾಗಿ ರೇಗುತ್ತಿರಬೇಕು. ಅದಕ್ಕೆ ಅವು ಬರುತ್ತಿಲ್ಲ" ಎಂದು ಅಮ್ಮನನ್ನು ರೇಗಿಸಿದೆವು. ಕೊನೆಗೆ ಆ ತಟ್ಟೆಯಲ್ಲಿದ್ದ ಊಟವನ್ನು ಅಪ್ಪನಿಗೆ ಪ್ರಿಯವಾಗಿದ್ದ ಎರಡು ಹಸುಗಳಿಗೆ ತಿನ್ನಿಸಿ ಬಂದಿದ್ದೆವು.

ವೆಂಕಟಲಕ್ಷ್ಮಿಯವರ ಮರಣಪತ್ರ ಇದೆಲ್ಲ ನೆನಪುಗಳನ್ನು ಮರುಕಳಿಸಿತು. ಹಿಂದೊಮ್ಮೆ ಪತ್ರಿಕೆಗೆ ವೆಂಕಟಲಕ್ಷ್ಮಿಯವರು ಬರೆಯುತ್ತಿದ್ದಾಗ ಅವರ ಪರಿಚಯವಾಗಿರಲಿಲ್ಲ. ಅವರನ್ನು ನಾನು ಮಾತನಾಡಿಸಿದ್ದು 'ಆವರಣ ಎಂಬ ವಿ-ಕೃತಿ' ಪುಸ್ತಕಕ್ಕೆ ಲೇಖನಗಳನ್ನು ಆಹ್ವಾನಿಸುತ್ತಿದ್ದಾಗ. ಆಗ ನಮ್ಮ ಪಟ್ಟಾಭಿರಾಮ ಸೋಮಯಾಜಿ ಅವರು ವೆಂಕಟಲಕ್ಷ್ಮಿಯವರು ಸಂಪಾದಿಸುತ್ತಿದ್ದ 'ಚಿಂತಕರ ಚಾವಡಿ' ಪತ್ರಿಕೆಯಲ್ಲಿ ಎಸ್.ಎಲ್. ಭೈರಪ್ಪನವರ 'ಆವರಣ' ಕುರಿತು ಬರೆದಿದ್ದ ಲೇಖನವನ್ನು ನನಗೆ ಕಳುಹಿಸಿ "ಎಷ್ಟು ಚೆನ್ನಾಗಿ ಬರೆದಿದ್ದಾರೆ" ಎಂದಿದ್ದರು. ಅದನ್ನು ಓದಿ ವೆಂಕಟಲಕ್ಷ್ಮಿಯವರಿಗೆ ಫೋನ್ ಮಾಡಿದ್ದೆ. 'ವಿ-ಕೃತಿ' ಪುಸ್ತಕದಲ್ಲಿ ಅದನ್ನು ಸೇರಿಸಿಕೊಳ್ಳಲು ಸಂತೋಷದಿಂದಲೇ ಅನುಮತಿ ಕೊಟ್ಟಿದ್ದ ವೆಂಕಟಲಕ್ಷ್ಮಿ ಅವರು ಆ ಪುಸ್ತಕದ ಬಿಡುಗಡೆ ಸಮಾರಂಭಕ್ಕೂ ಬಂದು ತಮ್ಮ ಸ್ನೇಹಿತರಿಗೆ ಹಲವು ಪ್ರತಿಗಳನ್ನು ಕೊಂಡುಹೋಗಿದ್ದರು.

ಹಾಗೆಯೇ ತಮ್ಮ 'ಚಿಂತಕರ ಚಾವಡಿ' ಪ್ರತಿಯನ್ನು ಪೋಸ್ಟ್ ಮಾಡುತ್ತಿದ್ದರು ಅಥವಾ ಗಾಂಧಿಬಜಾರ್ ಕಡೆಗೆ ಬಂದಾಗ ಅವರೇ ಕೊಟ್ಟು ಹೋಗುತ್ತಿದ್ದರು. ಅವರೆಷ್ಟು ಸೂಕ್ಷ್ಮ ಮನಸ್ಸಿನವರೆಂದರೆ ನಾನು ಬ್ಯುಸಿ ಆಗಿರುತ್ತೇನೆಂದು ನನ್ನನ್ನು ಭೇಟಿ ಕೂಡ ಆಗದೇ, ತಾವು ಬಂದಿರುವುದು ನನ್ನ ಗಮನಕ್ಕೂ ಬಾರದಂತೆ ಹೊರಟುಹೋಗುತ್ತಿದ್ದರು.

ವೆಂಕಟಲಕ್ಷ್ಮಿ ಅವರ ನಿರ್ಗಮನದಿಂದ ಕರ್ನಾಟಕದ ಪ್ರಗತಿಪರ ಚಿಂತಕರ ಚಾವಡಿ ಮತ್ತಷ್ಟು ಕಳೆಗುಂದಿದೆ, ಮತ್ತೊಂದು ದನಿಯನ್ನು ಕಳೆದುಕೊಂಡಿದೆ.....



ಕಂಡಹಾಗೆ


■ ಗೌರಿ ಲಂಕೇಶ್

ಯುಟೀವಿ ಮೇಲೆ ದಾಳಿ

ರವಿ ಪೂಜಾರಿಯ ಲೋಕಲ್ ಧೂತರು ಯಾರು?


ಇಂದಿರಾನಗರದ ಸಿ.ಎಂ.ಹೆಚ್ ರಸ್ತೆಯಲ್ಲಿರುವ ...ಟಿ.ವಿ ಕಛೇರಿಯ ಕಟ್ಟಡ

ನಿಜಕ್ಕೂ ರವಿ ಪೂಜಾರಿ ಎಂಬ ಪಾತಕಿ ಬದುಕಿದ್ದಾನಾ ಅಥವಾ ಬೇರೆ ಯಾರೋ ಅಂಥದ್ದೊಂದು ಹೆಸರಿಟ್ಟುಕೊಂಡು ಹಾವಳಿಯಿಡುತ್ತಿದ್ದಾರಾ?


ರವಿಪೂಜಾರಿ

ಜುಲೈ 11 ರ ಯುಟಿವಿ ಕಚೇರಿಯ ಮೇಲಿನ ದಾಳಿಯ ನಂತರ ಬೆಂಗಳೂರು ಪೊಲೀಸರನ್ನು ಕಾಡುತ್ತಿರುವ ಪ್ರಶ್ನೆಯಿದು. ಇಂದಿರಾನಗರದ ಸಿಎಂಎಚ್ ರಸ್ತೆಯ ರಾಮ್ ಪ್ಲಾಜಾದಲ್ಲಿರುವ ಯುಟೀವಿ ಕಚೇರಿಗೆ ನುಗ್ಗಿದ ಆರೂ ಮಂದಿ ಪಾತಕಿಗಳು ಬಂದಿದ್ದು ಮೋಟಾರ್ ಬೈಕಿನಲ್ಲಿ, ಮೆಟ್ರೋ ಕಾಮಗಾರಿಯಿಂದಾಗಿ ಇಕ್ಕಟ್ಟಾಗಿರುವ ರಸ್ತೆಯಲ್ಲಿ ಕಾರು ಬರುವುದು ಸಾಧ್ಯವಿಲ್ಲ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ಆರು ಮಂದಿಯ ಪೈಕಿ ಮೂವರು ಪಕ್ಕಾ ಕನ್ನಡದಲ್ಲಿ ಮಾತಾಡಿದರೆ ಉಳಿಕೆ ಮೂವರದು ಬಾಂಬೆ ಹಿಂದಿ!


ಹಿಂದೆ ತಿಲಕ್‌ನಗರದ ಶಬನಮ್ ಡೆವಲಪರ್ಸ್‌ಗೆ ನುಗ್ಗಿ ಇಬ್ಬರನ್ನು ಗುಂಡಿಟ್ಟು ಕೊಂದಿದ್ದ ಸೋಕಾಲ್ಡ್ ರವಿ ಪೂಜಾರಿಯ ಬಂಟರಿಗೂ ಈಗ ಯುಟೀವಿಗೆ ನುಗ್ಗಿದ ಪಾತಕಿಗಳಿಗೂ ದೊಡ್ಡ ವ್ಯತ್ಯಾಸವೇನಿಲ್ಲ, ಘಟನೆಯ ವಿವರಗಳನ್ನೇ ಲೆಕ್ಕ ಹಾಕುವುದಾದರೆ; ಅದು ಪಕ್ಕಾ ರವಿ ಪೂಜಾರಿಯ ಸ್ಟೈಲೇ. ಶನಿವಾರ ಸಂಜೆ ಐದರ ಹೊತ್ತಿಗೆ ಏಕಾಏಕಿ ಇಂದಿರಾನಗರದ ಯುಟೀವಿಗೆ ನುಗ್ಗಿದ ಆರು ಆಗುಂತುಕರಿದ್ದ ಗ್ಯಾಂಗ್ ಮೊದಲು ಸೆಕ್ಯೂರಿಟಿ ಗಾರ್ಡ್ ಸತೀಶನ ಮೇಲೆ ಹಲ್ಲೆ ನಡೆಸಿದೆ. ನಂತರ ಕಾರಿನ ಡ್ರೈವರ್ ಮಹಮ್ಮದ್ ಆಲಿಯನ್ನು ಬಡಿದಿದೆ. ಅದೇ ಹೊತ್ತಿಗೆ ಕೆಲಸ ಕೇಳಿಕೊಂಡು ಬಂದಿದ್ದ ಜಮಾಲ್ ಎಂಬಾತನ ತಲೆಗೆ ರಿವಾಲ್ವರ್‌ನ ಹಿಂಬದಿಯಿಂದ ಕುಕ್ಕಿದ್ದಾರೆ. ನಂತರ ಮೂವರನ್ನು ಕೋಣೆಯೊಂದಕ್ಕೆ ಹಾಕಿ ತುರುಕಿದ್ದಾರೆ.

ಆದಾದ ನಂತರ ಕಚೇರಿಯಲ್ಲಿದ್ದ ಕಂಪ್ಯೂಟರ್, ಲ್ಯಾಪ್‌ಟಾಪ್, ಟೀವಿ ಎಲ್ಲವನ್ನೂ ಚಿಂದಿಯೆಬ್ಬಿಸಿ ಮೊದಲೇ ಟೈಪ್ ಮಾಡಿಸಿ ತಂದಿದ್ದ ಚೀಟಿಯೊಂದನ್ನು ಇಟ್ಟಿದ್ದಾರೆ. ಅದರಲ್ಲಿ **`last warning'** ಅಂದರೆ ಕೊನೆಯ ಎಚ್ಚರಿಕೆ ಎಂದಿತ್ತು, ಕೆಳಗೆ ರವಿಪೂಜಾರಿ ಎಂಬ ಹೆಸರಿತ್ತು. ಜೊತೆಗೆ ಆಸ್ಟ್ರೇಲಿಯಾದ ಮೊಬೈಲ್ ನಂಬರ್ ಕೂಡ ಇತ್ತು.

ಮುಂಬಯಿಯ ಚಿತ್ರ ನಿರ್ಮಾಪಕ ಮತ್ತು ನಿರ್ದೇಶಕ ಮಹೇಶ್ ಭಟ್‌ನ ಛೇಂಬರಿನ ಮೇಲೆ ನಡೆದ ಗುಂಡಿನ ದಾಳಿಯಲ್ಲೂ ಇದೇ ತಂತ್ರ ಬಳಸಲಾಗಿತ್ತು. ಬೆಂಗಳೂರಿನ ಶಬನಮ್ ಡೆವಲಪರ್ಸ್ ಮೇಲಿನ ಅಟ್ಯಾಕ್ ಆನಂತರ ಬನ್ನೇರುಘಟ್ಟದಲ್ಲಿ ಮಾರ್ವಾಡಿ ರಾಜೇಂದ್ರನ ಮಾರ್ಬಲ್ ಪ್ಯಾಲೇಸ್ ಮೇಲಾದ ದಾಳಿ, ಇತ್ತೀಚೆಗಷ್ಟೇ ಚನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ವೆಂಕಟೇಶ್ ಎಂಬ ರಿಯಲ್ ಎಸ್ಟೇಟ್ ಆಸಾಮಿಯ ಮೇಲಾದ ದಾಳಿಗಳೆಲ್ಲವನ್ನೂ ತುಲನೆ ಮಾಡಿ ನೋಡಿದರೆ ಇದು ರವಿಪೂಜಾರಿಯದೇ ಕೃತ್ಯವೆಂಬುದರಲ್ಲಿ ಎರಡು ಮಾತಿಲ್ಲ.

ಇಂದಿರಾನಗರದ ಮತ್ತೊಬ್ಬ ಬಿಲ್ಡರ್‌ನ ಅಡ್ಡೆಯ ಮೇಲೆ ನಡೆದ ಇದೇ ರೀತಿಯ ಅಟ್ಯಾಕ್ ಅನ್ನೂ ಸೇರಿಸಿದರೆ ಬೆಂಗಳೂರೊಂದರಲ್ಲೇ ರವಿ ಪೂಜಾರಿ ಹೆಸರಿನ ಇಂಥ ಐದು ದಾಳಿಗಳಾಗಿವೆ. ಸದ್ಯ ಸಿಸಿಬಿಯಲ್ಲಿರುವ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್ ಬಿಟ್ಟರೆ ರವಿ ಪೂಜಾರಿಯ ಬಂಟರನ್ನು ಆವತ್ತಿನಿಂದ ಇವತ್ತಿನತನಕ ಬೆನ್ನಟ್ಟಿ ಹಿಡಿದ ಮತ್ತೊಬ್ಬ ಪೊಲೀಸ್ ಅಧಿಕಾರಿಯಿಲ್ಲ.

ಶಬನಮ್ ಡೆವಲಪರ್ಸ್ ಶೂಟೌಟ್ ನಂತರ ಬಿಲ್ಡರ್ ಸಮೀವುಲ್ಲಾನ ಹತ್ಯೆಗೆ ಹೊಂಚು ಹಾಕುತ್ತಿದ್ದ ಕವಿರಾಜ್ ಎಂಬ ನೇಪಾಳಿ ಮತ್ತು ಸೀರಿಯಲ್ ಕಿಲ್ಲರ್ ಶ್ಯಾಮ್


ವಾಮಂಜೂರು ರೋಹಿ

ವಾಮಂಜೂರು ರೋಹಿ ಕೊಲೆಯಲ್ಲಿ ಬಿಜೆಪಿ ಕೈ

ರವಿ ಪೂಜಾರಿಯ ಆರೆಸ್ಸೆಸ್ ಲಿಂಕ್



ರವಿ ಪೂಜಾರಿ ಎಂಬ ಇಂಟರ್‌ನ್ಯಾಷನಲ್ ಕ್ರಿಮಿನಲ್‌ಗೂ ಕರ್ನಾಟಕದ ಬಿಜೆಪಿ ಸರ್ಕಾರಕ್ಕೂ ಎತ್ತಣಿಂದೆತ್ತ ಸಂಬಂಧ?

ಸಂಬಂಧವಿಲ್ಲದೇ ಹೋಗಿದ್ದರೆ ಗೃಹಮಂತ್ರಿ ವಿ.ಎಸ್. ಆಚಾರ್ಯ ದಕ್ಷಿಣ ಕನ್ನಡದ ಎಸ್.ಪಿ. ಸುಬ್ರಹ್ಮಣ್ಯೇಶ್ವರ ರಾವ್‌ರನ್ನು ರಾತ್ರೋರಾತ್ರಿ ಎತ್ತಂಗಡಿ ಮಾಡುವಂತೆ ಏಕೆ ಡಿಐಜಿ ಗೋಪಾಲ್ ಹೊಸೂರ್‌ರನ್ನು ಪೀಡಿಸುತ್ತಿದ್ದರು? ಕೊಲೆಯಾದ ವಾಮಂಜೂರು ರೋಹಿಯ ಗರ್ಲ್ ಫ್ರೆಂಡ್ ನಳಿನಿಯನ್ನು ಯಾವುದೇ ಕಾರಣಕ್ಕೂ ಇಂಟರಾಗೇಟ್ ಮಾಡಬೇಡಿ ಎಂದು ಗೋಪಾಲ್ ಹೊಸೂರ್ ಸಾಹೇಬರು ಏಕೆ ದಕ್ಷಿಣ ಕನ್ನಡದ ಪೊಲೀಸ್ ವರಿಷ್ಠ ಸುಬ್ರಹ್ಮಣ್ಯೇಶ್ವರ ರಾವ್‌ಗೆ ದುಂಬಾಲು ಬೀಳುತ್ತಿದ್ದರು? ವಾಮಂಜೂರು ರೋಹಿ ಕೊಲೆಯ ಸೂತ್ರಧಾರರನ್ನು ಕೆದುಕುತ್ತಾ ಹೋದ ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಲಿಂಗಪ್ಪ ಪೂಜಾರಿ ಮತ್ತು ಸಬ್ ಇನ್ಸ್‌ಪೆಕ್ಟರ್ ಪ್ರಕಾಶ್‌ರನ್ನು ರಾತ್ರೋರಾತ್ರಿ ಎತ್ತಂಗಡಿ ಮಾಡುವಂತೆ ಆದೇಶ ಹೊರಡಿಸಿದ ಗೃಹಮಂತ್ರಿ ವಿ.ಎಸ್. ಆಚಾರ್ಯರಿಗೆ ಕೊಲೆಗೆ ಕಾರಣನಾದ ಯಾವ ಹಂತಕನನ್ನು ರಕ್ಷಿಸುವ ದರ್ದು?

ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರವೆಂಬಂತೆ ಕೇಳಿಬರುತ್ತಿರುವುದು ಪ್ರಭು ಎಂಬ ಹೆಸರು. ಪಕ್ಕಾ ಆರೆಸ್ಸೆಸ್ ಕ್ರಿಮಿಯಾದ ಈತ ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿಯ ನಾಯಕರಲ್ಲೊಬ್ಬ, ಹೇಳಿಕೇಳಿ ಕರಾವಳಿಯ ಆರೆಸ್ಸೆಸ್ ದೈತ್ಯ ಕಲ್ಲಡ್ಕ ಪ್ರಭಾಕರ ಭಟ್ಟ ಪಕ್ಕಾ ಚೇಲಾ. ಇಲ್ಲಿಗೆ ವಾರದ ಹಿಂದೆ ವಾಮಂಜೂರಿನ ಜ್ಯೋತಿನಗರದ ಕೃಷ್ಣಪ್ಪ ಸಾಲಿಯಾನ್ ಎಂಬಾತನ ಮನೆಯಲ್ಲಿ ಮಲಗಿದ್ದ ಕುಖ್ಯಾತ ರೌಡಿ ವಾಮಂಜೂರು ರೋಹಿ ಹತ್ಯೆಯ ಪ್ರಮುಖ ಆರೋಪಿಯೇ ಈ ಪ್ರಭು!

ಶತಗತಾಯ ಪ್ರಭು ಕೊಲೆ ಕೇಸಿಗೆ ಫಿಟ್ಟಾಗದಂತೆ ನೋಡಿಕೊಳ್ಳುವುದು ಗೃಹಮಂತ್ರಿ ಆಚಾರ್ಯರ ಪ್ರಾರಬ್ಧ ಕರ್ಮ. 'ಏನು ಮಾಡ್ತಿರೋ ಗೊತ್ತಿಲ್ಲ, ನಮ್ಮ ಪ್ರಭು ಮಾತ್ರ ಕೊಲೆ ಕೇಸಿನಲ್ಲಿ ಆರೆಸ್ಟಾಗಕೂಡದು' ಎಂದು ಕಲ್ಲಡ್ಕ ಪ್ರಭಾಕರ ಭಟ್ಟ ಹುಕುಂ ಜಾರಿಗೊಳಿಸಿದ್ದಾನೆ. ದಕ್ಷಿಣ ಕನ್ನಡ ಎಸ್.ಪಿ. ಸುಬ್ರಹ್ಮಣ್ಯೇಶ್ವರ ರಾವ್‌ರನ್ನು ರಾತ್ರೋರಾತ್ರಿ ಎತ್ತಂಗಡಿ ಮಾಡಿಯಾದರೂ ಆರೆಸ್ಸೆಸ್ ನಾಯಕ ಪ್ರಭುವನ್ನು ಕಾಪಾಡುವ ಇಕ್ಕಟ್ಟಿಗೆ ಸಿಲುಕಿದ ಆಚಾರ್ಯರ ಉಭಯ ಸಂಕಟ ಯಾರಿಗೆ ಅರ್ಥವಾಗಬೇಕು?


ರೋಹಿ

ಮಂಗಳೂರಿನ ಕುಖ್ಯಾತ ಪಾತಕಿ ವಾಮಂಜೂರು ರೋಹಿಯ ಕೊಲೆಯಾದಾಗ ಮಂಗಳೂರು ಪೊಲೀಸರು ಶಂಕಿಸಿದ್ದು ಬರ್ಕೆಯದ್ದು, ಚೇತು, ಪ್ರದೀಪ್ ಮುಂತಾದ ಹಳೇ ಪಾತಕಿಗಳನ್ನು, ಎಷ್ಟೇ ಬಾಯಿಬಿಡಿಸಿದರೂ ರೋಹಿ ಕೊಲೆಯಲ್ಲಿ ಇವರ್‍ಯಾರದೂ ಪಾತ್ರವಿಲ್ಲ ಎಂಬುದು ಮಂಗಳೂರು ಪೊಲೀಸರಿಗೆ ಗೊತ್ತಾಗಿ ಹೋಗಿತ್ತು. ಹೀಗೆ ರೋಹಿ ಹಂತಕರ ಬೆನ್ನು ಹತ್ತಿದ ಮಂಗಳೂರು ಗ್ರಾಮಾಂತರದ ಸಬ್ ಇನ್ಸ್‌ಪೆಕ್ಟರ್ ಪ್ರಕಾಶ್ ಮತ್ತು ಇನ್ಸ್‌ಪೆಕ್ಟರ್ ಲಿಂಗಪ್ಪ ಪೂಜಾರಿಯೇ ಅಚ್ಚರಿಪಡುವಂತೆ


ಗೋಪಾಲ್ ಹೊಸೂರು


ಪ್ರಕಾಶ್


ಲಿಂಗಪ್ಪ ಪೂಜಾರಿ

ಸಿಕ್ಕಿಬಿದ್ದವರು ಹಿಂದೂ ಸಂಘಟನೆಯಾದ ಭಜರಂಗದಳದ ಸಂಪತ್ ಭಂಡಾರಿ, ಸ್ವರೂಪ್, ಧನ, ರವಿ ಮತ್ತು ಶಿವಾ ಎನ್ನುವ ಉದಯೋನ್ಮುಖ ಪಾತಕಿಗಳು.

ರೋಹಿ ಜೈಲಲ್ಲಿದ್ದೇ ಹಿಂದೂಪರ ರೌಡಿ ಪಾಂಡು ಪೈನನ್ನು ಕೊಲ್ಲಿಸಿದ. ರವಿ ಪೂಜಾರಿಗೆ ಆಪ್ತನಾಗಿದ್ದ ಪಾಂಡು ಪೈ ಹತ್ಯೆಯ ವಿರುದ್ಧ ಹಿಂದೂಗಳ ಪರವಾಗಿ ನಾವು ಸೇಡು ತೀರಿಸಿಕೊಂಡಿದ್ದೇವೆ ಎಂದು ಬಂಧಿತ ಹುಡುಗರು ಕೊಟ್ಟ ಹೇಳಿಕೆ ಏಕೋ ಪೂರ್ತಿ ಸತ್ಯವಲ್ಲ ಎನ್ನಿಸುತ್ತಿತ್ತು, ಸತ್ಯ ಇದಕ್ಕೂ ಮುಂದಿದೆ ಎನಿಸಿದೆ ಸಬ್ ಇನ್ಸ್‌ಪೆಕ್ಟರ್ ಪ್ರಕಾಶ್‌ಗೆ. ಕಲಿತ ಎಲ್ಲಾ ಪೊಲೀಸ್ ವಿದ್ಯೆ ಬಳಸಿ ಹುಡುಗರ ಬಾಯಿ ಬಿಡಿಸುತ್ತಿದ್ದಂತೆ ಸತ್ಯ ಹೊರಬಿತ್ತು.

ಅವರ ಪ್ರಕಾರ ಇಲ್ಲಿಗೆ ತಿಂಗಳ ಹಿಂದೆ ಕೊಲೆಯಾದ ಪಾಂಡು ಪೈ ಮತ್ತು ಈಗ ಕೊಲೆಯಾಗಿರುವ ವಾಮಂಜೂರು ರೋಹಿಯ ಹತ್ಯೆಗಳೆರಡಕ್ಕೂ ಕಾರಣನಾದವನು ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿಯ ನಾಯಕ ಪ್ರಭು!

ಪೊಲೀಸರೇ ಬೆಚ್ಚಿಬೀಳುವಂತ ಕಹಿಸತ್ಯವೊಂದನ್ನು ಹೊರಗೆಡುಹಿದ ರೋಹಿ ಹಂತಕರ ಪೈಕಿ ಸಂಪತ್ ಭಂಡಾರಿ ಎಂಬಾತ ಭಜರಂಗದಳದ ಕಟ್ಟಾ ಕಾರ್ಯಕರ್ತನೆಂಬುದರಲ್ಲಿ ಎರಡು ಮಾತಿಲ್ಲ. ಈತನ ಜೊತೆ ಬೆಂಗಳೂರಿನ ಚಿಮ್ಮನೂರು ಜ್ಯುವೆಲ್ಲರ್ಸ್ ಡಕಾಯಿತಿ ಪ್ರಕರಣದ ಪ್ರಮುಖ ಆರೋಪಿ ನಿಖಿಲ್ ಶೆಟ್ಟಿಯೂ ಕೈಜೋಡಿಸಿದ್ದ. ಆತ ದುಬೈ ಪಾತಕಿ ಕೊರಗ ವಿಶ್ವನಾಥ್ ಶೆಟ್ಟಿಯ ಬಂಟನೆಂಬುದು ಕೂಡ ಅಷ್ಟೇ ಸತ್ಯ. ಆದರೆ ಜಿಲ್ಲಾ ಬಿಜೆಪಿ ನಾಯಕ ಪ್ರಭು ಏಕೆ ವಾಮಂಜೂರು ರೋಹಿಯನ್ನು ಕೊಲ್ಲಿಸಿದನೆಂಬುದು ಪೊಲೀಸರಿಗೆ ಕಗ್ಗಂಟಾಗಿತ್ತು.


ಹಂತಕರೇ ಹೇಳಿದ ಪ್ರಕಾರ ರೋಹಿಯ ಪ್ರತಿಯೊಬ್ಬ ಹಂತಕನಿಗೂ ಪ್ರಭು ತಲಾ ಒಂದು ಲಕ್ಷ ರೂಪಾಯಿ ಕೊಟ್ಟಿದ್ದ. ರೋಹಿಯ ಪ್ರೇಯಸಿ ನಳಿನಿಯನ್ನು ಒಂದೆರಡು ತಿಂಗಳ ಮೊದಲೇ ಬುಟ್ಟಿಗೆ ಹಾಕಿಕೊಂಡಿದ್ದ ಆಕೆಗೂ ಐದು ಲಕ್ಷದ ಆಮಿಷವೊಡ್ಡಿ ಮುಂಗಡವಾಗಿ ಒಂದು ಲಕ್ಷ ಕೊಟ್ಟಿದ್ದ. ರೋಹಿಗೆ ಆಕೆ ಮತ್ತು ಬರುವ ಮದ್ದು ಕುಡಿಸಬೇಕು. ಅದೂ ಆತ ಕುಡಿಯುವ ವಿಸ್ಕಿಯಲ್ಲೇ ಬೆರೆಸಬೇಕು. ಆತ ಎಚ್ಚರ ತಪ್ಪುತ್ತಿದ್ದಂತೆ ತನಗೆ ಮಾಹಿತಿ ಕೊಟ್ಟು ಹಂತಕರಿಗೆ ನೆರವಾಗಬೇಕು.

ಹೀಗೆ ಬಿಜೆಪಿ ನಾಯಕ ಪ್ರಭುನ ಜೊತೆ ಕೈಜೋಡಿಸಿದ ನಳಿನಿ ಜುಲೈ ಐದರ ಭಾನುವಾರ ರಾತ್ರಿ ರೋಹಿಗೆ ವಿಸ್ಕಿಯಲ್ಲಿ ಅದೇನೋ ಬೆರೆಸಿ ಕೊಡುತ್ತಾಳೆ. ಚಿತ್ತಾಗಿ ಪ್ರಜ್ಞೆ ತಪ್ಪಿ ಬಿದ್ದ ರೋಹಿಯನ್ನು ಪ್ರಭು ಕಳಿಸಿದ ಹಂತಕರಿಗೆ ಒಪ್ಪಿಸಿದ್ದಾಳೆ. ರಾತ್ರಿ ಒಂದೂವರೆ ಹೊತ್ತಿಗೆ ನಿಶ್ಚಲನಾಗಿ ಬಿದ್ದಿದ್ದ ರೋಹಿಯನ್ನು ಅಮಾನುಷವಾಗಿ ಕತ್ತರಿಸಿ ಹಾಕಿದ ಭಜರಂಗಿ ರೌಡಿ ಗ್ಯಾಂಗ್ ಪರಾರಿಯಾಗುತ್ತದೆ. ತಾವೇ ಕೊಂದಿದ್ದೇವೆಂದು ಚಿಮ್ಮನೂರು ಡಕಾಯಿತ ನಿಖಿಲ್ ಶೆಟ್ಟಿಯ ಮೂಲಕ ಗುಲ್ಲೆಬ್ಬಿಸುತ್ತಾರೆ. ಪೊಲೀಸರ ಕೈಗೆ ಸಿಕ್ಕಿಬೀಳುವ ಹಂತಕರು ಬಾಯಿಬಿಟ್ಟ ಸತ್ಯವನ್ನು ಪರಿಶೀಲಿಸಬೇಕಲ್ಲ? ಅದಕ್ಕೆ ಅಣಿಯಾದ ಇನ್ಸ್‌ಪೆಕ್ಟರ್ ಲಿಂಗಪ್ಪ ಪೂಜಾರಿ ರೋಹಿಯ ಪ್ರೇಯಸಿ ನಳಿನಿಯ ಬೇಟೆಗೆ ನಿಂತಿದ್ದೇ ತಡ ಬಿಜೆಪಿ ನಾಯಕ ಪ್ರಭುವಿಗೆ ನಡುಕ ಶುರುವಾಗಿದೆ.

ನಳಿನಿಯೇನಾದರೂ ಬಾಯಿಬಿಟ್ಟರೆ ತನ್ನ ಕತೆ ಮುಗಿದಂತೆಯೇ ಎಂದು ಆರೆಸ್ಸೆಸ್ ದೈತ್ಯ ಕಲ್ಲಡ್ಕ ಪ್ರಭಾಕರ ಭಟ್ಟನ ಮುಂದೆ ಗೋಳಿಟ್ಟಿದ್ದಾನೆ. ಇದು ಆರೆಸ್ಸೆಸ್ ಪ್ರತಿಷ್ಠೆ ಮಾತ್ರವಲ್ಲ ಬಿಜೆಪಿಯ ಗೌರವದ ಪ್ರಶ್ನೆ ಕೂಡ. ಆ ಕಾಲದಿಂದಲೂ ಆರೆಸ್ಸೆಸ್ ಪರವಾಗಿ ಮಂಗಳೂರಿನ ಶ್ರೀಮಂತರು, ಬಿಲ್ಡರುಗಳು, ಉದ್ದಿಮೆದಾರರಿಂದ ವಸೂಲಿ ಮಾಡುತ್ತಿರುವವನು ಪ್ರಭು. ಆತ ವೈಟ್ ಕಾಲರ್ ಕ್ರಿಮಿನಲ್ ಎಂಬುದು ಪ್ರಭಾಕರ ಭಟ್ಟನಿಗೂ ಗೊತ್ತು. ದುಬೈ ಪಾತಕಿ ಕೊರಗ ವಿಶ್ವನಾಥ್ ಶೆಟ್ಟಿಯಂಥ ಮಿನಿ ಡಾನ್‌ಗಳಷ್ಟೇ ಅಲ್ಲದೇ ಕುಖ್ಯಾತ ರವಿ ಪೂಜಾರಿಯ ಜೊತೆಗೇ ಲಿಂಕು ಬೆಳೆಸುವಂಥ ಕುಖ್ಯಾತಿ ಪ್ರಭುವಿಗಿದೆ.

ರವಿ ಪೂಜಾರಿಯ ಹೆಸರಲ್ಲಿ ಮಂಗಳೂರಿನ ಕೆಲ ಶ್ರೀಮಂತರಿಗೆ ಧಮಕಿ ಹಾಕಿದ್ದೂ ಈತನೇ ಎಂಬ ಗುಮಾನಿ ಅನೇಕರಿಗಿತ್ತು, ಅಸಲಿಗೆ ಪ್ರಭು ಯಾವತ್ತೋ ರವಿ ಪೂಜಾರಿಯ ಜೊತೆ ನಂಟು ಬೆಳೆಸಿಬಿಟ್ಟಿದ್ದ. ತಿಂಗಳಿಗೆ ಕಮ್ಮಿಯೆಂದರೂ ಎರಡು ಬಾರಿ ಬ್ಯಾಂಕಾಕ್ ಮತ್ತು ದುಬೈಗೆ ಹೋಗಿಬರುತ್ತಿದ್ದ. ಈತನ ವಸೂಲಿಗೆ ಅಡ್ಡ ಬಂದವನು ಮತ್ತೊಬ್ಬ ರೌಡಿ ಪಾಂಡು ಪೈ. ಹಾಗೇ ಮಂಗಳೂರಿನ ಬಿಲ್ಡರ್ ಒಬ್ಬನನ್ನು ರವಿ ಪೂಜಾರಿಯ ಹೆಸರಲ್ಲಿ ಸುಲಿಯಲು ಯತ್ನಿಸಿದ ಪ್ರಭುವಿಗೆ ರೌಡಿ ವಾಮಂಜೂರು ರೋಹಿ ಕಡಕ್ಕಾಗಿಯೇ ಧಮಕಿಕೊಟ್ಟಿದ್ದ. ಇದನ್ನೇ ಮನಸಿಗೆ ಹಚ್ಚಿಕೊಂಡ ಪ್ರಭು ಇಲ್ಲಿಗೆ ತಿಂಗಳ ಹಿಂದೆ ವ್ಯವಸ್ಥಿತವಾಗಿ ಪಾಂಡು ಪೈನನ್ನು ಮುಗಿಸಿಬಿಟ್ಟ. ಪೊಲೀಸರು ವಿಜಯ್ ಮತ್ತು ರಾಜಾ ಎಂಬಿಬ್ಬರು ಪುಡಿ ರೌಡಿಗಳನ್ನು ಕೇಸಿಗೆ ಸಿಲುಕಿಸಿ ಪ್ರಭುನನ್ನು ಬಚಾವು ಮಾಡಿದ್ದರಾದರೂ ವಾಮಂಜೂರು ರೋಹಿಯ ಕೊಲೆ ಕೇಸಿನಲ್ಲಿ ಹಾಗಾಗಲೇ ಇಲ್ಲ.

ಯಾವತ್ತು ಪ್ರಭುನ ಹೆಸರನ್ನು ಎಸ್‌ಐ ಪ್ರಕಾಶ್


ಪ್ರಭಾಕರ ಭಟ




ಪಾಂಡುರಂಗ ಪೈ

ಬಾಯಿಬಿಡಿಸಿದರೋ ಇನ್ಸ್‌ಪೆಕ್ಟರ್ ಲಿಂಗಪ್ಪ ಪೂಜಾರಿ ಅದನ್ನು ದ.ಕ.ದ ಎಸ್.ಪಿ. ಸುಬ್ರಹ್ಮಣ್ಯೇಶ್ವರರಾವ್ ಕಿವಿಗೆ ಹಾಕಿದ್ದಾರೆ. ಅದೆಷ್ಟೇ ಬಿಜೆಪಿಯ ಹಂಗಿನಲ್ಲಿದ್ದರೂ ಸುಬ್ರಹ್ಮಣ್ಯೇಶ್ವರ ರಾವ್ ತಮ್ಮ ಖಾಕಿಯನ್ನೇ ಮಾರಿಕೊಳ್ಳುವವರಲ್ಲ, ಒಂದೆಡೆ ರೋಹಿಯ ಪ್ರೇಯಸಿ ನಳಿನಿಯನ್ನು ಎಳೆತಂದು ಬಾಯಿಬಿಡಿಸುತ್ತಿದ್ದಂತೆ ಮತ್ತೊಂದೆಡೆ ಪ್ರಭುವಿನ ಜಾತಕ ಕೆದಕಲಾರಂಭಿಸಿದ್ದಾರೆ. ಆತ ತಿಂಗಳಿಗೆರಡು ಬಾರಿ ಬ್ಯಾಂಕಾಕ್ ಮತ್ತು ದುಬೈ ಪ್ರವಾಸಕ್ಕೆ ಹೋಗಿದ್ದು, ಆತನ ಮೊಬೈಲ್‌ಗೆ ಬರುತ್ತಿದ್ದ ರವಿ ಪೂಜಾರಿಯ ಕರೆಗಳು ಮತ್ತು ರೋಹಿ ಹಂತಕರ ಜೊತೆ ಆತ ನಡೆಸಿದ ಸಂಭಾಷಣೆ ಎಲ್ಲವೂ ಬಯಲಾಗಿದ್ದೇ ಆವಾಗ!

ಬಿಟ್ಟಿದ್ದ ರವಿ ಪೂಜಾರಿಯ ಏಜೆಂಟರನ್ನು ಇನ್ಸ್‌ಪೆಕ್ಟರ್ ಮಹೇಶ್‌ರ ಹಿಡಿದು ಜೈಲಿಗೆ ಹಾಕಿದ್ದಾರೆ. ನಂತರದ ಕಾರ್ಲ್‌ಟನ್ ಪ್ಯಾಲೇಸ್ ದಾಳಿಗೆ ರವಿ ಪೂಜಾರಿ ಬಳಸಿದ್ದು ಹೊಸ ತಂಡವನ್ನು. ಮಂಗಳೂರು ಮೂಲದ ಸುನೀಲ್ ಹರೀಶ್ ತೋಳಾರ್, ಪವನ್, ಸಬೀರ್ ಮುಂತಾದ ಮಂದಿಯ ಗ್ಯಾಂಗ್ ಅನ್ನು ಇನ್ಸ್‌ಪೆಕ್ಟರ್ ಮಹೇಶ್ ಎರಡನೇ ಬಾರಿ ಹಿಡಿದು ಜೈಲಿಗೆ ಹಾಕಿದ ನಂತರವೂ ಈಗ ಯುಟೀವಿಯ ಮೇಲೆ ದಾಳಿಯಿಟ್ಟ ಹೊಸ ತಂಡ ಯಾವುದು?



ಇದರರ್ಥ ರವಿ ಪೂಜಾರಿಯ ಕೈ ದೂರದ ಆಸ್ಟ್ರೇಲಿಯಾದಿಂದ ಭಾರತದ ಮುಂಬಯಿಯ ತನಕವಷ್ಟೇ ಅಲ್ಲ, ಬೆಂಗಳೂರಿನವರೆಗೂ ಚಾಚಿಕೊಂಡಿದೆ. ಪ್ರತಿಯೊಂದು ಕಾರ್ಯಾಚರಣೆಗೂ ಹೊಸ ತಂಡವನ್ನು ಬಳಸುತ್ತಾನೆ. ಇವರೂ ಹೆಸರುವಾಸಿ ರೌಡಿಗಳಲ್ಲ. ನಿನ್ನೆ ಮೊನ್ನೆ ಕಣ್ಣುಬಿಟ್ಟ ಪಾತಕಿಗಳು. ಈ ಬಾರಿ ಯಾವ ಹೊಸ ತಂಡವನ್ನು ಪೂಜಾರಿ ಹುಟ್ಟು ಹಾಕಿದ್ದಾನೆ? ಅದೂ ಯುಟೀವಿಯ ಕಛೇರಿಯ ಮೇಲೆ ಏಕೆ ದಾಳಿ ನಡೆಸಿದ್ದಾನೆ? ಕೊಡುತ್ತಿರುವ ಲಾಸ್ಟ್ ವಾರ್ನಿಂಗ್‌ನ ಕಾರಣ ಪುರುಷ ಯಾರು?


Ronnie screwvala ಎಂಬುದು ಆತನ ಪೂರ್ತಿ ಹೆಸರು. ಆತ ಮುಂಬಯಿಯ ಮೀಡಿಯಾ ಟೈಕೂನ್ ಮತ್ತು ದೇಶದ ಬಲಾಢ್ಯ ಫಿಲ್ಮ್ ಪ್ರೊಡ್ಯೂಸರ್. ಮೊನ್ನೆ ಮೊನ್ನೆಯಷ್ಟೇ ತೆರೆಕಂಡು ಭರ್ಜರಿಯಾಗಿ ಹಿಟ್ಟಾದ 'ಫ್ಯಾಷನ್' ಎಂಬ ಚಿತ್ರದ ನಿರ್ಮಾಪಕನೇ ರೋನ್ನಿ ಸ್ಕ್ರೂವಾಲಾ. ಅದಕ್ಕೂ ಮುನ್ನ ಹಿಂದಿಯಲ್ಲಿ ಹಿಟ್ಟಾದ 'ರೇಸ್' ಎಂಬ ಚಿತ್ರಕ್ಕೂ ಈತನೇ ನಿರ್ಮಾಪಕ. ಹೃತಿಕ್ ರೋಷನ್ ಮತ್ತು ಐಶ್ವರ್ಯ ರೈ ನಟಿಸಿದ್ದ 'ಜೋಧಾ ಅಕ್ಬರ್' ಎಂಬ ಮತ್ತೊಂದು ಸೂಪರ್ ಹಿಟ್ ಚಿತ್ರ ಕೂಡ ಈತನದ್ದೇ. ಹೀಗೇ ಸಾಲುಸಾಲಾಗಿ ಒಂದರ ಮೇಲೊಂದು ಭರ್ಜರಿ ಹಿಟ್ ಚಿತ್ರಗಳನ್ನು ನಿರ್ಮಿಸಿದ ರೊನ್ನಿ ಸ್ಕ್ರೂವಾಲಾ ಕೇವಲ ಅದಷ್ಟೇ ಅಲ್ಲ.

ಮಹಾನ್ ಶೋಕಿಲಾಲ. ಪ್ರಿಯಾಂಕಾ ಛೋಪ್ರಾಳಿಂದ ಹಿಡಿದು ಐಶ್ವರ್ಯಾ ರೈತನಕ ಬಹುತೇಕ ಬಾಲಿವುಡ್ ನಟಿಯರ ಜೊತೆ ನಿಂತು ಫೋಟೋ ತೆಗೆಸಿಕೊಂಡ ಸುಂದರರೂಪಿ 'ಸುಖಪುರುಷ' ಸ್ಕ್ರೂವಾಲಾ ಮುಂಬಯಿ ಮಟ್ಟಿಗೆ ಚಿನ್ನದ ಗಣಿಯೇ. ಆತ ದೇಶದ ಹೆಸರಾಂತ ಚಿತ್ರನಿರ್ಮಾಣ ಸಂಸ್ಥೆಯಾದ ಯುಟೀವಿ ಗ್ರೂಪ್‌ನ ಛೇರ್ಮನ್. ಒಂದಲ್ಲ ಐದು ಟೀವಿ ಚಾನಲ್ಲುಗಳಿಗೆ ಆತನೇ ಒಡೆಯ.

ಯಾವುದೇ ಕೇಬಲ್ ನೆಟ್‌ವರ್ಕ್‌ನ ಚಾನಲ್‌ಗಳ ಪಟ್ಟಿ ತೆರೆದರೂ ವರ್ಲ್ಡ್ ಮೂವೀಸ್ ಎಂಬ ಇಂಗ್ಲಿಷ್ ಚಾನಲ್ ಇದ್ದೇ ಇರುತ್ತದೆ. ಜೊತೆಗೆ 'ಬಿಂದಾಸ್' ಎಂಬ ಫ್ಯಾಷನ್ ಚಾನಲ್, 'ಬಿಂದಾಸ್ ಮೂವೀಸ್' ಎಂಬ ಹಿಂದಿ ಸಿನಿಮಾ ಚಾನಲ್, ಯುಟೀವಿ ಮೂವಿಸ್ ಎಂಬ ಇನ್ನೊಂದು ಚಾನಲ್, ಯುಟೀವಿ-ಐ ಎಂಬ ಮತ್ತೊಂದು ಚಾನಲ್- ಹೀಗೆ ಏಕಕಾಲಕ್ಕೆ ಹಿಂದಿ ಮತ್ತು ಇಂಗ್ಲಿಷ್‌ನ ಒಂದಲ್ಲಾ ಐದು ಚಾನಲ್ಲುಗಳ ಅಧಿಪತಿಯಾದ ರೋನ್ನಿ ಸ್ಕ್ರೂವಾಲಾ ಎಂಬ ಮನರಂಜನಾ ಲೋಕದ ದೊರೆಗೂ ಭೂಗತ ಪಾತಕಿ ದಾವೂದ್ ಇಬ್ರಾಹಿಂಗೂ ಯಾವ ಸಂಬಂಧವಿದೆಯೋ ಯಾರಿಗೂ ಗೊತ್ತಿಲ್ಲ.

ಆದರೆ ರವಿ ಪೂಜಾರಿಯ ಪಾಲಿಗೆ ಆತ ದಾವೂದ್‌ನ ಪರಮಾಪ್ತ! ಸರಿಸುಮಾರು ಎರಡು ಸಾವಿರ ಕೋಟಿ ರೂಪಾಯಿಗಳ ಬಂಡವಾಳದ 'ಯುಟೀವಿ' ಕಂಪೆನಿಯ ಅರ್ಧ ಬಂಡವಾಳವನ್ನು ಬೇನಾಮಿಯಾಗಿ ದಾವೂದ್ ಹಾಕಿದ್ದಾನೆ ಎಂಬುದು ರವಿ ಪೂಜಾರಿಯ ಆರೋಪ. ಇಲ್ಲಿಗೆ ಆರು ತಿಂಗಳ ಹಿಂದೆಯೇ ಸ್ಕ್ರೂವಾಲಾನ ಮೊಬೈಲಿಗೆ ಫೋನ್ ಮಾಡಿ "ನೀನೊಬ್ಬ ದೇಶದ್ರೋಹಿ. ನೀನು ದಾವೂದ್ ಇಬ್ರಾಹಿಂನ ಪಾರ್ಟ್‌ನರ್. ತೆರಿ ಜಿಂದಾ ರಹನಾ ಹೈ ತೋ ಪಚಾಸ್ ಕರೋಡ್ ಭೇಜ್ ದೋ....' ಎಂದು ಗದರಿಬಿಟ್ಟ.

ಮೊದಮೊದಲು ಇದನ್ನು ಸೀರಿಯಸ್ಸಾಗಿ ಪರಿಗಣಿಸದೇ ಅಸಡ್ಡೆಯಿಂದಿದ್ದ ಸ್ಕ್ರೂವಾಲಾ ಮುಟ್ಟಿ ನೋಡಿಕೊಳ್ಳುವಂತಾದದ್ದು ಇಲ್ಲಿಗೆ ಆರು ತಿಂಗಳ ಹಿಂದೆ. ಬೊರಿವಿಲಿಯ ನಡುರಸ್ತೆಯಲ್ಲೇ ಶೂಟರ್ ಒಬ್ಬ ಸ್ಕ್ರೂವಾಲಾನ ಕಾರಿನ ಮೇಲೆ ಗುಂಡು ಹಾರಿಸಿಬಿಟ್ಟ.



ಆವತ್ತಿನಿಂದ ಮನೆಬಿಟ್ಟು ಹೊರಗೆಲ್ಲೂ ಸ್ಕ್ರೂವಾಲಾ ಕಾಣಿಸಿಕೊಂಡಿಲ್ಲ. ದಿನದ ಯಾವ ಹೊತ್ತಲ್ಲೂ ಆತನ ಸುತ್ತ ಕನಿಷ್ಠ ಐದು ಮಂದಿ ಬಂದೂಕುಧಾರಿಗಳ ಪಹರೆಯಿರುತ್ತದೆ. ಮಹಾರಾಷ್ಟ್ರ ಸರ್ಕಾರ ಸ್ಕ್ರೂವಾಲಾನ ಸುತ್ತ ಸರ್ಪಗಾವಲನ್ನೇ ಹಾಕಿಬಿಟ್ಟಿದೆ. ಬಹುಶಃ ರವಿ ಪೂಜಾರಿಗೆ ಮುಂಬಯಿಯಲ್ಲಿ ಸ್ಕ್ರೂವಾಲಾನನ್ನು ಮುಟ್ಟುವುದು ಸಾಧ್ಯವಿಲ್ಲ ಎನಿಸಿರಬೇಕು.

ಹೇಗೂ ಬೆಂಗಳೂರಿನಲ್ಲಿ ಹಿಂಡು ರೆಡಿಯಾಗಿತ್ತಲ್ಲ ಅಟ್ಯಾಕ್ ಮಾಡಿ ಎಂದು ಶಿಷ್ಯರಿಗೆ ಆದೇಶ ಕೊಟ್ಟಿದ್ದಾನೆ. ಮುಂಬಯಿಯಿಂದ ಬಂದಿದ್ದ ತಂಡದ ಜೊತೆಗೆ ಲೋಕಲ್ ಪಾತಕಿಗಳೂ ಸೇರಿಕೊಂಡು ಇಂದಿರಾನಗರದ ಯುಟೀವಿ ಮಳಿಗೆಗೆ ನುಗ್ಗಿದ್ದಾರೆ. ಬಂದಷ್ಟೇ ಚಾಕಚಕ್ಯತೆಯಿಂದ ತಂಡ ಕೆಲಸ ಮುಗಿಸಿ ಪರಾರಿಯಾಗಿದೆ. ಬಂದಿದ್ದ ಬೈಕುಗಳ ನಂಬರ್ ಸಿಕ್ಕಿದೆಯಾದರೂ ಅದು ಅಸಲೀ ನಂಬರ್ ಪ್ಲೇಟ್ ಅಲ್ಲ. ಬರುವಾಗ ಹೆಲ್ಮೆಟ್ ಧರಿಸಿ ಬಂದಿದ್ದರಿಂದ ಯಾರಿಗೂ ಮುಖದ ಗುರುತು ಸಿಕ್ಕಿಲ್ಲ. ಯಾರನ್ನಂಥ ಪೊಲೀಸರು ಹಿಡಿಯುತ್ತಾರೆ. ಅಷ್ಟಕ್ಕೂ, ರವಿ ಪೂಜಾರಿ ಹಿಡಿಯುವುದು ಹೆಸರಾಂತ ರೌಡಿಗಳನ್ನಲ್ಲ, ಮಂಗಳೂರು ಮೂಲದ ಹೋಟೆಲ್ ಕೆಲಸಗಾರರು, ಟ್ಯಾಕ್ಸಿ ಚಾಲಕರು ಮತ್ತು ಅರೆಬರೆ ಉದ್ಯೋಗಿ ಹುಡುಗರನ್ನೇ ಹಿಡಿದು ತಾನು ಕಣ್ಣಿಟ್ಟ ಕುಬೇರರ ಮೇಲೆ ಛೂ ಬಿಡುವ ರವಿ ಪೂಜಾರಿ ಯಾರು? ಎತ್ತ? ಎಂಬುದು ಮುಂಬಯಿ ಪೊಲೀಸರಿಗೂ ಗೊತ್ತಿಲ್ಲ.

ಹಿಂದೆ ಒಂದೆರಡು ಪ್ರಕರಣಗಳಲ್ಲಿ ಮುಂಬಯಿ ಪೊಲೀಸರು ರವಿ ಪೂಜಾರಿ ಎಂಬ ಶೂಟರ್ ಒಬ್ಬನನ್ನು ಹಿಡಿದಿದ್ದು ನಿಜವಾದರೂ ಆತನ ವಿಳಾಸ, ತಂದೆ, ತಾಯಿ ಎಲ್ಲವೂ ಸುಳ್ಳು ಮಾಹಿತಿಯಾಗಿತ್ತು. ಈತ ಅದೇ ರವಿ ಪೂಜಾರಿಯಾ? ಅಥವಾ ಈ ಹೆಸರಲ್ಲಿ ಬೇರೆ ಯಾರೋ ಕೈಚಳಕ ತೋರಿಸುತ್ತಿದ್ದಾರಾ? ಅದೊಂದು ಕಾಲ್ಪನಿಕ ಹೆಸರಿನ ಜಾಲವಾ? ಅಥವಾ ಛೋಟಾ ರಾಜನ್ ಗ್ಯಾಂಗ್ ಇಂಥದೊಂದು ಹೆಸರನ್ನು ತೇಲಿಬಿಟ್ಟದೆಯಾ?

ಎಲ್ಲವೂ ನಿಗೂಢ!

● ರಾ. ಸೋಮನಾಥ್

ಇದು ಗೊತ್ತಾಗುತ್ತಿದ್ದಂತೆ ಗೃಹಮಂತ್ರಿ ಆಚಾರ್ಯರಿಗೆ ಕಲ್ಲಡ್ಕ ಪ್ರಭಾಕರ ಭಟ್ಟನ ಒತ್ತಡ ಹೆಚ್ಚಾಗಿದೆ. ಗೃಹಮಂತ್ರಿಯೇ ನೇರವಾಗಿ ಎಸ್‌ಪಿ ಸುಬ್ರಹ್ಮಣ್ಯೇಶ್ವರ ರಾವ್‌ಗೆ ಫೋನ್ ಮಾಡಿ ನಳಿನಿಯನ್ನು ಬಂಧಿಸಿದಂತೆ ಹೇಳಿದಾಗಲೂ ಅದಕ್ಕೆ ಎಸ್‌ಪಿ ಸೊಪ್ಪು ಹಾಕಿಲ್ಲ. ವಿಧಿಯಿಲ್ಲದೇ ಆಚಾರ್ಯ ಡಿಐಜಿ ಗೋಪಾಲ್ ಹೊಸೂರ್‌ರನ್ನು ಪೀಡಿಸಿ ಯಾವುದೇ ಕಾರಣಕ್ಕೂ ನಳಿನಿಯನ್ನು ಬಂಧಿಸದಂತೆ ಎಸ್‌ಪಿ ಸುಬ್ರಹ್ಮಣ್ಯೇಶ್ವರ ರಾವ್‌ಗೆ ಆದೇಶಿಸುವಂತೆ ಗೋಗರೆದಿದ್ದಾರೆ. ಇದನ್ನು ಮೊದಲೇ ಗ್ರಹಿಸಿದ್ದ ಸುಬ್ರಹ್ಮಣ್ಯೇಶ್ವರ ರಾವ್ ಆ ಹೊತ್ತಿಗಾಗಲೇ ನಳಿನಿಯ ಹೇಳಿಕೆ ಪಡೆದಾಗಿತ್ತು!

ಅಲ್ಲಿಗೆ ವಾಮಂಜೂರು ರೋಹಿ ಕೊಲೆ ಕೇಸಿನಲ್ಲಿ ಯಾರು ಅರೆಸ್ಟಾಗುತ್ತಾನೆಂಬುದು ಕಲ್ಲಡ್ಕ ಪ್ರಭಾಕರ ಭಟ್ಟನಿಗಷ್ಟೇ ಅಲ್ಲ, ಸ್ವತಃ ಗೃಹ ಮಂತ್ರಿ ಆಚಾರ್ಯರಿಗೂ ಗೊತ್ತಾಯಿತು. ಹೇಗಾದರೂ ಮುಖ ಉಳಿಸಿಕೊಳ್ಳಬೇಕಲ್ಲ. ನಿನ್ನೆ ಅಂದರೆ ಜುಲೈ 15 ರ ರಾತ್ರಿಯೇ ಎಸ್.ಪಿ. ಸುಬ್ರಹ್ಮಣ್ಯೇಶ್ವರ ರಾವ್ ಇನ್ಸ್‌ಪೆಕ್ಟರ್ ಲಿಂಗಪ್ಪ ಪೂಜಾರಿ ಮತ್ತು ಸಬ್ ಇನ್ಸ್‌ಪೆಕ್ಟರ್ ಪ್ರಕಾಶ್‌ರನ್ನು ಎತ್ತಂಗಡಿ ಮಾಡುವಂತೆ ಗೋಪಾಲ್ ಹೊಸೂರ್‌ಗೆ ಆಚಾರ್ಯ ಆದೇಶಿಸಿಬಿಟ್ಟರು.

ಎಸ್.ಪಿ.ಯಾಗಲಿ ಇತರೇ ಪೊಲೀಸ್ ಅಧಿಕಾರಿಗಳಾಗಲಿ ಕೊಂಚ ರಾಜಿ ಮಾಡಿಕೊಂಡಿದ್ದರೂ ಇಂಥ ಶಿಕ್ಷೆ ಅನುಭವಿಸಬೇಕಾಗುತ್ತಿರಲಿಲ್ಲ. ಆದರೆ ಖಾಕಿ ನಿಷ್ಠೆಯಿತ್ತಲ್ಲ. ಹೇಗೂ ಈ ಮೂವರು ಅಧಿಕಾರಿಗಳು ಗೃಹಮಂತ್ರಿಯ ದುರಾಚಾರಕ್ಕೆ ತಲೆಬಗ್ಗಿಸಲಿಲ್ಲ. ಲೇಟೆಸ್ಟ್ ಬೆಳವಣಿಗೆಯೇ ಎಂದರೆ ಈಗಾಗಲೇ ಮೂವರು ಪೊಲೀಸ್ ಅಧಿಕಾರಿಗಳ ಎತ್ತಂಗಡಿಗೆ ಪೊಲೀಸು ಮಂತ್ರಿ ಆಚಾರ್ಯರ ಆದೇಶ ಹೊರಬಿದ್ದಾಗಿದೆ. ಕರ್ಮವ್ವೋ ಎಂಬಂತೆ ಅದನ್ನು ತಲೆತಲೆ ಚಚ್ಚಿಕೊಂಡು ಜಾರಿಗೊಳಿಸಲು ಗೋಪಾಲ್ ಹೊಸೂರ್ ಮುಂದಾಗಿದ್ದಾರೆ. ಇದು ಗೊತ್ತಾಗಿದ್ದೇ ಎಸ್.ಪಿ. ಸುಬ್ರಹ್ಮಣ್ಯೇಶ್ವರ ರಾವ್ ಮುಖ್ಯಮಂತ್ರಿ ಮನೆ ಮುಂದೆ ಹೋಗಿ ಕಣ್ಣೀರಿಡುತ್ತಿದ್ದಾರೆ. ಇನ್ಸ್‌ಪೆಕ್ಟರ್ ಲಿಂಗಪ್ಪ ಪೂಜಾರಿ ಮತ್ತು ಎಸ್‌ಐ ಪ್ರಕಾಶ್ ತಮಗಾದ ದುರ್ಗತಿಗೆ ಕಂಗೆಟ್ಟು ಕಂಡಕಂಡವರೆದುರು ಗೋಳಾಡುತ್ತಿದ್ದಾರೆ.

ಬಿಜೆಪಿಯಂಥ ಶ್ರೀರಾಮಚಂದ್ರನ ಪಕ್ಷಕ್ಕೆ ಎಂಥಾ ಪಕ್ಷದ ನಾಯಕ ಸುಪಾರಿ ಕೊಲೆಗಾರ. ಕೊಂದವರು ಬಜರಂಗದಳದ ಪಕ್ಕಾ ಕಾರ್ಯಕರ್ತರು. ಅಂಥ ಹಂತಕರ ಬೆನ್ನಿಗೆ ನಿಂತ ಗೃಹಮಂತ್ರಿ, ಆಚಾರ್ಯ ನಿಷ್ಠಾವಂತ ಪೊಲೀಸ್ ಅಧಿಕಾರಿಗಳಿಗೆ ತಲೆದಂಡ ವಿಧಿಸುತ್ತಾರೆಂದರೆ ಯಾವ ಮುಖ ಹೊತ್ತು ಪೊಲೀಸರು ಕಳ್ಳರು ಪಾತಕಿಗಳನ್ನು ಬಂಧಿಸಬೇಕು?

ಒಂದೆಡೆ ಭಯೋತ್ಪಾದನಾ ವಿರೋಧಿ ಅಭಿಯಾನ ನಡೆಸುವ ಬಿಜೆಪಿ ಮತ್ತೊಂದೆಡೆ ಭಯೋತ್ಪಾದಕರಷ್ಟೇ ಅಪಾಯಕಾರಿ ಹಂತಕರನ್ನು ರಕ್ಷಿಸುತ್ತಿದೆ. ಬೆಂಗಳೂರಿನ ಪೊಲೀಸರು ಪಾತಕಿ ರವಿಪೂಜಾರಿಯ ಪತ್ತೆಗೆ ತಲೆಕೆಡಿಸಿಕೊಂಡರೆ ಆತನ ಬಂಟರೇ ಬಿಜೆಪಿಯ ನಾಯಕರು. ರಕ್ಷಣೆಗೆ ನಿಲ್ಲುವ ಗೃಹ ಮಂತ್ರಿ. ಎಲ್ಲಿಗೆ ಬಂತು ಪೊಲೀಸ್ ಬಿಯಿತು?

● ರಾ. ಸೋಮನಾಥ್


ಮಹಾದೇವ ಮಿಲ್ಸ್ ಗಿರಣಿ ಚಾಳ್‌ಗೆ ಕುತ್ತು



ಹುಬ್ಬಳ್ಳಿಯ ಪ್ರತಿಷ್ಠಿತ ಮಹಾದೇವ ಮಿಲ್ 1977 ರಲ್ಲಿ ಮುಚ್ಚಿದಾಗ ಸಾವಿರಾರು ಕಾರ್ಮಿಕ ಕುಟುಂಬಗಳು ಬೀದಿಗೆ ಬಿದ್ದಿದ್ದವು. ಮುಳುಗಿಸಿದ ಮನೆಹಾಳ ರಾಜಕಾರಣಿಗಳು, ಅಧಿಕಾರಿಗಳು ಮಾತ್ರ ಕೊಬ್ಬಿ ಹೋಗಿದ್ದರು.

ಮಿಲ್‌ನ ವ್ಯಾಪ್ತಿಗೆ ಬರುವ 57 ಎಕರೆ ಜಾಗದಲ್ಲಿ ಸ್ವಲ್ಪ ಭಾಗದಲ್ಲಿ ಮೊದಲಿಂದಲೂ ಕಾರ್ಮಿಕ ಕುಟುಂಬಗಳು ವಾಸಿಸುತ್ತಾ ಬಂದಿವೆ. ಇದು ಗಿರಣಿ ಚಾಳ್ ಎಂದೇ ಜನಪ್ರಿಯವಾಗಿದೆ. ಈ ಮಧ್ಯೆ ಕೆಲಸ ಕಳೆದುಕೊಂಡ ಕಾರ್ಮಿಕರು ಹೊಟ್ಟೆ ತುಂಬಿಸಿಕೊಳ್ಳಲು ಸಣ್ಣಪುಟ್ಟ ಕೆಲಸ ಹುಡುಕಿಕೊಂಡು ಗಿರಣಿ ಚಾಳ್‌ನ ಮನೆಗಳಲ್ಲಿ ಬದುಕುತ್ತಾ ಬರುತ್ತಿದ್ದಾರೆ. ಈಗ ಅವರ ಸೂರಿಗೂ ಕುತ್ತು ಬಂದಿದೆ. ಇಲ್ಲಿವರೆಗೂ ತಲೆ ಮೇಲೊಂದಿಷ್ಟು ನೆರಳಾದರೂ ಇದೆಯಲ್ಲ ಎಂದು ಸಮಾಧಾನಪಟ್ಟುಕೊಂಡಿದ್ದ ಕಾರ್ಮಿಕ ಕುಟುಂಬಗಳು ಈಗ ಬೆಚ್ಚಿಬಿದ್ದಿವೆ.

ಶತಮಾನದ ಹಿಂದೆ (1897 ರಲ್ಲಿ) ಮಿಲ್‌ಗೆಂದು ವಾರ್ಷಿಕ ಬಾಡಿಗೆ ಮೇಲೆ ಜಾಗ ನೀಡಿದ್ದ ಕುಟುಂಬಗಳ ಸದಸ್ಯರು ಈಗ ತಮ್ಮ ಭೂಮಿ ವಾಪಸ್ ಬೇಕೆಂದು ಕೋರ್ಟ್ ಮೆಟ್ಟಲು ಏರಿದ್ದಾರೆ. ಹುಬ್ಬಳ್ಳಿಯ ಹೃದಯಭಾಗದಲ್ಲಿ ಈ ಜಾಗೆ ಇರುವುದರಿಂದ ರಿಯಲ್ ಎಸ್ಟೇಟ್ ಲೆಕ್ಕದಲ್ಲಿ ಕೋಟ್ಯಂತರ ರೂಪಾಯಿಗಳ ಮೌಲ್ಯ ಹೊಂದಿದೆ. ಇಂತಹ ಭೂಮಿಯನ್ನು ಭೂಮಾಲೀಕರು ವಾಪಸ್ ಪಡೆದುಬಿಟ್ಟರೆ ಗಿರಣಿ ಚಾಳ್‌ನ ನಿವಾಸಿಗಳು ಬೀದಿಯಲ್ಲೇ ವಾಸ ಮಾಡಬೇಕಾಗುತ್ತದೆ.



ವೀರಭದ್ರ ಹಾಲಹರವಿ


ಮಿಲ್ ಉಳಿಸಲಾಗದ ಸರ್ಕಾರಗಳು ಗಿರಣಿ ಚಾಳ್ ಅನ್ನಾದರೂ ಉಳಿಸುವ ಕೆಲಸಕ್ಕೆ ಮುಂದಾಗುತ್ತಿಲ್ಲ. ಬಿಜೆಪಿ ಸಂಸದ ಪ್ರಹ್ಲಾದ್ ಜೋಶಿಗೆ 'ಮಂಕಿ ಬ್ರ್ಯಾಂಡ್' ಕಸಬರಿಗೆ, 'ಬ್ಲ್ಯಾಕ್ ಬೆಲ್ಟ್' ಫಿನಾಯಿಲ್‌ಗಳನ್ನು ಸರ್ಕಾರಿ ಸಂಸ್ಥೆಗಳಿಗೆ ಮಾರುವುದರಲ್ಲೇ ಆಸಕ್ತಿ, ಸ್ಪೀಕರ್ ಜಗದೀಶ್ ಶೆಟ್ಟರ್‌ಗೆ ಸಹೋದರ ಪ್ರದೀಪ್ ಶೆಟ್ಟರನ ನೆಲಗಳ್ಳತನಕ್ಕೆ ಬೆಂಗಾವಲಾಗಿ ನಿಲ್ಲುವ 'ಜವಾಬ್ದಾರಿ' ಬೇರೆ ಇದೆ. ಇದೇ ಮಿಲ್ ಕಾರ್ಮಿಕನ ಮಗನಾದ ಹುಬ್ಬಳ್ಳಿ ಬಿಡ್ಡಿ ಶಾಸಕ ವೀರಭದ್ರಪ್ಪ ಹಾಲಹರವಿಗೆ ಮಿಲ್‌ನ ಅನ್ನದ ಋಣವೂ ನೆನಪಾಗುತ್ತಿಲ್ಲ. ಈ ಮಿಲ್‌ನ ವಾಚ್‌ಮನ್ ಸೂಪರ್‌ವೈಸರ್ ಒಬ್ಬರ ಮಗನಾಗಿರುವ ನವಲಗುಂದದ ಬಿಡ್ಡಿ ಶಾಸಕ ಶಂಕರ ಪಾಟೀಲ ಮುನೇನಕೊಪ್ಪನಂತೂ 'ನನಗ್ಯಾಕೆ ಈ ಉಸಾಬರಿ' ಎಂದು ನವಲಗುಂದದಲ್ಲೇ ಮೇಯುತ್ತಿದ್ದಾನೆ.

ಹಕ್ಕುಪತ್ರವಿದೆ, ಹಕ್ಕೂ ಇದೆ

ಗಿರಣಿ ಚಾಳ್‌ನಲ್ಲಿ 600 ಕ್ಕೂ ಹೆಚ್ಚಿನ ಮನೆಗಳಿದ್ದು ಐದು ಸಾವಿರ ಜನ ವಾಸಿಸುತ್ತಿದ್ದಾರೆ. ಸುಮಾರು 50-60 ವರ್ಷಗಳಿಂದ ಇಲ್ಲೇ ಬದುಕಿರುವ ಇವರಿಗೆ ಈ ಜಾಗದ ಮೇಲೆ ಹಕ್ಕೂ ಇದೆ. ಹಾಗಂತ ಸರ್ಕಾರದ ದಾಖಲೆಗಳೇ ಹೇಳುತ್ತವೆ. 1976 ರಲ್ಲಿ ಹೊರಡಿಸಿದ ಸರ್ಕಾರಿ ಅಧಿಸೂಚನೆ (HMA-316/M.N.1-76) ಪ್ರಕಾರ ಇಲ್ಲಿನ 300 ಮನೆಗಳಿರುವ ಪ್ರದೇಶವನ್ನು ಸ್ಲಮ್ ಅಂತಾ ಘೋಷಿಸಿದ್ದಾರೆ. ಮತ್ತೊಂದು ಆದೇಶ (ವ್ಸ/102/SMB 2002) ಪ್ರಕಾರ ಇವರಿಗೆಲ್ಲ ಹಕ್ಕುಪತ್ರವನ್ನು ನೀಡಲಾಗಿದೆ. ಇದರ ಆಧಾರದ ಮೇಲೆಯೇ ಮಹಾನಗರ ಪಾಲಿಕೆ ಇಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿದೆ. ಇಲ್ಲಿನ ನಿವಾಸಿಗಳು ಎಲ್ಲರಂತೆ ಪಾಲಿಕೆಗೆ ತೆರಿಗೆ, ಶುಲ್ಕ ಕಟ್ಟುತ್ತಲೇ ಬಂದಿದ್ದಾರೆ. ಆದ್ದರಿಂದ ಗಿರಣಿ ಚಾಳ್ ಉಳಿಸುವುದು ಸರ್ಕಾರದ ತುರ್ತು ಜವಾಬ್ದಾರಿಯಾಗಿದೆ.

ಮಿಲ್ ಮುಚ್ಚಲು ಸರ್ಕಾರಗಳೇ ಕಾರಣ

1898 ರಲ್ಲಿ ಹುಬ್ಬಳ್ಳಿಯ ಕಾರವಾರ ರಸ್ತೆಯಲ್ಲಿ ಬ್ರಿಟಿಷರು ಈ ಮಿಲ್ ಸ್ಥಾಪಿಸಿದರು. ಉತ್ತರ ಕರ್ನಾಟಕದಲ್ಲಿ ಆಗ ಸಾಕಷ್ಟು ಹತ್ತಿ ಬೆಳೆಯುತ್ತಿದ್ದರಿಂದ ಮಿಲ್‌ನ ಅವಶ್ಯವೂ ಇತ್ತು. ದೇಶಪಾಂಡೆ ಎಂಬುವವರ 15 ಎಕರೆ, ಇರಕಲ್ ಮನೆತನದ 10 ಎಕರೆ, ದೇಸಾಯಿವರ 33 ಗುಂಟೆ, ಚಿಟಗುಪ್ಪೆ ಫ್ಯಾಮಿಲಿಯ 5.37 ಎಕರೆ ಭೂಮಿಯನ್ನು ದಾನವಾಗಿ ಪಡೆಯಲಾಗಿತ್ತು. ಆದರೆ ಮಿಲ್ ಮುಚ್ಚಿದರೆ ತಮಗೆ ಜಾಗ ವಾಪಸ್ ಬೇಕೆಂದು ಆ ಕುಟುಂಬಗಳು ಒಡಂಬಡಿಕೆ ಮಾಡಿಕೊಂಡಿದ್ದವು. ಬ್ರಿಟಿಷರ ನಂತರ ಹಲವು ದಶಕಗಳ ಕಾಲ ಈ ಮಿಲ್‌ಅನ್ನು ಸರ್ಕಾರ ನಡೆಸಿತು. ನಂತರ ಸಹಕಾರಿ ತತ್ವದಡಿ ಮಿಲ್ ನಡೆಸುತ್ತಾ ಬರಲಾಗಿತ್ತು. ಜವಳಿ ಉದ್ಯಮದಲ್ಲಿನ ಪೈಪೋಟಿ, ರಾಜಕಾರಣಿಗಳ ಬೇಜವಾಬ್ದಾರಿತನ, ಅಧಿಕಾರಿಗಳ ಲೂಟಿಕೋರತನಗಳಿಂದ ಮಿಲ್ ಸೊರಗುತ್ತಾ ಹೋಗಿ, ಬ್ಯಾಂಕಿನ ಸಾಲ ಏರುತ್ತಾ ಬಂತು.



ಶಂಕರ್ ಪಾಟೀಲ್

ಕಾರ್ಮಿಕ ಮುಖಂಡರಾಗಿದ್ದ ದಿ. ಎ.ಜಿ. ಮುಧೋಳ್, ದಿ. ಪಿ.ಎಲ್. ದೇಕಣಿಕ್, ದಿ. ರಾಮಣ್ಣ ಗಂಗೂರರ ಕಾಲದಲ್ಲಿ ಕಾರ್ಮಿಕರ ಹಿತಾಸಕ್ತಿಗಳಿಗಾಗಿ ಹೋರಾಟಗಳು ನಡೆದು ಒಂದಿಷ್ಟು ಆಶಾಭಾವನೆ ಇತ್ತು. ಮುಂದೆ ಇವರ ಕಾಲಾನಂತರ ರಾಜಕಾರಣಿಗಳು, ಅಧಿಕಾರಿಗಳದ್ದೇ ಕಾರುಬಾರಾಯಿತು.

ಸರ್ಕಾರದ ಮುಖೇಡಿ ಕೆಲಸದಿಂದಾಗಿ ಮಿಲ್ ಮುಚ್ಚುವ ಹಂತ ತಲುಪಿದಾಗ ದಾವಣಗೆರೆಯ ಮಹಾದೇವಪ್ಪ ಮಿಲ್ ವಹಿಸಿಕೊಂಡರು. ಆಗಿಂದ ಇದು ಮಹಾದೇವ ಮಿಲ್ಸ್ (ಮೂಲ ಹೆಸರು ಸದರ್ನ್ ಮರಾಠಾ ಸ್ಪಿನ್ನಿಂಗ್ ಮಿಲ್) ಆಯ್ತು. ಇದನ್ನು ನಡೆಸುವುದರಲ್ಲೇ ಹೈರಾಣಾದ ಮಹಾದೇವಪ್ಪ 1979 ರಲ್ಲಿ ಸರ್ಕಾರಕ್ಕೆ ವಾಪಸ್ ಕೊಟ್ಟರು. ಇಲ್ಲಿ ಉತ್ಪಾದನೆ ಆಗುತ್ತಿದ್ದ ಬಟ್ಟೆಯನ್ನು ಸರ್ಕಾರವೇ ಖರೀದಿಸಿ, ತನ್ನ ಇಲಾಖೆಗಳ ಅಗತ್ಯಗಳಿಗೆ ಬಳಸಿದ್ದರೆ ಮಿಲ್ ಲಾಸ್‌ನಲ್ಲಿ ಬರುತ್ತಿರಲಿಲ್ಲವೇನೋ? (ದಿನೇದಿನೇ ಕಾರ್ಮಿಕರು ಕೆಲಸ ಕಳೆದುಕೊಳ್ಳತೊಡಗಿ 12 ಸಾವಿರದಷ್ಟಿದ್ದ ಕಾರ್ಮಿಕರ ಸಂಖ್ಯೆ 600 ಕ್ಕಿಳಿಯಿತು. 1997 ರಲ್ಲಿ ಜೆ.ಎಚ್. ಪಟೇಲ್ ಸರ್ಕಾರ ಮಿಲ್ ಮುಚ್ಚಲು ನಿರ್ಧರಿಸಿ, ಅಳಿದುಳಿದ ಕಾರ್ಮಿಕರನ್ನೂ ಬೀದಿಗೆ ತಳ್ಳಿತು. ಅವರಿಗೆ ಪರ್ಯಾಯ ವ್ಯವಸ್ಥೆಯನ್ನೂ ಮಾಡಲಿಲ್ಲ.



ಹಿಂದೆಲ್ಲ ಸಚಿವರಾಗಿದ್ದ ಈ ಭಾಗದ ಎ.ಎಮ್. ಹಿಂಡಸಗೇರಿ, ಪಿ.ಸಿ ಸಿದ್ದನಗೌಡರ್‌ಗಳು ಮಿಲ್ ಉಳಿಸುವ ಪ್ರಯತ್ನ ಮಾಡಲಿಲ್ಲ. ಕೇಂದ್ರ ಸಚಿವರಾಗಿದ್ದ ಎಸ್.ಆರ್. ಬೊಮ್ಮಾಯಿಯೂ ಈ ಕಡೆ ನೋಡಲಿಲ್ಲ. ಮಿಲ್‌ನಲ್ಲಿ ದುಡಿದು ಪಗಾರ, ಬೋನಸ್, ಗ್ರ್ಯಾಚುಯಿಟಿಗಳನ್ನು ಪಡೆಯುವುದೇ ಕಷ್ಟವಾಗಿತು. ಈ ಜಂಜಾಟದಲ್ಲಿ ಐವರು ಕಾರ್ಮಿಕರು ಹಾಸಿಗೆ ಹಿಡಿದು ಸತ್ತೇ ಹೋದರು.

ಮುಂದೆ ಮಿಲ್‌ನ ಸಾಲ ತೀರಿಸಲು ಮಿಲ್‌ನ ಆಸ್ತಿ ಯಂತ್ರೋಪಕರಣ, ಪೀಠೋಪಕರಣಗಳನ್ನೆಲ್ಲ ಮಾರಲಾಯ್ತು.

ಈಗ ಕುತ್ತಿಗೆಗೆ ಬಂದಿದೆ

ಮಿಲ್ ಮುಚ್ಚಿ 12 ವರ್ಷಗಳಾಗುತ್ತ ಬಂತು. ಕನಿಷ್ಠ ವಾಸಿಸಲು ಗಿರಣಿ ಚಾಳ್ ಆಧಾರವಾಗಿದೆಯಲ್ಲ ಎಂದು ಜೀವನ ನಡೆಸುತ್ತಿದ್ದವರು ಈಗ ಆತಂಕದಲ್ಲಿದ್ದಾರೆ. ಈ ಭೂಮಿಯೇನಾದರೂ ಮೂಲ ಒಡೆಯರ ಕುಟುಂಬಗಳಿಗೆ ವಾಪಸ್ ಹೋಗುವಂತಾದರೆ, ಆಗ ಸರ್ಕಾರ ಮುಂದೆ ಬಂದು ಗಿರಣಿ ಚಾಳ್ ಉಳಿಸಿಕೊಳ್ಳಬೇಕು. ಈಗ ವಿಧಾನಸೌಧದಲ್ಲಿ ಅಧಿವೇಶನ ನಡೆಯುತ್ತಿದೆ. ಈ ವಿಷಯವನ್ನು ಅಲ್ಲಿ ಎತ್ತಿ, ಗಿರಣಿ ಚಾಳ್ ಉಳಿಸುವುದು ಈ ಭಾಗದ ಶಾಸಕರ ಕರ್ತವ್ಯವಾಗಿದೆ. ಹೋಟೆಗೇಡಿ ಶಾಸಕರು ಇಷ್ಟಾದರೂ ಮಾಡಿ ಮರ್ಯಾದೆ ಉಳಿಸಿಕೊಳ್ಳಲಿ.

● ಹುಬ್ಬಳ್ಳಿಯಾಂವ್

ತಿರುವಳ್ಳುವರ್: ವಿಶ್ವಮಾನವತೆಯ ನೇಕಾರ

ಈ ಲೇಖನ 1991ರಲ್ಲಿ ಪ್ರಕಟಗೊಂಡಿತ್ತು. ಈಗ ತಿರುವಳ್ಳುವರ್ ಪ್ರತಿಮೆ ಅನಾವರಣಗೊಳ್ಳಲಿರುವ ಸಂದರ್ಭದಲ್ಲಿ ಅವರನ್ನು ಕುರಿತ ಲೇಖನವನ್ನು ಮತ್ತೆ ಪ್ರಕಟಿಸುತ್ತಿದ್ದೇವೆ.....



ಎಲ್ಲರಿಗಿಂತ ಹೆಚ್ಚು ಪ್ರೀತಿಸುವೆನೆಂದೆ
ಒಡನೆ ಮುನಿದಳು ಯಾರಿಗಿಂತ? ಯಾರಿಗಿಂತ?

ಬೇಡುತ್ತಲೇ ಬದುಕಲೆಂದು ಮನುಜರ ಸೃಷ್ಟಿಸಿದರೆ
ಆ ಜಗದೊಡೆಯ ಬೇಡುತ್ತ ಅಲೆದಲೆದು
ಹಾಳಾಗಲಿ.

ರಾಜದಂಡ ಮೇಲೆತ್ತಿ ಮೆಲ್ಲನಿಳಿಸಬೇಕು
ಬಹುಕಾಲ ಆಳಬಯಸುವ ಅರಸನು.

ಅವನು ಕೂಡಿದ ದಿನಗಳ ಎಣಿಸುತ್ತ
ಬದುಕಿರುವೆ ಜೀವ ಕಳೆಯುತ್ತ

ಕನಸಲ್ಲಿ ನನ್ನ ತೋಳಲೊರಗಿರುವವನು
ಕಣ್ಣು ತೆರೆದರೆ ನನ್ನ ಎದೆಯಲ್ಲಡಗುವನು

ನಿನ್ನೆ ಬಂದು ನನ್ನ ಕೊಂದ ಬಡತನ
ಇಂದೂ ಬರಲಿಹುದೆ?

ಚಿಗುರೆಯ ಚಕಿತ ನೋಟ ನಾಚಿಕೆಯಿರುವೀ
ಚೆಲುವೆಗಾವ ಒಡವೆ ಇಡಲಿ.

ಹತ್ತಿರಿದ್ದರೆ ಅವನ ಕುಂದುಗಳ ಕಾಣೆನು
ದೂರಾದರೆ ಕುಂದಲ್ಲದೆ ಬೇರೇನು ಕಾಣೆನು.

-ತಿರುವಳ್ಳುವರ್

■ ಅಗ್ರಹಾರ ಕೃಷ್ಣಮೂರ್ತಿ

ಸುಮಾರು ಎರಡು ಸಾವಿರ ವರ್ಷಗಳ ಹಿಂದಿನ ಮಾತು. ದಕ್ಷಿಣ ಭಾರತದ ಪೂರ್ವ ಕಡಲ ತೀರದಲ್ಲಿ ನವಿಲುಗಳು ನರ್ತಿಸುತ್ತಿದ್ದು ಸಾಲುಗಟ್ಟಿದ ತೆಂಗಿನಮರಗಳಿದ್ದ ಒಂದು ಪುಟ್ಟ ಹಳ್ಳಿ. ಅಲ್ಲಿನ ಬೀದಿಗಳಲ್ಲಿ ನೇಕಾರರ ಮಗ್ಗದ ಲಾಳಿಯ ಸದ್ದು. ದಿನನಿತ್ಯದ ವ್ಯವಹಾರಗಳ ಜೊತೆಗೆ ಮನಸ್ಸಿನಲ್ಲಿ ಕವಿಯಾಗಿ ಬೆಳೆಯುತ್ತಿದ್ದ ವ್ಯಕ್ತಿಯನ್ನು ಅಲ್ಲೇ ವಾಸಿಸುತ್ತಿದ್ದ ಸಹಾಯಮ್ ನೋಡಿದರು. ಆ ವ್ಯಕ್ತಿಯ ಉನ್ನತ ವಿಚಾರಗಳು, ಸರಳ ಜೀವನದಿಂದ ಸಂತೋಷಗೊಂಡ ಅವರು ಆ ವ್ಯಕ್ತಿಗೆ ತಮ್ಮ ಮಗಳು ವಾಸುಕಿಯನ್ನು ಕೊಟ್ಟು ಮದುವೆ ಮಾಡಿದರು. ವಾಸುಕಿಯೊಂದಿಗೆ ಈ ನೇಕಾರ ತನ್ನ ಪರಿಪೂರ್ಣ ಜೀವನ ಸಾಗಿಸುತ್ತಾನೆ. ಒಂದು ದಿನ ವಾಸುಕಿ ಊಟಕ್ಕೆ ತಂಗಳನ್ನ ಬಡಿಸಿದಳು. ಅವನು ತನ್ನ ಕೈಬೆರಳುಗಳು ಸುಡುತ್ತಿವೆ ಎಂದ! ಅವಳು ವಾದ ಮಾಡದೆ ತಂಗಳನ್ನು ಬೀಸಣಿಗೆಯಿಂದ ಬೀಸತೊಡಗುತ್ತಾಳೆ! ಇನ್ನೊಂದು ದಿನ ಮಟಮಟ ಮಧ್ಯಾಹ್ನ ನೇಕಾರ ತನ್ನ ಕೈಯಲ್ಲಿದ್ದ ಲಾಳಿ ಕೆಡವಿ ಅದನ್ನು ಹುಡುಕಲು ದೀಪ ತರುವಂತೆ ಹೇಳಿದ, ವಾಸುಕಿ ತಡಮಾಡದೆ ದೀಪ ಹಚ್ಚಿ ತಂದಳು! ಇಂಥ ಮುಗ್ಧ, ಸರಳ ಬದುಕು ಅವರದು. ಆದರೆ ನೇಕಾರನ ಮನಸ್ಸಿನಲ್ಲಿ ಲೋಕವ್ಯವಹಾರಗಳ ಬಗೆಗೆ ರೂಪುಗೊಳ್ಳುತ್ತಿದ್ದ ಅಪರಿಮಿತವಾದ ತಾತ್ವಿಕ, ನೈತಿಕ, ಆಧ್ಯಾತ್ಮಿಕ ವಿಚಾರಗಳೆಲ್ಲವು ಹರಳುಗಟ್ಟುತ್ತಿದ್ದವು. ಅವನು ತನ್ನ 'ಡೈರಿ'ಯಲ್ಲಿ ಎಲ್ಲವನ್ನು ಗುರುತು ಹಾಕಿಕೊಂಡು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಅಭಿವ್ಯಕ್ತಗೊಳಿಸತೊಡಗಿದ. ಅವನು ಸುದೀರ್ಘವಾದ ಕಾವ್ಯಕಥೆಗಳ ರಚನೆಗೆ ತೊಡಗಲಿಲ್ಲ. ನಮ್ಮಲ್ಲಿ ದ್ವಿಪದಿಯೆನ್ನುತ್ತೇವಲ್ಲ, ಅಂಥ ಎರಡೆರಡು ಸಾಲಿನಲ್ಲಿ ತನ್ನ ಅಗಾಧ ಅನುಭವಗಳನ್ನು ನೇಯುತ್ತಿದ್ದ. ಅವನು ಶಬ್ದಗಳನ್ನು ಆರಾಧಿಸುತ್ತಿದ್ದ. ಒಂದು ಶಬ್ದವನ್ನೂ ಅನಗತ್ಯವಾಗಿ ಬಳಸುತ್ತಿರಲಿಲ್ಲ. 'ಹದವರಿತು ನುಡಿ/ಆದ ಮೀರುವ ಧರ್ಮಾರ್ಥವಿಲ್ಲವೆಂದು ತಿಳಿ' ಎಂದವ ಅವನು.

ಜಗತ್ತಿನ ಎಲ್ಲ ಮಹಾನ್ ಚಿಂತಕರು ಸೂತ್ರೀಕರಿಸಿದ ವಿಚಾರಗಳನ್ನೆಲ್ಲ ಎರಡು ಸಾವಿರ ವರ್ಷಗಳ ಹಿಂದೆಯೇ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಜನರ ಮುಂದಿಟ್ಟ ಕವಿಯಾದ ಆ ನೇಕಾರ. ಅಖಂಡ ವಿಶ್ವದೃಷ್ಟಿ, ಪ್ರೀತಿ ಮತ್ತು ಅನುಕಂಪಗಳ ಮೂಲಕ ಬದುಕಿನ ಸತ್ಯವನ್ನು ಸಾರಿದ ಸಂತನಾದ. ಯಾವ ಬಗೆಯ ಜಾತಿಮತಗಳ ಸಂಕೋಲೆಗೂ ಸಿಕ್ಕದಂತಹ ಸರಳ ನೈತಿಕ ಮಾನವತೆಯ ಸಾರ್ವತ್ರಿಕ ಆದರ್ಶವನ್ನು ರೂಪಿಸುವ ಕಡೆಗೆ ಆತನ ಹಂಬಲವಿತ್ತು. ಆತ ನಿರ್ಮಿಸಿದ ನುಡಿಗಟ್ಟುಗಳು, ಅಭಿವ್ಯಕ್ತಿ ಸಾಮರ್ಥ್ಯ, ಜಾತಿಮತ ಅಥವಾ ರಾಷ್ಟ್ರಗಳೆಂಬ ಅಲ್ಪತನಗಳ ನಿರಾಕರಣೆ ಅವನನ್ನು ವಿಶ್ವಮಾನವತೆಯ ಕವಿಯನ್ನಾಗಿಸಿದವು.



ಈಗ ಫ್ರಾನ್ಸಿನಲ್ಲಿ 48 ಸದಸ್ಯರುಳ್ಳ ಸಾಹಿತ್ಯ ಸಂಸ್ಥೆಯೊಂದಿದೆ. ಅಂಥದೇ ಆ ನೇಕಾರನ ಕಾಲದಲ್ಲಿ 49 ಸದಸ್ಯರುಗಳಿದ್ದ ಸಾಹಿತ್ಯ ಸಂಸ್ಥೆಯೊಂದು ಮಧುರೆಯಲ್ಲಿತ್ತು. ಈ ಕವಿ ತನ್ನ 133 ಅಧ್ಯಾಯಗಳುಳ್ಳ 1330 ದ್ವಿಪದಿಗಳ ಗ್ರಂಥ ಹೊತ್ತು ಮಧುರೆಗೆ ಹೋಗಿ ಅಲ್ಲಿದ್ದ ಕವಿಪುಂಗವರು ಮತ್ತು ವಿದ್ವಜ್ಜನರ ನಡುವೆ ಮಂಡಿಸಿ ಎಲ್ಲರ ಮೆಚ್ಚುಗೆಗೆ ಪಾತ್ರನಾದ. ಅವನ ಈ ದ್ವಿಪದಿಗಳಲ್ಲಿ ಇಂಥ ವಿಚಾರ ಇಲ್ಲವೆಂದಿಲ್ಲ. ಧರ್ಮ, ಅರ್ಥ, ಕಾಮ ಈ ಮೂರು ಮನುಷ್ಯಲೋಕದ ವ್ಯವಹಾರಗಳ ಬಗೆಗೆ ಅತ್ಯಂತ ಅನುಭವಪೂರ್ಣ ಸೂಕ್ತಿಗಳನ್ನು ನೇಯ್ದಿದ್ದ. ಅವನಿಗೆ ಮೋಕ್ಷದಲ್ಲಿ ನಂಬಿಕೆಯಿರಲಿಲ್ಲ. ಬಸವಣ್ಣನ ಹಾಗೆ 'ಇಲ್ಲಿ ಸಲ್ಲುವ ತೆರದಿ ಬಾಳಿದವ/ಸ್ವರ್ಗದ ಅಮರರ ಗೆಲುವ' ಎಂದನು.

ಡಾ. ಅಲ್ಬರ್ಟ್ ಷ್ವೆಟ್ಜರ್ ತಮ್ಮ 'ಇಂಡಿಯನ್ ಥಾಟ್ ಅಂಡ್ ಇಟ್ಸ್ ಡೆವಲಪ್‌ಮೆಂಟ್' ಗ್ರಂಥದಲ್ಲಿ "ಇಷ್ಟು ಗಂಭೀರವಾದ ವಿವೇಕಯುತ ಸೂತ್ರಗಳ ಸಂಗ್ರಹವನ್ನು ವಿಶ್ವದ ಸಾಹಿತ್ಯರಾಶಿಯಲ್ಲಿ ಕಾಣುವುದು ಅಪರೂಪ" ಎಂದಿದ್ದಾನೆ. ಅವನು ಫ್ರೆಂಚ್ ಭಾಷೆಯ ಮಹಾವಿದ್ವಾಂಸ ಎಂ. ಏರಿಯಲ್‌ಗೆ ಬರೆದ ಪತ್ರದಲ್ಲಿ "ಮಾನವ ಚಿಂತನೆಗಳ ಅತ್ಯುಚ್ಚವಾದ ಶುದ್ಧ ಅಭಿವ್ಯಕ್ತಿಯ... ಮೇರುಕೃತಿ... ಮಿಗಿಲಾಗಿ ಇಲ್ಲಿರುವ ಅದ್ಭುತವಾದ ಅಂಶಗಳೆಂದರೆ, ಯಾವ ಜಾತಿ-ಜನಾಂಗ ಅಥವಾ ನಂಬಿಕೆಗಳನ್ನು ಗಣಿಸದೆ, ಇಡೀ ಮಾನವಕುಲವನ್ನು ಸಂಬೋಧಿಸಿ ಕವಿ ಹೇಳಿರುವುದು, ಸಾರ್ವಭೌಮ ನೀತಿ ಮತ್ತು ಸಮಗ್ರ ವಿವೇಕವನ್ನು ಮಂಡಿಸಿರುವುದು; ಅಲೌಕಿಕ, ಅಮೂರ್ತ ಸ್ವರೂಪದಲ್ಲಿ, ಗುಣ, ಧರ್ಮಗಳಲ್ಲಿ ಸತ್ಯದಲ್ಲಿ ಅವುಗಳ ಸಾರಸರ್ವಸ್ವವನ್ನು ಸಾರಿರುವುದು; ಗೃಹಜೀವನ ಮತ್ತು ಸಾಮಾಜಿಕ ಜೀವನಗಳ ಉನ್ನತ ನೀತಿಗಳನ್ನು ಒಂದೇ ವರ್ಗವೆಂಬಂತೆ ನಿರೂಪಿಸಿರುವುದು; ಚಿಂತನೆ, ಭಾಷೆ, ಕಾವ್ಯಗುಣಗಳಲ್ಲಿ ಪರಿಪೂರ್ಣವಾದ ಐಕ್ಯವನ್ನು ಸಾಧಿಸಿರುವುದು; ದೈವಪ್ರಕೃತಿಯ ಮಹಾದ್ಭುತಗಳನ್ನು ಸರಳ ಆಧ್ಯಾತ್ಮಿಕ ಚಿಂತನೆಯ

ತಿರುವಳ್ಳುವರ್ ಪ್ರತಿಮೆ ವಿರೋಧ ಬೇಡ!

ಕಳೆದ 12 ವರ್ಷಗಳಿಂದ ಮುಸುಕಿನ ಮರೆಯಲ್ಲೇ ನಿಂತಿರುವ ಮಹಾ ದಾರ್ಶನಿಕ, ತಮಿಳು ಕವಿ ತಿರುವಳ್ಳುವರ್ ಪ್ರತಿಮೆಗೆ ಮುಂದಿನ ಆಗಸ್ಟ್ 9 ರಂದು ಅನಾವರಣಗೊಳ್ಳುವ ಭಾಗ್ಯ ಸಿಗಲಿದೆ....

ಎಲ್ಲಾ ಅಂದುಕೊಂಡಂತೆ ನಡೆದಲ್ಲಿ ಮಾತ್ರ!

ಯಡಿಯೂರಪ್ಪ ಕರ್ನಾಟಕದ ಮುಖ್ಯಮಂತ್ರಿಯಾದ ಮೇಲೆ ಕಡಿದು ಕಟ್ಟೆ ಹಾಕಿರುವುದು ಅಷ್ಟರಲ್ಲೇ ಇದೆಯಾದರೂ, ಈತನ ಹಿಂದೂತ್ವವಾದಿ ಘಟಂಗರ ಗುಂಪು ಮೊದಲಿನಿಂದಲೂ ಕನ್ನಡಿಗ-ತಮಿಳರ ಜಗಳಕ್ಕೆ ಪ್ರಚೋದನೆ, ಬೆಂಬಲ ಕೊಡುತ್ತಾ ಬಂದಿದ್ದರೂ ಸಹ ಅದು ಹೇಗೊ ಏನೋ ಈ ಬಾರಿ ಬೆಂಗಳೂರಿನಲ್ಲಿ ತಿರುವಳ್ಳುವರ್ ಪ್ರತಿಮೆ ಅನಾವರಣ ಮಾಡಲು ಯುದ್ದಿ ಒಪ್ಪಿಕೊಂಡು ಬಂದಿದ್ದಾರೆ.

ಇದಕ್ಕೆ ಪ್ರತಿಯಾಗಿ ಚೆನ್ನೈನಲ್ಲಿ ಕನ್ನಡ ದಾರ್ಶನಿಕ ಸರ್ವಜ್ಞನ ಪ್ರತಿಮೆಯನ್ನು ಸ್ಥಾಪಿಸಲು ಕರುಣಾನಿಧಿ ಒಪ್ಪಿದ್ದಾರೆ. ಇದಕ್ಕೆ ಇದೇ ಆಗಸ್ಟ್ 13 ರಂದು ದಿನ ನಿಗದಿಯಾಗಿದೆ.

ಇದೊಂಥರಾ ಕೊಡುಕೊಳ್ಳುವಿಕೆಯ ಸಾಂಸ್ಕೃತಿಕ ವಿನಿಮಯದಂತಿದೆ. ತಪ್ಪೇನೂ ಇಲ್ಲ ಬಿಡಿ.

ಆದರೆ ಈ ಸುದ್ದಿ ಕೇಳಿದ ತಕ್ಷಣ ಮೂರು ಮುಕ್ಕಾಲು ಮೆಂಬರ್‌ಗಳಿರುವ ಒಂದೆರಡು ಕನ್ನಡ ಸಂಘಟನೆಗಳು ಎಂದಿನಂತೆ ವಿರೋಧ ಶುರು ಮಾಡಿದ್ದಾರೆ. ವಾಟಾಳು ನಾಗರಾಜು ತಮ್ಮ ಮೊದಲ ಸುತ್ತಿನ ಪ್ರತಿಭಟನೆಯ ರಿಹರ್ಸಲ್ ಪ್ರದರ್ಶಿಸಿದ್ದಾರೆ. ಇನ್ನೇನು ರಕ್ಷಣಾ ವೇದಿಕೆಯ ನಾರಾಯಣಗೌಡ, ಜಯ ಕರ್ನಾಟಕದ ಲ್ಯಾಂಡ್ ಮಾಫಿಯಾ ಮೆಂಬರ್‌ಗಳೂ ಅಖಾಡಕ್ಕಿಳಿಯಬಹುದು.

ಒಟ್ಟಿನಲ್ಲಿ ಯಾವುದರ ಬಗ್ಗೆಯೂ ಸಂಯಮದಿಂದ ಯೋಚಿಸಲಾಗದ, ಅರ್ಥಪೂರ್ಣ ಕೆಲಸ ಮಾಡಲಾಗದ ಕೆಲವು ಎಲಿಮೆಂಟುಗಳಿಗೆ ಈಗ ತಿರುವಳ್ಳುವರ್ ಪ್ರತಿಮೆ ವಿಚಾರವನ್ನೇ ವಿವಾದ ಮಾಡಿಕೊಂಡು ಫುಲ್ ಮೀಲ್ಸ್ ಉಣ್ಣುವ ತಹತಹ ಶುರುವಾಗಿದೆ.

ಈ ಮೊದಲೆಲ್ಲಾ, ಬೆಂಗಳೂರಿನಲ್ಲಿ ತಿರುವಳ್ಳುವರ್ ಪ್ರತಿಮೆ ಸ್ಥಾಪನೆ ಮಾಡಲೇಬೇಕೆಂದಾದರೆ ಅತ್ತ ಮದರಾಸಿನಲ್ಲಿ ಕನ್ನಡ ಕವಿ ಸರ್ವಜ್ಞನ ಪ್ರತಿಮೆ ಸ್ಥಾಪನೆಗೆ ಅವಕಾಶ ಸಿಗಬೇಕು ಎಂದು ಕೆಲವು ಕನ್ನಡ ಸಂಘಟನೆಗಳು ಒತ್ತಾಯಿಸುತ್ತಿದ್ದವು. ಈಗ ಆ ಬೇಡಿಕೆಯೂ ಈಡೇರುತ್ತಿದೆ. ಸ್ವತಃ ತಮಿಳುನಾಡು ಸರ್ಕಾರವೇ ಮುಂದೆ ನಿಂತು ಚೆನ್ನೈನ ಅಯನಾವರಂ ಪಾರ್ಕ್‌ನಲ್ಲಿ ಸರ್ವಜ್ಞನ ಪ್ರತಿಮೆ ನಿಲ್ಲಿಸಲು ಒಪ್ಪಿಕೊಂಡಿದೆ. ಮುಂದಿನ ಆಗಸ್ಟ್ 13 ರಂದು ಸ್ವತಃ ಮುಖ್ಯಮಂತ್ರಿ ಯಡಿಯೂರಪ್ಪನವರೇ ಪ್ರತಿಮೆ ಅನಾವರಣ ಮಾಡಲು ಚೆನ್ನೈಗೆ ಹೋಗುತ್ತಿದ್ದಾರೆ.

ಕೆಲ ವರ್ಷಗಳಿಂದ ಕನ್ನಡ-ತಮಿಳರ ನಡುವಿನ ಅನೇಕ ಜಗಳ, ವಿವಾದಗಳಲ್ಲಿ ತಿರುವಳ್ಳುವರ್ ಪ್ರತಿಮೆ ವಿಚಾರವನ್ನು ಎಳೆತಂದು ರಾಡಿ ಎಬ್ಬಿಸಲಾಗುತ್ತಿತ್ತು. ಕನಿಷ್ಠ ಪಕ್ಷ ಈಗಲಾದರೂ ಇಲ್ಲಿ ತಿರುವಳ್ಳುವರ್ ಪ್ರತಿಮೆ ಅಲ್ಲಿ ಸರ್ವಜ್ಞ ಪ್ರತಿಮೆಯನ್ನು ಸ್ಥಾಪಿಸಿ ಈ ವಿವಾದವನ್ನು ಪರಸ್ಪರ ಗೌರವ-ಪ್ರೀತಿಯಿಂದ ಬಗೆಹರಿಸಿಕೊಳ್ಳುವ ಅವಕಾಶ ಸಿಗುತ್ತಿದೆ. ಆದರೆ ಕೆಲವರಿಗೆ ಇದೇ ಅಪಥ್ಯ.

ಆಂಧ್ರ ಗಡಿ ವಿವಾದ ಚಳವಳಿಗಾರ ವಿನಾದ


ಈಗ ತಿರುವಳ್ಳುವರ್ ಪ್ರತಿಮೆ ಬೇಡ ಎಂಬ ಪ್ರತಿರೋಧದ ದನಿ ಮೊದಲಿದ್ದಷ್ಟು ತೀವ್ರವಾಗಿಲ್ಲ, ಆದರೂ ಒಂದೆರಡು ಸಣ್ಣ ಕನ್ನಡ ಸಂಘಟನೆಗಳು ಈಗ ತಾನೆ ಪ್ರತಿಭಟನೆ ಚಾಲೂ ನೀಡುತ್ತಿವೆ. ಕೆಲವು ಕದನ ಕುತೂಹಲಿ ದಿನಪತ್ರಿಕೆಗಳೂ ಈ ಬೆಂಕಿಗೆ ಇನ್ನಷ್ಟು ತುಪ್ಪ ಸುರಿಯುವುದು ಗ್ಯಾರಂಟಿ. ಇಲ್ಲಿ ಒಂದು ಡೌಟು ಏನೆಂದರೆ ಇದೇ ವಾಟಾಳು, ನಾರಾಯಣಗೌಡ ಮುಂತಾದವರು ಒಂದು ಪುಟ್ಟ ಪ್ರತಿಮೆ ವಿಚಾರದಲ್ಲಿ ಹೀಗೆ ತಾಂಡವ ನೃತ್ಯ ಮಾಡುತ್ತಾ, ವೀರಾವೇಶದ ಹೇಳಿಕೆ ಕೊಡುತ್ತಾ ಇರುತ್ತಾರಲ್ಲವೆ.....?

ಆದರೆ ಬಳ್ಳಾರಿಯ ರೆಡ್ಡಿ ಬ್ರದರ್ಸ್ ಆಂಧ್ರ-ಕರ್ನಾಟಕ ಗಡಿಯನ್ನೇ ಬದಲಿಸಿ ಕರ್ನಾಟಕಕ್ಕೆ ಅನ್ಯಾಯ ಮಾಡಿ ಅದಿರು ದೋಚುತ್ತಿದ್ದರೂ ಯಾರೂ ಪ್ರತಿಭಟಿಸಲಿಲ್ಲ ಯಾಕೆ?

ಯಾವ ಕನ್ನಡ ಚಳವಳಿಯ ನಾಯಕನಿಂದಲೂ ಒಂದು ಪ್ರತಿಭಟನೆ, ಒಂದು ಖಂಡನೆ, ಒಂದು ಮೆರವಣಿಗೆ... ಊಹುಂ... ಕಡೆಪಕ್ಷ ರೆಡ್ಡಿಗಳ ಅಕ್ರಮದ ವಿರುದ್ಧ ಒಂದು ಪೇಪರ್ ಸ್ಟೇಟ್‌ಮೆಂಟೂ ಯಾಕೆ ಕೊಡುತ್ತಿಲ್ಲ ಈ ಕನ್ನಡಾಂಬೆಯ ವೀರಪುತ್ರರು?

ತಿರುವಳ್ಳುವರ್-ಸರ್ವಜ್ಞ ಪ್ರತಿಮೆ ಸ್ಥಾಪನೆಗೆ ಅಡ್ಡಿ!

ಹೊಗೇನಕಲ್‌ನಲ್ಲಿ ವಿವಾದವೇ ಇರದಿದ್ದರೂ ಪ್ರತಿಭಟನೆ!



ಗವಲ್ಲಿ ವ್ಯಕ್ತಪಡಿಸಿರುವುದು, ಹೃದಯದ
ಮೂಕ್ಷ್ಮ ಭಾವನೆಗಳನ್ನು ಸರಾಗವಾಗಿ,
ವೃಷ್ಟಚಿತ್ರದಿಂದ ವಿಶ್ಲೇಷಿಸಿರುವುದು" ಎಂದು
ಸಿದ್ದಾನೆ.

'ಚೆಲುವೆಯು ಕಾಡಿಗೆಯ ಕಣ್ಣುಗಳಲಿ ಎರಡು
ಟಗಳು/ಒಂದು ನೋವತಹುದು ಮತ್ತೊಂದು
ನ ಹಚ್ಚುವುದು' ಎಂಬೀ ದ್ವಿಪದಿಯನ್ನು
ವ ಜರ್ಮನ್ ವಿದ್ವಾಂಸ ಡಾ. ಗ್ರಾಲ್ ಕವಿಯು
ಲಿ ಭಾಷೆಯನ್ನೇ ಕಲಿತು ಅವನ ಎಲ್ಲ
ದಿಗಳನ್ನು ಜರ್ಮನ್ ಮತ್ತು ಲ್ಯಾಟಿನ್
ಗೆ 1856ರಲ್ಲಿ ಅನುವಾದ ಮಾಡತೊಡಗಿದ.
ರ್ ಬೆಸ್ಕಿ ಜನರನ್ನು ಕ್ರೈಸ್ತ ಮತಕ್ಕೆ
ಂತರಿಸಲು ಇಂಡಿಯಾಕ್ಕೆ ಬಂದಾಗ ಈ
ದಿಗಳನ್ನು ಓದಿ "ಕ್ರೈಸ್ತನಲ್ಲದ ಈ ಕವಿ ನರಕಕ್ಕೆ
ಗಿದ್ದರೂ ಈ ಮುಕ್ತಕಗಳನ್ನು ಹಾಡಿದ
ು ನಾಲಿಗೆ ನರಕಕ್ಕೆ ಹೋಗಿರಲಾರದು"
. ಸಹಮಾನವರಲ್ಲಿ ವಿಶ್ವಪ್ರೇಮವನ್ನು
ಗಿಂತ ಮೊದಲು ಯಾರೂ
ಧಿಸಿರಲಿಲ್ಲವೆಂಬ ಅವನ ನಂಬಿಕೆ ಇಂಥ
ಪ್ರಾಯಕ್ಕೆಡೆಮಾಡಿಕೊಟ್ಟಿತು. 1848 ರಲ್ಲಿ
ವಿದ್ವಾಂಸನೊಬ್ಬ ಫ್ರೆಂಚಿಗೂ 1886 ರಲ್ಲಿ
ಜಿ.ಯು. ಪೋಪ್ ಇಂಗ್ಲಿಷಿಗೂ
ವಾದಿಸಿದರು. ಅಷ್ಟೇ ಅಲ್ಲದೆ ಈ ದ್ವಿಪದಿಗಳು
ಫಿನಿಷ್, ಪೋಲಿಷ್, ರಷ್ಯನ್, ಚೀನೀ,
ಮಲಯ ಮತ್ತು ಬರ್ಮಾ ಭಾಷೆಗಳಲ್ಲಿ
ವಾದಗೊಂಡಿವೆ. ಭಾರತದ ಬಹುಪಾಲು ಎಲ್ಲ
ಭಾಷೆಗಳಲ್ಲೂ ಈ ದ್ವಿಪದಿಗಳು
ವಾದಗೊಂಡಿವೆ.

ಸುಮಾರು 2000 ವರ್ಷಗಳ ಹಿಂದೆ
ಊ ಜಗತ್ತಿನ ಎಲ್ಲ ಮನುಷ್ಯರನ್ನೂ
ಸಬಲ್ಲಂತ ಚೌಟೋಕ್ತಿಗಳನ್ನು ರಚಿಸಿದ ಈ
ವನ ಹೆಸರು ವಳ್ಳುವರ್. ಅವನನ್ನು
ರದಿಂದ ತಿರುವಳ್ಳುವರ್ ಅನ್ನುತ್ತಾರೆ. ಅವನು
ದ ಈ ದ್ವಿಪದಿಗಳನ್ನು ತಮಿಳಿನಲ್ಲಿ ಕುರುಳ್
ತ್ತಾರೆ. ಅಂಥ ತಿರುಕ್ಕುರಳ್‌ನ ಕವಿ
ವಳ್ಳುವರ್ ಈಗ ನಮ್ಮ ನೆರೆರಾಜ್ಯದ
ಧಾನಿ ಮದ್ರಾಸಿನ ಒಂದು ಭಾಗವಾದ
ಪುರದಲ್ಲಿ ಹುಟ್ಟಿದ್ದ. 2000 ವರ್ಷಗಳ
ನಮ್ಮ ಈ ಕಡೆಯ ಊರುಗಳಲ್ಲೂ
ದಿದ್ದಿರಬಹುದು. ಈಗ ಅವನ ಪ್ರತಿಮೆ
ಕಣ್ಣಿಗೆ ಭಯೋತ್ಪಾದಕನೆಂಬಂತೆ
ತ್ತಿರುವುದು ಒಂದು ದೊಡ್ಡ ವಿಪರ್ಯಾಸ.
ಮಿದುಳುಗಳಿಗೆ ಅಣುಅಣುವಾಗಿ
ನೈಡ್ ಸೇರಿರುವುದರ ಸಂಕೇತ. ■

ಡ್ಡಿಗಳು ಕರ್ನಾಟಕದ ಗಡಿಯನ್ನೇ ಒತ್ತುವರಿ
ಮೀಸೆ ತಿರುವಿಕೊಂಡರೂ ಬೆಂಬಲ!!
ಗಿದೆ ನಮ್ಮ ಕನ್ನಡ ಹೋರಾಟಗಾರರ
ತನ?
ರೆಡ್ಡಿಗಳ ಹತ್ತಿರ ವಾಟಾಳ್,
ಮಣಗೌಡ ಇನ್ನಿತರ ಲೀಡರ್‌ಗಳು ಏನಾದರೂ
ಮಾಡಿಕೊಂಡಿರಬಹುದಾ? ಇಂಥವರಿಂದ
ಗಲಿ ಕರ್ನಾಟಕವಾಗಲೀ ಉದ್ಧಾರವಾಗಲು
?


ವಿರೋಧ ಬೇಡ

ಗಸ್ಟ್ 9 ರಂದು ಬೆಂಗಳೂರಿನಲ್ಲಿ ಕರುಣಾನಿಧಿ
ದರಣಗೊಳಿಸಲಿರುವ ತಿರುವಳ್ಳುವರ್ ಪ್ರತಿಮೆ
ಆಗಸ್ಟ್ 13 ರಂದು ಚೆನ್ನೈನಲ್ಲಿ
ಯೂರಪ್ಪ ಅನಾವರಣ ಮಾಡಲಿರುವ ಸರ್ವಜ್ಞ
ಗಳಿಗೆ ಐತಿಹಾಸಿಕ ಮಹತ್ವವಿದೆ.
ರ್ನಾಟಕ-ತಮಿಳುನಾಡಿನ ನಡುವೆ ಕಾವೇರಿ
ಇನ್ನಿತರ ಜಗಳಗಳೇನೆ ಇರಲಿ ಈ
ತಿಕ ವಿನಿಮಯ ಆಗಲೇಬೇಕಾದ ಒಂದು
ತಿರುವಳ್ಳುವರ್-ಸರ್ವಜ್ಞ ಇವರೆಲ್ಲಾ
ಗಿಂತ, ನಾರಾಯಣಗೌಡನೆಂಬ ಹಫ್ತಾ
ವೀರನಿಗಿಂತ ದೊಡ್ಡವರು. ಇವರು
ಧರ್ಮ-ರಾಜ್ಯಗಳ ಗಡಿ ಮೀರಿ
ದವರು. ಹಾಗೆಂದು ಕಾವೇರಿ ನೀರು ಅಥವಾ
ಕಲ್ ವಿವಾದ ಇತ್ಯಾದಿಗಳಲ್ಲಿ ಕನ್ನಡಿಗರು
ನಾಡು ಸರ್ಕಾರದ ಉದ್ಧಟತನವನ್ನಾಗಲಿ,
ರವನ್ನಾಗಲಿ ಸಹಿಸಿಕೊಂಡಿರಬೇಕು ಎಂದಲ್ಲ
ಲ್ಲಾ ಜನಾಂಗೀಯ ದ್ವೇಷಕ್ಕೆ
ಗಬಾರದು ಅಷ್ಟೆ.

■ ಬಿಳಿದಾಳೆ ಪಾರ್ವತೀಶ್

ಬಿಜೆಪಿ ಪಾರ್ಟಿ ಕಟ್ಟೋದು ಸುಲಭ ಕಂಡ್ರೀ!

ಬಿಜೆಪಿಯ ಆಡಳಿತದ ವೈಖರಿಗೆ ಬೆಚ್ಚಿಬಿದ್ದ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳು ಕೈಜೋಡಿಸಿ ಹೋರಾಡುವ ಮಾತನಾಡುತ್ತಿರುವಾಗಲೇ, ಅತ್ತ ಮಂಡ್ಯ ಜಿಲ್ಲೆಯ ನಟೋರಿಯಸ್ ರಾಜಕಾರಣಿಗಳಿಬ್ಬರು ಕೈಹಿಡಿದುಕೊಂಡು ಆಲಂಗಿಸಿಕೊಂಡ ಸುದ್ದಿಯೊಂದು ಹೊರಬಿದ್ದಿದೆಯಲ್ಲಾ, ಸದರಿ ರಾಜಕಾರಣಿಗಳ ಪೈಕಿ ಒಬ್ಬ ಜೆಡಿಎಸ್‌ನ ಅಹಂಕಾರದ ಮೂಟೆಯಾದ ಚಲುವನಾಗಿದ್ದರೆ ಮತ್ತೊಬ್ಬ ಅರಾಜಕ ರಾಜಕಾರಣಿ ಶಿವರಾಮೇಗೌಡನೆಂಬುದೇ ಜಿಲ್ಲೆಯ ಜನರ ಕುತೂಹಲವನ್ನು ಕೆರಳಿಸಿದೆಯಂತಲ್ಲಾ. ಈ ಬಗ್ಗೆ ನಮಗೂ ಕುತೂಹಲವಾಗಿ ಶಿವರಾಮೇಗೌಡರಿಗೆ ಫೋನ್ ಮಾಡಿ ಕೇಳಿದರೆ ಹೇಗೆ ಅನ್ನಿಸಿ ಫೋನ್ ಮಾಡಿದರೆ ರಿಂಗಾಯ್ತು.



ರಿಂಗ್‌ಟೋನ್: ಕಂಚಾಲೊ ಮಚ್ಚಾಲೊ ಯಂಗವ್ರುಲಾ ನಿನ್ ಕನಸುಗಳು, ಗೋವಿಂದಾ ಜೇಡರಳ್ಳಿ ಯಂಗವ್ರುಲಾ ನಿನ್ ಡವ್‌ಗಳು....

"ಹಲೋ ಯಾರು?"

"ನಾನು ಸಾರ್, ಯಾಹೂ."

"ಯಾಹೂ ಅಂದ್ರಾ ್ರೀ?"

"ಗೌರಿ ಲಂಕೇಶ್ ಪತ್ರಿಕೆ ಸಾರ್."

"ಈಗ್ಯಾಕ್ರಿ ಫೋನ್ ಮಾಡ್ತಿರಿ. ನಾನೇನು ಎಂಪಿನಾ? ಎಮ್ಮೆಲ್ಲೆನಾ?"

"ನೀವು ಎಂ.ಪಿ. ಅಥವಾ ಎಮ್ಮೆಲ್ಲೆಗಿಂತ ಪವರ್‌ಫುಲ್ ಅಂತ ಗೊತ್ತಾಯ್ತು ಸಾರ್, ಅದ್ಕೆ ಫೋನ್ ಮಾಡಿದೆ."

"ನೀವಂಗೆ ತಿಳಕಂಡಿರೋದು ಸರಿ ಕಂಡ್ರಿ, ಆ ಬಿಜೆಪಿ ನನ್ನ ಮಕ್ಳಿಗೆ ಅದು ಗೊತ್ತಾಯ್ತಾ ಇಲ್ಲವಲ್ಲಾ?"

"ನಿಜಕ್ಕೂ ನೀವು ಎಲ್ಲೇ ಇದ್ರು ಪವರ್‌ಫುಲ್ ರಾಜಕಾರಣಿ ಸಾರ್."

"ಅಂಗಂತಿರಾ?"

"ಹೌದು ಸಾರ್. ಆಗ ಎಸ್ಸೆಂ ಕೃಷ್ಣ ಮುಖ್ಯಮಂತ್ರಿ ಆಗಿದ್ದಾಗ ನೀವು ಎಮ್ಮೆಲ್ಲೆನೂ ಆಗಿರಲಿಲ್ಲ, ಆದ್ರು ಎಸ್ಸೆಂ ಕೃಷ್ಣ ಅವ್ರರ ಮನೇಲಿದ್ದುಕೊಂಡು ಚೆಲುವರಾಯಸ್ವಾಮಿಗೆ ನೀರು ಕುಡಿಸಿದ್ರಿ. ಈಗ್ಲೂ ನೀವು ಎಮ್ಮೆಲ್ಲೆ ಅಲ್ಲ, ಆದ್ರು ಸುರೇಶ್‌ಗೌಡ್ನುಂದು ಏನೂ ನ್ಡಿದಂಗೆ ಮಾಡಿ, ಪಾಪ ಅವ್ನು ಕ್ಷೇತ್ರಕ್ಕೇ ಹೋಗದಂಗೆ ಬೆಂಗಳೂರಲ್ಲಿ ಮನಿಗಿದ್ದನಂತೆ. ಅಂತೂ ನೀವು ಪವರ್‌ನಲ್ಲಿ ಇಲ್ದೆಯಿದ್ರೂ ಪವರ್‌ಫುಲ್ ಸಾರ್."

ಥೂತ್ತೇರಿ

» ಯಾಹೂ

"ಇಲ್ದೆ ಇದ್ರೆ ನಮ್ಮಂತವ್ರು ಕಾಲ ಮಾಡದು ಕಷ್ಟ ಕಂಡ್ರೀ. ಸದ್ಯ ಬಿಜೆಪಿ ಸೇರಿದ್ರಿಂದ ಜಿಲ್ಲೆ ಜನ ಗೌರವ ಕೊಡ್ತಾ ಅವ್ರೆ."

"ಮಂಡ್ಯದಲ್ಲಿ ಬಿಜೆಪಿ ವೀಕಾಗಿದೆ. ಪಾರ್ಟಿ ಯಂಗೆ ಕಟ್ಟುತಿರಿ ಸಾರ್?"

"ಬಿಜೆಪಿ ಪಾರ್ಟಿ ಕಟ್ಟೋದೇನು ದೊಡ್ಡ ಕೆಲಸ ಅಲ್ಲ ಕಂಡ್ರಿ. ಕಮ್ಯುನಲ್ ಕ್ಲಾಶ್ ಮಾಡಿಸಿದ್ರೆ ಸಾಕು. ಹೆಣ ಬೀಳ್ತವೆ. ಆಗ ಬಿಜೆಪಿ ತಾನೇ ಬೆಳಿತದೆ. ಇನ್ನ ವೀಕಾಗಿರೋ ಜಾಗದಲ್ಲಿ ಪಂಚಾಯ್ತಿ ಮೆಂಬ್ರುಗಳ, ಜಿಲ್ಲಾ ಪಂಚಾಯ್ತಿ ಮೆಂಬ್ರುಗಳ ಆಪರೇಷನ್ ಕಮಲ ಮಾಡಿದ್ರಾಯ್ತು, ಪಾರ್ಟಿ ಡೆವಲಪ್ ಆಯ್ತದೆ."

"ಒಳ್ಳೆ ಕಾರ್ಯ ಸಾರ್. ಬಿಜೆಪಿ ಪಾರ್ಟಿಗೆ ಹೇಳಿಮಾಡಿಸಿದ ವ್ಯಕ್ತಿ ನೀವು. ಮೊದಲೆ ಮಂಡ್ಯದ ರಾಜಕಾರಣ ಮಂಗನಿಗೆ ಹೆಂಡ ಕುಡಿಸಿದಂಗದೆ. ಇನ್ನು ನಿಮ್ಮ ಕೈಗೆ ಬಿಜೆಪಿ ಸಿಕ್ಕಿದ್ರೆ ಕತಿಯೇನು ಅಂತ ಹೆದ್ರಿಕಾಯ್ತಾ ಅದೆ."

"ನೋಡ್ರಿ, ಇವತ್ತ ರಾಜಕಾರಣ ಮಾಡಬೇಕಾದ್ರೆ ಏನ್ನಾರ ಮಾಡಬೇಕಾಯ್ತದೆ. ಬಿಜೆಪಿ ಪಾರ್ಟಿಲಿದ್ದಕಂಡು ಗಾಂಧಿ ರಾಜಕಾರಣ ಮಾಡಕ್ಕಾಗದಿಲ್ಲ, ಅಧ್ವಾಣಿ ರಥ ಹೂಡಿಕೊಂಡು ರಾಮನ್ನ ರಸ್ತೆ ಮ್ಯಾಕೆ ತಂದು ದೇಶದ ತುಂಬ ಹೆಣ ಬೀಳಸ್ದೆಯಿದ್ರೆ ವಾಜಪೇಯಿ ಪ್ರಧಾನಿಯಾಯ್ತಿದ್ನೇನ್ರಿ?"

"ಇಲ್ಲ ಸಾರ್, ಅಂಗೆ ಸತ್ತೋಗೋನು."

"ಮತ್ತೆ ಮಂಡ್ಯದಲ್ಲಿ ನಾನು ರಾಜಕಾರಣ ಮಾಡಬೇಕಾದ್ರೆ ಏನ್ನರ ಮಾಡ್ಲೇಬೇಕು."

"ಅದ್ಕೆ ಏನೊ ಹೆದ್ರಿಕೊಂಡು ಚೆಲುವರಾಯಸ್ವಾಮಿ ನಿಮ್ಮ ಜೊತೆ ಕೈಕುಲುಕಿದನಂತಲ್ಲಾ ಸಾರ್."

"ಅದ್ಕೆ ಕಂಡ್ರಿ ಪತ್ರಕರ್ತರು ದಡ್ಡ ಸೂಳೆ ಮಕ್ಳು ಅನ್ನದು. ಚೆಲುವರಾಯಸ್ವಾಮಿ ನಾನು ಒಂದಾಗಿ ಭಾಳದಿನ ಆಯ್ತು ಕಂಡ್ರಿ. ನಾವಿಬ್ರೂ ಸೇರಿಕೊಂಡು ಅಂಬರೀಸನ್ನ ತಗದದ್ದು ಹಳೇ ಸುದ್ದಿ ಕಂಡ್ರಿ."

"ಅಂಗರಂಬರೀಸನ್ನ ತಗದದ್ದು ನೀವೇನಾ ಸಾರ್?"

"ಅಲ್ರೀ, ಯಾವತ್ತವ್ನು ನನ್ನ ಟಿಕೆಟ್ ತಪ್ಪಿಸಿ ಸುರೇಶ್ ಗೌಡನಿಗೆ ಕೊಡಸಿದ್ನೊ, ಅವತ್ತೆ ತೀರಮಾನ ಮಾಡಿದೆ. ಇವ್ನನ್ನ ತಗಿಬೇಕು ಅಂತ. ಅಂಗೆ ತಗದೆ."

"ಅದೆ ಯಂಗೆ ತಗದ್ರಿ ಅಂತ?"

"ನನಿಗೆ ಬರೊ ಓಟಾ ಚಲುವರಾಯಸ್ವಾಮಿ ಕಡಿಕೆ ಸೂಕಿದೆ. ಅವ್ನು ಗೆದ್ದ, ಅಂಬಿ ಗ್ವಾತ ಯಸ್ತ. ಇವತ್ತು ಚಲುವ ನಾನೇಳಿದಂಗೆ ಕೇಳ್ತನೆ. ಜಿಲ್ಲೆ ಕೆಲಸ ಏನಾಗಬೇಕಾದ್ರು ಶಿವರಾಮೇಗೌಡನ್ನ ಕೇಳಿ ಅಂತನೆ. ಅಷ್ಟೇ ಅಲ್ಲ ಕಂಡ್ರಿ, ಚೆಲುವರಾಯಸ್ವಾಮಿ ಗೆದ್ದೇಟಿಗೆ ಫೋನ್ ಮಾಡಿ 'ಬ್ರದರ್, ನಿಮ್ಮಿಂದ ನಾನು ಎಂಪಿಯಾದೆ' ಅಂದ. ಅವ್ನು ಡೆಲ್ಲಿ ಎಂಪಿಯಾದ್ರೆ ನಾನು ಮಂಡ್ಯದ ಎಂಪಿ. ಮತ್ತೆ ನಾಗಮಂಗಲದ ಶಾಸಕನೂ ನಾನೆ ಕಂಡ್ರೀ."

"ನಾಗಮಂಗಲಕ್ಕೂ ಶಾಸಕ್ರು ಸಾರ್?"

"ಮತ್ತೆ? ನನ್ನ ಸಿಫಾರಸ್ಸಿಲ್ದೆ ಯಾವ ಅಧಿಕಾರಿನೂ ನಾಗಮಂಗಲಕ್ಕೆ ಬರಂಗಿಲ್ಲ, ಹೋಗಂಗೂ ಇಲ್ಲ, ಮಂಡ್ಯಾಕ್ಕೂ ಬರಂಗಿಲ್ಲ, ಹೋಗಂಗಿಲ್ಲ."

"ನಿಜವಾಗ್ಲೂ ಮಂಡ್ಯದ ಬಿಜೆಪಿಗಳು ದುರ್ದೈವಿಗಳು ಸಾರ್."

"ಯಾಕ್ರಿ ಅಂಗಂತಿರಿ?"

"ಬಿಜೆಪಿಗಳು ಗಂಗಾಧರಮೂರ್ತಿ ಕೊಲೆಯಾದಾಗ್ಲಿಂದ ಧರಣಿ, ಪ್ರತಿಭಟನೆ ಅಂತ ಹೋರಾಡಿದ್ರು ಸಾರ್. ಇವತ್ತು ನೀವೇ ಅವರ ಲೀಡ್ರಲ್ಲ ಸಾರ್."

"ನನ್ನ ವಿರುದ್ಧ ಹೋರಾಡಿದೋರಿಗೆ ಬುದ್ಧಿ ಕಲುಸ್ತಿನಿ, ಸುಮ್ಮನೆ ಬುಡ್ತಿನ ನಾನು?"

"ಥೂತ್ತೇರಿ!!" ■

ಜೋಕ್ಸ್

ಪ್ರತಿ ಭಾರತೀಯ ಮಹಿಳೆ ತನ್ನ ಜೀವಿತಾವಧಿಯಲ್ಲಿ ರಾಣಿ ಲಕ್ಷ್ಮಿ ಬಾಯಿ ಆಗಿರುತ್ತಾಳೆ.
ರಾಣಿ: ಮದುವೆಯಾಗುವ ಮುನ್ನ
ಲಕ್ಷ್ಮಿ: ಮದುವೆಯಾದ ನಂತರ
ಬಾಯಿ (ಕೆಲಸದಾಕೆ): ಮಕ್ಕಳಾದ ನಂತರ!

*****

ಸೋಡ್ಯಾ+ನೀರು= ಕಿಡ್ನಿಗೆ ಹಾನಿಕರ
ರಮ್+ ನೀರು= ಲಿವರ್‌ಗೆ ಹಾನಿಕರ
ವಿಸ್ಕಿ+ ನೀರು = ಹೃದಯಕ್ಕೆ ಹಾನಿಕರ
ಜಿನ್+ ನೀರು = ಬ್ರೈನ್‌ಗೆ ಹಾನಿಕರ
ಇದೆಲ್ಲದರ ಅರ್ಥ ನೀರಿನಲ್ಲೇ ಯಾವುದೋ ದೋಷ ಇದೆ!

*****

ಹಳೆ ಗಾದೆ: ಮುತ್ತು ಕೊಡುವವಳು ಬಂದಾಗ ತುತ್ತು ಕೊಟ್ಟವಳ ಮರೀಬೇಡ.
ಹೊಸ ಗಾದೆ: ಚಡ್ಡಿ ಜಾರಿಸುವವಳು ಬಂದಾಗ, ಚಡ್ಡಿ ಹಾಕಿದವಳನ್ನು ಮರೀಬೇಡ.

*****

ಮುದುಕಿಗಾಗಿ ದೇವದಾಸರ ಜಾಹೀರಾತು ಹೀಗಿರಬಹುದೆ:
ವಯಸ್ಸು ನೋ ಬಾರ್,
ಎತ್ತರ ನೋ ಬಾರ್,
ಸೌಂದರ್ಯ ನೋ ಬಾರ್
ಜಾತಿ ನೋ ಬಾರ್
ಆದರೆ ಹುಡುಗಿಯ ತಂದೆ ಬಾರ್ ಅನ್ನು ಹೊಂದಿರಬೇಕು!!

ಜೀವನ್‌ಭೀಮಾನಗರದ ಶೂಟೌಟ್

ರಕ್ಕಸ ರಾಮಿರೆಡ್ಡಿಯ ಜೈಲು ಧಮಕಿ


ಹೋದೆಯಾ ಪಿಶಾಚಿ ಎಂದು ನಿಟ್ಟುಸಿರಿಟ್ಟ ಜೀವನ ಭೀಮಾನಗರದ ಜನಕ್ಕೆ ಜೈಲೊಳಗಿಂದಲೇ ರಿವಾಲ್ವರ್ ರಾಮಿರೆಡ್ಡಿಯ ಧಮಕಿ ಫೋನ್ ಕರೆಗಳು ಬರುತ್ತಿದ್ದರೆ ಹೇಗನಿಸಬೇಡ?

ಮೊನ್ನೆ ಅಂದರೆ 2009 ರ ಮೇ 31ರ ರಾತ್ರಿ ತನ್ನ ಸೋದರ ಸಂಬಂಧಿ ಮತ್ತು ಸ್ಥಳೀಯ ಜೆಡಿಎಸ್ ನಾಯಕ ಶ್ರೀನಿವಾಸ್ ರೆಡ್ಡಿಯ ಮೇಲೆ ಮೂರು ಸುತ್ತು ಗುಂಡು ಹಾರಿಸಿ ಕೊಲ್ಲಲು ಹೋಗಿದ್ದ ರಾಮಿರೆಡ್ಡಿ ಸದ್ಯ ಪರಪ್ಪನ ಅಗ್ರಹಾರ ಜೈಲಿನಲ್ಲಿ ಕಂಬಿ ಎಣಿಸುತ್ತಿದ್ದಾನೆ. ಆತನ ರಿವಾಲ್ವರ್ ಹುಚ್ಚಿಗೆ ಬಲಿಯಾದ ಶ್ರೀನಿವಾಸ ರೆಡ್ಡಿ ಗುಂಡೇಟು ತಿಂದು ಇವತ್ತಿಗೂ ಆಸ್ಪತ್ರೆಯಲ್ಲಿ ನರಳುತ್ತಿದ್ದರೆ ಅತ್ತ ಜೈಲು ಹೊಕ್ಕಿ ಕೂತ ರಾಮಿ ರೆಡ್ಡಿ ಜೈಲಿಂದಲೇ ತನ್ನ ಮೊಬೈಲ್ ಫೋನ್ ಮೂಲಕ ಶೂಟೌಟ್ ಕೇಸಿನ ಸಾಕ್ಷಿದಾರರು, ಮೀಟರ್ ಬಡ್ಡಿಗೆ ಆತನಿಂದ ಸಾಲ ಪಡೆದವರು ಮತ್ತು ಆತನ ಭೂದಾಹಕ್ಕೆ ಬಲಿಯಾದ ಮುಗ್ಧ ಸೈಟುದಾರರಿಗೆ ಧಮಕಿ ಹಾಕುತ್ತಿದ್ದಾನೆ.

ತನ್ನ ಸೋದರ ಸಂಬಂಧಿಯನ್ನೇ ಗುಂಡಿಟ್ಟು ಕೊಲ್ಲಲು ಯತ್ನಿಸಿದವನ ವಿರುದ್ಧ ಪೊಲೀಸರಿಗೆ ದೂರು ಕೊಡುವ ಹಿಮ್ಮತ್ತಾದರೂ ಯಾರಿಗಿದ್ದೀತು? ಜೈಲಿಂದಲೇ ಧಮಕಿ ಕೊಡುತ್ತಿದ್ದಾನೆಂದು ರಾಮಿರೆಡ್ಡಿಯ ವಿರುದ್ಧ ಯಾರಾದರೂ ಪೊಲೀಸರಿಗೆ ದೂರು ಕೊಟ್ಟರೆಂದರೆ ಆತನ ರೌಡಿ ಗ್ಯಾಂಗ್ ಬಿಡುವುದುಂಟಾ?

ಜೀವನಭೀಮಾನಗರದ ಕೋಡಿಹಳ್ಳಿ, ಮಾರತಹಳ್ಳಿ, ಕಗ್ಗದಾಸಪುರ, ನ್ಯೂತಿಪ್ಪಸಂದ್ರ, ಎಚ್‌ಎಎಲ್ ಸೆಕೆಂಡ್ ಸ್ಟೇಜ್, ಏರ್‌ಪೋರ್ಟ್ ಇತ್ಯಾದಿ ಏರಿಯಾಗಳಲ್ಲಿ ಕಳೆದೈದು ವರ್ಷದಿಂದ ಹಾವಳಿಯಿಡುತ್ತಿದ್ದ ರಾಮಿರೆಡ್ಡಿ ಉರ್ಫ್ ವೆಂಕಟರಾಮರೆಡ್ಡಿ ಅಲಿಯಾಸ್ ಹಾಲುರಾಮ ಕೇವಲ ರೌಡಿಯಷ್ಟೇ ಅಲ್ಲ, ಈ ಭಾಗದ ಕುಖ್ಯಾತ ಲ್ಯಾಂಡ್ ಗ್ರ್ಯಾಬರ್ ಮತ್ತು ಮೀಟರ್ ಬಡ್ಡಿ ಖದೀಮ ಕೂಡ. ಇಂಥಾ ಕಂಟಕನ ಕೈಗೆ ರಿವಾಲ್ವರ್ ಲೈಸೆನ್ಸ್ ಕೊಟ್ಟು ಉಪಕರಿಸಿದ ಪೊಲೀಸ್ ಅಧಿಕಾರಿ ಇನ್ನೆಂಥವನಿರಬೇಕು?

ಮೊನ್ನೆ ಮೇ 31 ರಾತ್ರಿ ತನ್ನ ಸಂಬಂಧಿ ಶ್ರೀನಿವಾಸರೆಡ್ಡಿಯನ್ನು ಗುಂಡಿಟ್ಟು ಕೊಲ್ಲಲು ಯತ್ನಿಸಿದ ರಾಮರೆಡ್ಡಿ ಇಲ್ಲಿಗೆ ಮೂರು ವರ್ಷದ ಹಿಂದಷ್ಟೇ ಹೊಗೇನಕಲ್ ಪ್ರವಾಸಕ್ಕೆಂದು ಹೋದವನು ಅಲ್ಲಿನ ದೋಣಿಯವನೊಬ್ಬನ ಮೇಲೆ ಗುಂಡು ಹಾರಿಸಿ ಜನರಿಂದ ಒದೆ ತಿಂದಿದ್ದ. ತಿಂಗಳಾನುಗಟ್ಟಲೆ ಚಾಮರಾಜನಗರದ ಜೈಲಲ್ಲಿದ್ದು ಬಂದ. ಕುಡಿದನೆಂದರೆ ಅಕ್ಷರಶಃ ಕಾಡುಪ್ರಾಣಿಯಾಗುವ ಈತನಿಗೆ ಮತ್ತೆ ರಿವಾಲ್ವರ್ ಲೈಸೆನ್ಸ್ ಸಿಕ್ಕಿದ್ದಾದರೂ ಹೇಗೆ?


ಸುರೇಶ್ ಬಾಬು

ಅಷ್ಟಕ್ಕೂ, ಗುಂಡೇಟು ತಿಂದ ಶ್ರೀನಿವಾಸರೆಡ್ಡಿಗೆ ರಾಮಿರೆಡ್ಡಿ ಹಲವು ಲಕ್ಷ ರೂಪಾಯಿಗಳಷ್ಟು ದುಡ್ಡು ಕೊಡಬೇಕಿತ್ತು, ಅದು ಕೂಡ ಒಂದು ಲ್ಯಾಂಡ್ ಡೀಲು. ಕೋಡಿಹಳ್ಳಿಯಲ್ಲಿದ್ದ ಸಂಪಂಗಿ ಮತ್ತು ಗೌರಮ್ಮನ 50x50 ಅಳತೆಯ ನಿವೇಶನವನ್ನು ಖರೀದಿಸಿಟ್ಟುಕೊಂಡಿದ್ದ ಶ್ರೀನಿವಾಸ ರೆಡ್ಡಿಯಿಂದ ಅದನ್ನು ರಾಮಿರೆಡ್ಡಿ ಖರೀದಿಸಿದ್ದ. ಕೊಡಬೇಕಿದ್ದ ದುಡ್ಡು ಕೊಡದೇ ಸತಾಯಿಸುತ್ತಿದ್ದ ರಾಮಿರೆಡ್ಡಿಯನ್ನು ಹಿಡಿದು ದಬಾಯಿಸಿದ್ದೇ ತಡ ನನಗೇ ಆವಾಜ್ ಹಾಕ್ತಿಯೇನೋ.....? ಎಂದಿದ್ದೇ ರಾಮಿರೆಡ್ಡಿ ತನ್ನ ರಿವಾಲ್ವರ್‌ನಿಂದ ಗುಂಡು ಹಾರಿಸಿಬಿಟ್ಟ.

ಮೊದಲ ಗುಂಡು ಹೊಟ್ಟೆಗೆ ಬಿದ್ದು ರಕ್ತ ಸುರಿಸುತ್ತಾ ಓಡಿಹೋಗಿ ತನ್ನ ಕಾರೊಳಕ್ಕೆ ಕೂತಿದ್ದರೂ ಬೆನ್ನಟ್ಟಿ ಬಂದ ರಾಮಿರೆಡ್ಡಿ ಗುಂಡು ಹಾರಿಸುತ್ತಲೇ ಇದ್ದ. ಅದು ಆತನ ಟ್ರಿಗರ್ ಹುಚ್ಚು. ಮೊನ್ನೆಯಷ್ಟೇ ಇಂಥಹದ್ದೇ ಹುಚ್ಚಿಗೆ ಬಿದ್ದು ಸಿನಿಮಾ ನಟ ವಿನೋದ್ ಎಂಬಾತನನ್ನು ವಿನಾಕಾರಣ ಗುಂಡಿಟ್ಟು ಕೊಂದ 'ಮಾದೇಶ' ಚಿತ್ರದ ಪ್ರೊಡ್ಯೂಸರ್ ಗೋವರ್ಧನ್ ಮೂರ್ತಿಯ ವಿಕೃತಿಗಿಂತಲೂ ರಾಮಿರೆಡ್ಡಿಯ ವಿಕೃತಿಗಳು ಇನ್ನೂ ಭಯಂಕರ!

ಕುಡಿದ ನಂತರ ಆತನ ರಿವಾಲ್ವರ್ ಖಯಾಲಿ ಹುಚ್ಚೆದ್ದು ಕುಣಿಯುತ್ತದೆ. ಕೆಲವೊಮ್ಮೆ ಎದುರಿಗಿದ್ದ ತನ್ನ ಭಟ್ಟಂಗಿಗಳ ಮುಂದೆ ಪೋಜು ಕೊಡಲೆಂದೇ ಕಂಡಕಂಡಲ್ಲಿ ಫೈರ್ ಮಾಡುತ್ತಿರುತ್ತಾನೆ. ಅಕ್ಕಪಕ್ಕ ಯಾವುದಾದರೂ ಬೀದಿನಾಯಿ ಕಣ್ಣಿಗೆ ಬಿತ್ತೆಂದರೆ ರಾಮಿರೆಡ್ಡಿ ಹುಚ್ಚನಂತಾಗುತ್ತಾನೆ. ತನ್ನ


ಬೀದಿನಾಯಿಗೂ ಬುಲೆಟ್....!


ರಿವಾಲ್ವರ್ ತೆಗೆದದ್ದೇ ಆ ಬೀದಿನಾಯಿಯ ತಲೆಗೆ ಗುರಿಯಿಟ್ಟು ಟ್ರಿಗರ್ ಒತ್ತುತ್ತಾನೆ. ಗುಂಡೇಟು ತಿಂದು ನೆಲಕ್ಕೆ ಬಿದ್ದು ಒದ್ದಾಡುವ ನಾಯಿಯನ್ನು ಕಂಡು ಹುಚ್ಚೆದ್ದು ಕೇಕೆ ಹಾಕುತ್ತಾನೆ.

ಈ ರೀತಿ ರಾಮಿರೆಡ್ಡಿಯ ರಿವಾಲ್ವರ್ ಹುಚ್ಚಿಗೆ ಸಿಲುಕಿ ಬಲಿಯಾದ ಬೀದಿನಾಯಿಗಳ ಸಂಖ್ಯೆ ಕಮ್ಮಿಯೆಂದರೂ ಎರಡು ಡಜನ್ನು!

ಜೀವನ್‌ಭೀಮಾನಗರದ ಮಸೀದಿ ಲೇನ್‌ನ ತನ್ನ ಖಾಲಿ ಸೈಟಿನಲ್ಲಿ ಓಡಾಡಿಕೊಂಡಿದ್ದ ಬೀದಿನಾಯಿಯೊಂದನ್ನು ರಾಮಿರೆಡ್ಡಿ ವಿನಾಕಾರಣ ಗುಂಡು ಹಾರಿಸಿ ಸಾಯಿಸಿದ್ದು 2007 ರಲ್ಲಿ. ಕೋಡಿಹಳ್ಳಿಯ ತನ್ನ ಮಂಜುನಾಥ ಫೈನಾನ್ಸ್ ಅಡ್ಡೆಯ ಕಟ್ಟೆಯ ಮೇಲೆ ಮಲಗಿದ್ದ ನಾಯಿ ಮರಿಯೊಂದಕ್ಕೆ ಕುಡಿದು ಚಿತ್ತಾಗಿದ್ದೇ ಗುಂಡು ಹಾರಿಸಿಬಿಟ್ಟ. ಗುಂಡೇಟು ತಿಂದೂ ಸಾಯದೇ ರಕ್ತ ಸುರಿಸುತ್ತಾ ನರಳುತ್ತಿದ್ದ ಆ ಮರಿಯನ್ನು ಯಾರೋ ದಯಾವಂತರೊಬ್ಬರು ಆಸ್ಪತ್ರೆಗೆ ಸೇರಿಸಿದ್ದಾರೆ. ಬದುಕಿಸಲೆಂದು ಪಶುವೈದ್ಯರು ಅದರ ಕಾಲನ್ನೇ ಕತ್ತರಿಸಬೇಕಾಯ್ತು. ಗಂಗಮ್ಮನ ಗುಡಿ ರಸ್ತೆಯ ಇಸ್ಪೀಟ್ ಅಡ್ಡೆಯಲ್ಲೊಮ್ಮೆ ಪೌರುಷ ತೋರಿಸಲೆಂದೇ ಅನಾಥ ನಾಯಿಯೊಂದನ್ನು ಶೂಟ್ ಮಾಡಿ ಸಾಯಿಸಿಬಿಟ್ಟ.


ತನ್ನ ರೌಡಿ ಶಿಷ್ಯರ ಮಧ್ಯೆಯೋ ಅಥವಾ ಇಸ್ಪೀಟು ಅಡ್ಡೆಯಲ್ಲೋ ಕುಡಿದನೆಂದರೆ ರಾಮಿರೆಡ್ಡಿಯ ರಿವಾಲ್ವರ್‌ಗೆ ಒಂದಲ್ಲಾ ಒಂದು ಬೀದಿನಾಯಿ ಬಲಿಯಾಯಿತೆಂದೇ ಅರ್ಥ. ಕೆಲವೊಮ್ಮೆ ಗೋಡೆಗೋ ಆಕಾಶಕ್ಕೋ ಫೈರ್ ಮಾಡಿ ಕೇಕೆ ಹಾಕುತ್ತಾನೆ.

ಇವತ್ತು ಕಮ್ಮಿಯೆಂದರೂ ನೂರು ಕೋಟಿಗೆ ತೂಗುವ ರಾಮಿರೆಡ್ಡಿ ಇಲ್ಲಿಗೆ ಹತ್ತು ವರ್ಷದ ಹಿಂದೆ ಲಡಾಸಿ ಸೈಕಲ್ಲೇರಿ ಮನೆಮನೆಗೂ ಹಾಲು ಹಾಕುತ್ತಿದ್ದ. ಈತನನ್ನು ರಿಯಲ್ ಎಸ್ಟೇಟ್ ದಂಧೆಗೆ ಕರೆತಂದದ್ದು ಜೀವನ ಭೀಮಾನಗರದ ಮಾಜಿ ಕೌನ್ಸಿಲರ್ ಮುನಿರೆಡ್ಡಿಯವರ ಖಾಸಾ ತಮ್ಮ ಶ್ರೀನಿವಾಸ ರೆಡ್ಡಿ. ಆಹೊತ್ತಿಗಾಗಲೇ ನ್ಯೂ ತಿಪ್ಪಸಂದ್ರ, ಕೋಡಿಹಳ್ಳಿ, ದೊಮ್ಮಲೂರು ಮತ್ತು ಏರ್‌ಪೋರ್ಟ್ ಏರಿಯಾದ ತರಕಾರಿ ಗಾಡಿಗಳು, ಫುಟ್ ಪಾತ್ ವ್ಯಾಪಾರಿಗಳಿಗೆ ದಿನಕ್ಕೆ ಹತ್ತು ಪರ್ಸೆಂಟ್ ಲೆಕ್ಕದಲ್ಲಿ ರಾಮಿರೆಡ್ಡಿ ಮೀಟರ್ ಬಡ್ಡಿ ದಂಧೆಯನ್ನು ಶುರು ಹಚ್ಚಿಕೊಂಡಿದ್ದ. ಅದಕ್ಕೆಂದೇ ಪುಡಿ ರೌಡಿ ಗ್ಯಾಂಗ್ ಹುಟ್ಟು ಹಾಕಿದ್ದ. ರಿಯಲ್ ಎಸ್ಟೇಟ್‌ಗೆ ಕೈಹಾಕಿದ ರಾಮಿರೆಡ್ಡಿಗೆ ಮೊದಲೇ ರೆಡಿಯಾಗಿದ್ದ ಮೀಟರ್ ಬಡ್ಡಿ ರೌಡಿ ಪಡೆಯೇ ಸಾಕಾಯಿತು.


ರಾಮಿರೆಡ್ಡಿ

ಎಚ್‌ಎಎಲ್ ಸಮೀಪದ ಮುನ್ನೇಕೊಳಾಲು ಎಂಬಲ್ಲಿ ರಮೇಶ್ ಮತ್ತು ಚಂದ್ರಪ್ಪ ರೆಡ್ಡಿಯವರು ಎಬ್ಬಿಸಿದ್ದ ಐದೆಕರೆಯ ಲೇಔಟನ್ನು ತನ್ನದೇ ಎಂದು ತೋರಿಸಿ ನೂರಾರು ಜನರಿಂದ ದುಡ್ಡು ಕಿತ್ತ. ನಂಬಿದ ಜನ ಸೈಟಿಗೆಂದು ಕೊಟ್ಟ ದುಡ್ಡನ್ನೇ ತಂದು ಮಾರತಹಳ್ಳಿಯ ಲಿಟಿಗೇಷನ್ ಪ್ರಾಪರ್ಟಿಗೆ ಸುರಿದು 44 ಫ್ಲಾಟುಗಳ ಅಪಾರ್ಟ್‌ಮೆಂಟ್ ಎಬ್ಬಿಸಿದ. ದುಬಾರಿ ರೇಟು ಕೊಟ್ಟು ಯಾರೆಲ್ಲ ಇಲ್ಲಿ ಫ್ಲಾಟು ಖರೀದಿಸಿದರೋ ಅವರೆಲ್ಲ ಕೋರ್ಟಿಗೆ ಹೋದರೆ ಖದೀಮ ರಾಮಿರೆಡ್ಡಿ ಎಲ್ಲಾ ವ್ಯವಹಾರವನ್ನೂ ಬಿಜ್ಜು ಎಂಬ ಮಲೆಯಾಳಿ ಬಿಲ್ಡರ್‌ನ ಹೆಸರಲ್ಲಿ ಮಾಡಿದ್ದ.

ಕೋರ್ಟು ಶಿಕ್ಷೆ ವಿಧಿಸಿದ್ದು ಮಲೆಯಾಳಿ ಬಿಜ್ಜುಗೇ ಹೊರತು ರಾಮಿರೆಡ್ಡಿ ಬಚಾವಾಗಿಬಿಟ್ಟ. ಹೀಗೆ ರಾಮಿರೆಡ್ಡಿಯ ವಂಚನೆಯನ್ನು ತನ್ನ ತಲೆಗೆ ಹಾಕಿಕೊಂಡು ಕಾಪಾಡಿದ ಬಿಜ್ಜುವನ್ನೂ ರಾಮಿರೆಡ್ಡಿ ವಂಚಿಸಿಬಿಟ್ಟ. ಈತನ ಬಣ್ಣದ ಮಾತು ನಂಬಿ ಮೋಸಹೋದ ಅತೀದೊಡ್ಡ ಮಿಕವೆಂದರೆ ಆತ ಕಗ್ಗದಾಸಪುರದ ಲ್ಯಾಂಡ್ ಡೀಲರ್ ಜೈರಾಮರೆಡ್ಡಿ. ಕೋಡಿಹಳ್ಳಿಯ ಮಸೀದಿ ಲೇನ್‌ನಲ್ಲಿ ತಾನು ಕಟ್ಟಿಸುತ್ತಿರುವ ಅಪಾರ್ಟ್‌ಮೆಂಟಿಗೆ ನೀನೇ ಪಾಲುದಾರನೆಂದು ನಲವತ್ತು ಲಕ್ಷ ಕಿತ್ತ. ನಂಬಿದ ಜೈರಾಮ ರೆಡ್ಡಿಗೆ ಕೊನೆಗೊಮ್ಮೆ ನೀನು ಕೊಟ್ಟದ್ದು ಎಂಟೇ ಲಕ್ಷ ಎಂದು ರಿವಾಲ್ವರ್ ತೋರಿಸಿ ದಬಾಯಿಸಿದ್ದ. ಮೆಡಿಕಲ್ ಸ್ಟೋರ್ ಇಟ್ಟುಕೊಂಡಿದ್ದ ವರ್ತೂರಿನ ಪ್ರಕಾಶ್ ಎಂಬಾತ ಈತನಿಂದ


ಆಸ್ಪತ್ರೆಯಲ್ಲಿಇರುವ ಶ್ರೀನಿವಾಸ ರೆಡ್ಡಿ

ಮೂರು ಲಕ್ಷದ ಸಾಲ ಪಡೆದು ಎಂಥಾ ತಾಪತ್ರಯಕ್ಕೆ ಬಿದ್ದನೆಂದರೆ ಎರಡೇ ವರ್ಷಕ್ಕೆ ಬಡ್ಡಿ, ಚಕ್ರಬಡ್ಡಿ, ಸುಸ್ತಿಬಡ್ಡಿ ಎಲ್ಲವನ್ನೂ ಸೇರಿಸಿ ಹದಿನಾರು ಲಕ್ಷ ಮಡಗು ಎಂದು ಹೂಂಕರಿಸಿದ.

ಮೊದಲೇ ಖಾಲಿ ಚೆಕ್ಕು, ಛಾಪಾಕಾಗದಗಳಿಗೆ ಸಹಿ ಮಾಡಿಕೊಟ್ಟಿದ್ದ ಪ್ರಕಾಶ್ ವಿಧಿಯಿಲ್ಲದೇ ತನ್ನ ಎರಡೆಕರೆ ಪಿತ್ರಾರ್ಜಿತ ಆಸ್ತಿಯನ್ನು ಬರೆದುಕೊಟ್ಟ. ಇದರಲ್ಲಿ 24 ಸೈಟುಗಳನ್ನು ವಿಂಗಡಿಸಿದ ರಾಮಿರೆಡ್ಡಿ ತಲಾ ಒಂದೂವರೆ ಲಕ್ಷದಂತೆ ಸೈಟು ಮಾರಿಕೊಂಡ. ಮೂರು ಲಕ್ಷ ಸಾಲ ಕೊಟ್ಟು ಮೂವತ್ತೆರಡು ಲಕ್ಷ ಜೇಬಿಗಿಳಿಸುವ ರಾಮಿರೆಡ್ಡಿಯ ನರಿಬುದ್ಧಿಗೆ ಇದೊಂದು ನಿದರ್ಶನವಷ್ಟೇ.

ಬಿಲ್ಡರ್ ಬಿಜ್ಜುಗೆ ಏರ್‌ಪೋರ್ಟ್ ರಸ್ತೆಯ ಲೀಲಾ ಪ್ಯಾಲೆಸ್ ಹಿಂಭಾಗದಲ್ಲಿ 30x40 ಸೈಟು ತೋರಿಸಿ ವಂಚಿಸಿದ್ದಾನೆ. ವರ್ತೂರಿನ ಪೆರಿಫೆರಲ್ ರಿಂಗ್ ರಸ್ತೆಯಲ್ಲಿ ಕೆಐಎಡಿಬಿಯ ಒಂದೂವರೆ ಎಕರೆ ಭೂಮಿ ತೋರಿಸಿ ಅದೇ ತನ್ನ ಲೇಔಟೆಂದು ತನ್ನ ಅಪ್ಪೂ ಮಂದಿ ಬಿಲ್ಡಿಂಗ್ ಕೆಲಸಗಾರರನ್ನು ಮುಂಡಾಯಿಸಿದ್ದಾನೆ. ಯಾರದೋ ಲೇಔಟ್ ತೋರಿಸಿ ಈಗ ಗುಂಡೇಟು ತಿಂದ ಶ್ರೀನಿವಾಸ ರೆಡ್ಡಿ ಮತ್ತು ಆತನ ಅರ್ಧ ಡಜನ್ ಸ್ನೇಹಿತರಿಗೆ ಟೋಪಿ ಹಾಕಿದ್ದು, ಹೊಸಕೋಟೆಯ ಅನುಗೊಂಡನಹಳ್ಳಿಯಲ್ಲಿ ಹತ್ತಿರದ ಗ್ರೀನ್ ಬೆಲ್ಟ್ ಜಮೀನು ತೋರಿಸಿ ಇನ್ನೂರ ಇಪ್ಪತ್ತು ಮಂದಿಯನ್ನು ವಂಚಿಸಿದ್ದು; ರಾಮಿರೆಡ್ಡಿಯ ವಂಚಕ ಬುದ್ಧಿಗೆ ಕೆಲ ಸ್ಯಾಂಪಲ್ಲುಗಳಷ್ಟೇ. ಯಾರ‍್ಯಾರಿಗೆ ಈತ ಸೈಟು ಮಾರಿದ್ದಾನೋ ಅವರ‍್ಯಾರೂ ಈತನಕ ಮನೆ ಕಟ್ಟಲಾಗಿಲ್ಲ. ಈತನ ವಿರುದ್ಧ ಜೀವನಭೀಮಾ ನಗರದ ಪೊಲೀಸ್ ಠಾಣೆಯಲ್ಲಿರುವ ಚೀಟಿಂಗ್ ಕೇಸುಗಳಿಗೆ ಲೆಕ್ಕವಿಲ್ಲ.

ಇಂಥ ಪಾತಕಿಯನ್ನು ನಂಬಿ ಕೋಡಿಹಳ್ಳಿಯ ದಲಿತರ ಸಂಪಂಗಿ ಮತ್ತು ಗೌರಮ್ಮರ ಸೈಟಿನ ವಿವಾದ ಬಗೆಹರಿಸಿಕೊಡಲು ಬಂದ ಸಂಬಂಧಿ ಶ್ರೀನಿವಾಸರೆಡ್ಡಿಯ ಮೇಲೆ ರಾಮಿರೆಡ್ಡಿ ಗುಂಡು ಹಾರಿಸಿದ್ದಾನೆ. ರಾಮಿರೆಡ್ಡಿ ಜೈಲು ಪಾಲಾದ ಸುದ್ದಿ ಕೇಳಿದ್ದೇ ಇಡೀ ಜೀವನ ಭೀಮಾನಗರ ಹಬ್ಬ ಆಚರಿಸಿತ್ತು. ಜೀವನಭೀಮಾನಗರದ ಇನ್ಸ್‌ಪೆಕ್ಟರ್ ಕುಮಾರ್ ಮತ್ತು ಡಿಸಿಪಿ ಬಿ.ಕೆ. ಸಿಂಗ್ ಮುಂದೆ ರಾಮಿರೆಡ್ಡಿ ಏನೆಲ್ಲಾ ಲಗಾಟ ಹೊಡೆದರೂ ಆತನ ರೊಕ್ಕದ ಆಟ ನಡೆಯಲಿಲ್ಲ. ಆದರೆ ಜೈಲು ಹೊಕ್ಕ ಕೂತ ರಾಮಿರೆಡ್ಡಿ ಜೈಲಿಂದಲೇ ತನ್ನ ಮೀಟರ್ ಬಡ್ಡಿ ದಂಧೆ ನಿಭಾಯಿಸಲಾರಂಭಿಸಿದ್ದಾನೆ.

ಆತ ಜೈಲು ಸೇರಿದರೂ ಆತನ ರೌಡಿ ಗ್ಯಾಂಗ್ ರಾಜಾರೋಷವಾಗಿ ಮೆರೆದಾಡಿಕೊಂಡಿದೆ. ಆತ ಕೈಹಾಕಿದ ಬೇಕಾಬಿಟ್ಟಿ ಲ್ಯಾಂಡ್ ಡೀಲುಗಳಿಂದ ದುಡ್ಡು ಹರಿಯಬೇಕಲ್ಲ; ಅದಕ್ಕೆ ಜೈಲಲ್ಲಿ ಕೂತೇ ತನ್ನ ರೌಡಿ ಶಿಷ್ಯರಿಗೆ ಆದೇಶ ಕೊಡುವ ರಾಮಿರೆಡ್ಡಿ ಮೊನ್ನೆ ತನ್ನಿಂದ ಬೀದಿಪಾಲಾದ ಮಲೆಯಾಳಿ ಬಿಜ್ಜು ಎಂಬಾತನಿಗೆ ಫೋನ್ ಮಾಡಿ ಧಮಕಿ ಹಾಕಿದ್ದಾನೆ. ಅದರ ಮರುದಿನವೇ ಆತ ವಕ್ಕರಿಸಿದ್ದ ಕೋಡಿಹಳ್ಳಿಯ ಸೈಟು ಮಾಲಿಕರಾದ ದಲಿತರ ಸಂಪಂಗಿ ಮತ್ತು ಗೌರಮ್ಮರಿಗೆ ಫೋನ್ ಮಾಡಿ 'ನಿಮ್ಮಿಬ್ಬರನ್ನೂ ಮೂಟೆ ಕಟ್ಟಿಸ್ತೀನಿ' ಎಂದು ಹೆದರಿಸಿದ್ದಾನೆ. ಶೂಟೌಟ್ ಪ್ರಕರಣದ ಸಾಕ್ಷಿದಾರರನ್ನೂ ಜೈಲಿಂದಲೇ ಗದರಿದ್ದಾನೆ. ಇಂಥವನಿಗೆ ಜೈಲಲ್ಲಿ ಮೊಬೈಲ್ ಫೋನ್ ಕೊಟ್ಟ ಜೈಲಧಿಕಾರಿ ಯಾರು? ಈತ ಜೈಲಿಂದ ಹೊರಬಿದ್ದರೆ ಇನ್ನೆಷ್ಟು ಅನಾಹುತ ಮಾಡಲಾರ?

ಜೈಲು ಪಾಲಾದರೂ ಜನಕ್ಕೆ ಕಾಟ ತಪ್ಪುತ್ತಿಲ್ಲವೆಂದರೆ ಜೀವನಭೀಮಾನಗರಕ್ಕೆ ಪೊಲೀಸ್ ಠಾಣೆಯಿದ್ದು ಏನು ಪ್ರಯೋಜನ?

ಇನ್ಸ್‌ಪೆಕ್ಟರ್ ಕುಮಾರ್ ಮತ್ತು ಎಸಿಪಿ ಮಂಜುನಾಥ್ ಇನ್ನಾದರೂ ಎಚ್ಚೆತ್ತುಕೊಳ್ಳಲಿ. ಇಲ್ಲದೇಹೋದರೆ ಜನರೇ ರೊಚ್ಚಿಗೆದ್ದು ರಾಮಿರೆಡ್ಡಿಯನ್ನು ಮುಗಿಸುವುದಂತೂ ಗ್ಯಾರಂಟಿ.

● ರಾ. ಸೋಮನಾಥ್

ಪಟ್ಟಕಟ್ಟಿದ ಪಾಪಕ್ಕೆ ಕಾಂಗ್ರೆಸ್ ಪ್ರಾಯಶ್ಚಿತ್ತ?

ತನ್ನೆಲ್ಲಾ ಪಾಪವನ್ನು ಮುಚ್ಚಿಕೊಳ್ಳಲು ಗುರಾಣಿಯಂತೆ ರಾಮಿರೆಡ್ಡಿಗೆ ಬಳಕೆಯಾಗಿದ್ದು ಜೀವನಭೀಮಾನಗರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷಗಿರಿ!

ಮೀಟರ್ ಬಡ್ಡಿ ವಸೂಲಿ, ಕಂಡೋರ ಸೈಟು ಕದಿಯುವುದು ಬಿಟ್ಟರೆ ಮತ್ತೊಂದು ಗೊತ್ತಿಲ್ಲದ ರಾಮಿರೆಡ್ಡಿಯನ್ನು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನನ್ನಾಗಿ ಮಾಡಿದ್ದು ಕೆ.ಸಿ. ವಿಜಯಕುಮಾರ್ ಎಂಬ ಮಾಜಿ ಮೇಯರ್. ಜೊತೆಗೆ ಕೃಷ್ಣನ್ ಎಂಬ ಲೋಕಲ್ ಪುಢಾರಿಯೂ ಕೈಜೋಡಿಸಿದ ಫಲವಾಗಿ ರೌಡಿ ರಾಮಿರೆಡ್ಡಿಗೆ ಕಾಂಗ್ರೆಸ್ ನಾಯಕನ ಪಟ್ಟ ಸಿಕ್ಕಿತು.

ಇಂಥವನಿಗೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷಗಿರಿ ಸಿಕ್ಕರೆ ಮರ‍್ಯಾದಸ್ಥರ ಗತಿ ಏನಾಗಬೇಡ? ರಾಮಿರೆಡ್ಡಿಯಂಥ ರೌಡಿಯ ಕೈಕೆಳಗೆ ದುಡಿಯುವುದಕ್ಕಿಂತ ಅವಮಾನ ಮತ್ತೊಂದಿಲ್ಲ ಎಂದು ರೊಚ್ಚಿಗೆದ್ದವರು ತಿಪ್ಪಸಂದ್ರದ ಮಾಜಿ ಕೌನ್ಸಿಲರ್ ಸುರೇಶ್ ಬಾಬು. ನ್ಯೂತಿಪ್ಪಸಂದ್ರ, ಜೀವನಭೀಮಾನಗರ, ಕೋಡಿಹಳ್ಳಿ ಭಾಗದಲ್ಲಿ ಸಾಕಷ್ಟು ಜನಪ್ರಿಯತೆಯಿರುವ ಸುರೇಶ್ ಬಾಬು ಹೇಳಿಕೇಳಿ ವರ್ತೂರು ಕೃಷ್ಣಪ್ಪನವರ ಪಕ್ಕಾ ಬೆಂಬಲಿಗ. ಸುರೇಶ್ ಬಾಬು ಜೊತೆ ಹಿಂದುಳಿದ ಘಟಕದ ಅಧ್ಯಕ್ಷ ಗಜೇಂದ್ರ, ಸ್ಥಳೀಯ ಕಾಂಗ್ರೆಸ್ ನಾಯಕರಾದ ಬೈಯಪ್ಪನಹಳ್ಳಿ ಗೋಪಿ, ರಮೇಶ್, ನೂರಿ, ಜಮ್‌ಶೆಡ್ ಮತ್ತು ಅಬ್ದುಲ್ಲಾರಂಥ ನಿಷ್ಠಾವಂತ ಕಾಂಗ್ರೆಸ್ ನಾಯಕರ ಹಿಂದೇ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರಿದ್ದಾರೆ.

ಇದರ ಫಲವೆಂಬಂತೆ ಕಳೆದ ಲೋಕಸಭಾ ಚುನಾವಣೆಯಲ್ಲೇ ಕಾಂಗ್ರೆಸ್ಸಿಗಿಂತಲೂ ಜೆಡಿಎಸ್‌ಗೆ ಅಧಿಕ ಮತಗಳು ಬಂದವು. ರಾಮಿರೆಡ್ಡಿಯಂತ ಪಾತಕಿಗೆ ಪಟ್ಟಕೊಟ್ಟರೆ ಏನಾಗುತ್ತೆ ಎಂಬುದಕ್ಕೆ ಇದಕ್ಕಿಂತ ಬೇಕೆ?

ಭಜರಂಗಿಗಳ ಸೆಕ್ಸ್ ಸಿಡಿ

ಅಮಾಯಕ ಹಿಂದೂ ಯುವತಿ ಬಲಿ





ಭಜರಂಗಿಗಳ ಸುಧಾಕರನ ಲೀಲಾ ವಿನೋದ.....

ಈ ಭಜರಂಗಿಗಳಿಂದ ಹಿಂದೂ ಧರ್ಮದ ...ನಮರ್ಯಾದೆ ಯಾವುದೂ ಉಳಿಯುವಂತೆ ...ಂತಿಲ್ಲ. ದಕಾಯತಿ, ಕೊಲೆ, ಸ್ಮಗ್ಲಿಂಗ್, ಹಲ್ಲೆ ...ತಾದ ದೇಶಸೇವಾ ಕಾರ್ಯದಲ್ಲಿ ಬ್ಯುಸಿಯಾಗಿದ್ದ ...ರಂಗ ದಳದ ಗ್ಯಾಂಗ್ ಈಗ ಅಮಾಯಕ ...ವತಿಯರನ್ನು ಬೆದರಿಸಿ ಲೈಂಗಿಕ ಶೋಷಣೆ ...ಡಿ, ಅದನ್ನೇ ಸೆಕ್ಸ್ ಸಿಡಿ ಮಾಡಿ ಮಾರುವ ...ಕೆಲಸಕ್ಕೆ ಇಳಿದುಬಿಟ್ಟಿದೆ.

ಕಳೆದ ವಾರ ಮಂಗಳೂರಿನಲ್ಲಿ ಇಂಥದ್ದೊಂದು ...ಪತ್ತೆಯಾಗಿದೆ. ಈ ಸೆಕ್ಸ್ ಸಿಡಿ ದಂಧೆಯ ...ವಾರಿ ಹಾಗೂ ಸ್ವತಃ ನಾಯಕ ಪಾತ್ರಧಾರಿ ...ಕರ ಗೌಡ ಯಾನೆ ಒಡಿಲ್ ಎಂಬಾತ. ಇವನು ...ನಳಿ ಏರಿಯಾದ ಭಜರಂಗ ದಳದ ಲೀಡರ್!

ಮಂಗಳೂರಿನ ಬಜ್ಪೆ ಪೊಲೀಸ್ ಲಿಮಿಟ್ಸ್‌ನ ...ಪದವುನವನಾದ ಸುಧಾಕರ ಗೌಡನೊಂದಿಗೆ ಅದೇ ...ನ ಫೋಟೋ ಸ್ಟುಡಿಯೋ ಮಾಲೀಕ ಮತ್ತವನ ... ಪ್ರದೀಪ, ಹರೀಶನೆಂಬ ಇನ್ನೊಬ್ಬ ...ಪದವಿನವನೇ ಆದ ಮರದ ವ್ಯಾಪಾರಿಯೊಬ್ಬ ...ತೆಗೆ ಸ್ಥಳೀಯ ಜನರಲ್ ಸ್ಟೋರ್ ...ಲೀಕನೊಬ್ಬ ಈ ಸೆಕ್ಸ್ ಸಿಡಿ ದಂಧೆಯಲ್ಲಿ ...ಯಾಗಿ ಈಗ ಸಿಕ್ಕಿಬಿದ್ದಿದ್ದಾರೆ.

ಈ ಪುಣ್ಯಾತ್ಮರೆಲ್ಲರೂ ಹಿಂದೂ ಧರ್ಮೋದ್ಧಾರಕ್ಕೆ, ...ದೂ ಸಂಸ್ಕೃತಿಯ ಉದ್ಧಾರಕ್ಕೆ ಟೊಂಕಕಟ್ಟಿ ...ರುವ ಹುರಿಯಾಳುಗಳೇ. ಅಷ್ಟೇ ಅಲ್ಲ ಕಳೆದ ...ವರಿಯಲ್ಲಿ ಮಂಗಳೂರಿನಲ್ಲಿ ನಡೆದ ಪಬ್ ...ಯಲ್ಲಿ ಭಾಗಿಗಳಾಗಿದ್ದವರೆ!

...ಅಂದಹಾಗೆ ಈ ವಿಕೃತಕಾಮಿಗಳ ಪೀಡನೆಗೆ ...ಯಾಗಿ ಸೆಕ್ಸ್ ಸಿಡಿ ಹಗರಣದಲ್ಲಿ ಸಿಲುಕಿ ...ಗುತ್ತಿರುವ ಯುವತಿಯೂ ಸಾಕ್ಷಾತ್ ಹಿಂದೂ ...ಯುಳೇ!!

...ರ್ನಾಟಕದ RSS ನಾಯಕರಾದ ಕರಾವಳಿಯ ... ಪ್ರಭಾಕರ ಭಟ್ಟ ಹಾಗೂ ಬೆಂಗಳೂರಿನ ...ತ. ಜಯದೇವರೆಂಬ ಮಹಾನುಭಾವರು ಹೀಗೆ ... ಭಜರಂಗಿ ಸಂಘಟನೆಯ ಹುಡುಗರು ...ಯಕ ಹಿಂದೂ ಯುವತಿಯನ್ನೇ ಶೋಷಿಸಿ ...ಸಿಡಿ ದಂಧೆಗೆ ಬಳಸಿಕೊಂಡಿದ್ದರೂ ಏನೊಂದು ...ಡದೆ ಸುಮ್ಮನಾಗಿಬಿಟ್ಟಿದ್ದಾರೆ.

...ದು ಹಾಳಾಗಿ ಹೋಗಲಿ, ಆಶ್ಚರ್ಯ ಅಂದರೆ ...ಠಾಣಾ ಪೊಲೀಸರೂ ಆರೋಪಿಗಳನ್ನು ಬಂಧಿಸಿ ... ಹಾಕದೆ ಸಿಡಿ ನೋಡಿಕೊಂಡು ಮಜಾ ...ಕೊಳ್ಳುತ್ತಿದ್ದಾರೆ.

...ದಪದವಿನ ಆ ಯುವತಿಯ ತಾಯಿ ಬಜ್ಪೆ ... ಹೋಗಿ "ತನ್ನ ಮಗಳನ್ನು ಭಜರಂಗಿ ...ಕರ ಗೌಡ ಕಿಡ್ನ್ಯಾಪ್ ಮಾಡಿ, ಹೀಗೆ ಸೆಕ್ಸ್ ...ಮಾಡಿದ್ದಾನೆ, ಈಗ ನನ್ನ ಮಗಳೂ ಕಾಣುತ್ತಿಲ್ಲ" ... ದೂರು ಕೊಟ್ಟರೂ ಪೊಲೀಸರು ಕೇರ್ ...ತಿಲ್ಲ, ಬದಲಾಗಿ ಇನ್ಸ್‌ಪೆಕ್ಟರ್ ರಾಘವ ... "ನಿನ್ನ ಮಗಳೇ ಸುಧಾಕರನ ಜೊತೆ ಲಾಡ್ಜಿಗೆ ... ಇದ್ದು ಬಂದಿದ್ದಾಳಂತೆ, ಈಗ ನಾವೇನು ...ಗಲ್ಲ, ಹೋಗು" ಎಂದು ಗದರಿಸಿ ...ದ್ದಾರೆ.

...ದೂ ಯುವತಿಗೆ ಭಜರಂಗಿ ಬ್ಲ್ಯಾಕ್‌ಮೇಲ್

ಮಂಗಳೂರು ಸಮೀಪದ ಎಡಪದವು ಗ್ರಾಮದ ಸುಮಾ (ಹೆಸರು ಬದಲಿಸಿದೆ) ಎಂಬಾಕೆ ಈಗೊಂದೆರಡು ವರ್ಷಗಳ ಹಿಂದೆ ಭಜರಂಗಿ ಸುಧಾಕರ ಗೌಡನ ಕಾಕದೃಷ್ಟಿಗೆ ಬಿದ್ದಿದ್ದಳು. ಅವಳೊಮ್ಮೆ ಎಡಪದದ ಮಡಪ್ಪಾರಿ ಸೈಟಿನ ಆರೀಫ್ ಎಂಬ ಮುಸಲ್ಮಾನ್ ಯುವಕನೊಂದಿಗೆ ಆಗಾಗ್ಗೆ ಭೇಟಿಯಾಗಿ ಮಾತಾಡುತ್ತಿದ್ದುದನ್ನು ಗಮನಿಸಿದ ಸುಧಾಕರನಿಗೆ 'ಹಿಂದೂ ಧರ್ಮ ಪ್ರಜ್ಞೆ' ಜಾಗೃತವಾಯಿತು. ಕರಾವಳಿಯ ಎಲ್ಲೆಡೆ







ಆಗುತ್ತಿರುವಂತೆಯೇ ಇಲ್ಲೂ ಸುಧಾಕರನು 'ಮುಸಲ್ಮಾನ್ ಹುಡುಗನೊಂದಿಗೆ ಮಾತಾಡಿದರೆ ಹುಷಾರ್' ಎಂದು ಬೆದರಿಸಿದ್ದ. ನಂತರ ಒಂದು ದಿನ ಸುಮಾ-ಆರೀಫ್ ಜೊತೆಯಾಗಿ ಮಾತಾಡುತ್ತಾ ನಿಂತಿದ್ದಾಗ 'ಏನೋ ದೊಡ್ಡ ದೇಶದ್ರೋಹಿಗಳನ್ನು ಪತ್ತೆಹಚ್ಚಿದಂತೆ ದಾಳಿ ಮಾಡಿ ಆರೀಫ್‌ನನ್ನು ಬೆದರಿಸಿ ಅಲ್ಲಿಂದ ಓಡಿಸಿದ ಸುಧಾಕರ ಅವತ್ತೆ ಸುಮಾಳಿಗೂ ಗದರಿಸಿ ಅವಳ ಮೊಬೈಲ್ ನಂಬರ್ ತೆಗೆದುಕೊಂಡ. ಆಮೇಲೆ ಆಗೊಮ್ಮೆ ಈಗೊಮ್ಮೆ ಸುಮಾಳೊಂದಿಗೆ ಫೋನ್‌ನಲ್ಲಿ ಮಾತಾಡುತ್ತಾ, ಅವಳ ಮತ್ತು ಆರೀಫನ ವಿಚಾರ ಎಲ್ಲರಿಗೂ ಹೇಳಿಬಿಡುತ್ತೇನೆ ಎಂದು ಬ್ಲ್ಯಾಕ್‌ಮೇಲ್ ಮಾಡಲು ಪ್ರಾರಂಭಿಸಿದ್ದಾನೆ. ಇದರಿಂದ ಹೆದರಿ ಹೋದ ಸುಮಾ ಕೊನೆಗೆ ಭಜರಂಗಿ ಸುಧಾಕರ ಹೇಳಿದಂತೆ ಕೇಳುವ ಹಂತ ತಲುಪಿದಳು.

ಆಗ ಈ ಹಿಂದೂ ವೀರನ ವರಸೆಯೇ ಬದಲಾಗಿ ಹೋಯಿತು. ಸುಮಾಳನ್ನು ಹೆದರಿಸಿ ಬೆದರಿಸಿ ತನ್ನಿಚ್ಛೆಯಂತೆ ಪಳಗಿಸಿಕೊಂಡವನು ಕೆಲತಿಂಗಳ ಹಿಂದೆ ಮಂಗಳೂರಿನ ಲಾಡ್ಜ್ ಒಂದಕ್ಕೆ ಎಳೆದೊಯ್ದಿದ್ದಾನೆ.

ಮಾದಕ ವಸ್ತು ತಿನ್ನಿಸಿ ಮೊಬೈಲ್‌ನಲ್ಲೇ ಶೂಟ್ ಮಾಡಿದರು.

ಈ ಭಜರಂಗಿ ಸುಧಾಕರ ಎಂಥ ಪಾತಕಿ ಎಂದರೆ ಅವತ್ತು ಸುಮಾಳನ್ನು ಲಾಡ್ಜ್‌ಗೆ ಕರೆದೊಯ್ಯುವಾಗ ತನ್ನ ಭಜರಂಗಿ ಭಂಟರಾದ ಪ್ರದೀಪ-ಹರೀಶರನ್ನು ಅಲ್ಲಿಗೆ ಬರುವಂತೆ ಹೇಳಿದ್ದಾನೆ.

ಈಗ ಹಲವಾರು ಕಡೆ ಸಿಗುತ್ತಿರುವ ಈ ಸಿಡಿ ನೋಡಿದರೆ ಸಾಕು, ಅವತ್ತು ಹೋಟೆಲ್‌ನಲ್ಲಿ ಭಜರಂಗಿ ಸುಧಾಕರ-ಸುಮಾ ಅಲ್ಲದೆ ಬೇರೆಯವರೂ ಇದ್ದರೆಂಬುದು ಅಲ್ಲಿ ಕೇಳಿಬರುವ ಧ್ವನಿಗಳಿಂದಲೇ ಗೊತ್ತಾಗುತ್ತದೆ. ಈ ಇತರೆ ಭಜರಂಗಿಗಳೇ ತಮ್ಮಲ್ಲಿದ್ದ ಮೊಬೈಲ್ ಕ್ಯಾಮರಾ ಬಳಸಿ ಸುಧಾಕರನು ಸುಮಾಳ ಮೇಲೆ ನಡೆಸಿದ 'ಹಿಂದೂ ಸಂಸ್ಕೃತಿಯ ಉದ್ಧಾರದ' ಚಟುವಟಿಕೆಗಳನ್ನು ಶೂಟ್ ಮಾಡಿದ್ದಾರೆ. ಬಹುಶಃ ಆ ದಿನ ಸುಮಾಗೆ ಈ ನೀಚರು ಎಂಥದ್ದೋ ಮಾದಕವಸ್ತು ತಿನ್ನಿಸಿರಬೇಕು ಅಥವಾ ಮದ್ಯಪಾನ ಮಾಡಿಸಿರಲಿಕ್ಕೂ ಸಾಕು. ತಾನೆಲ್ಲಿದ್ದೇನೆ, ತನ್ನ ಮೇಲೇನಾಗುತ್ತಿದೆ ಎಂಬುದೊಂದನ್ನು ಅರಿಯದಂತೆ ಈ ಹುಡುಗಿ ವರ್ತಿಸಿದ್ದಾಳೆ.

ಆದರೆ ಭಜರಂಗಿ ಸುಧಾಕರ ಯಾನೆ ಒಡಿಲ್‌ನ ಕೇಡಿತನದ ಮದೋನ್ಮತ್ತ ಕಪ್ಪು ಮುಖ ಸಿಡಿಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದೆ. ಈ ಘನಕಾರ್ಯ ಮುಗಿದ ಮೇಲೆ ಲಾಡ್ಜಿನಿಂದ ಆಚೆ ಬಂದ ಗುಂಪು ತಮ್ಮ ಪಾಡಿಗೆ ತಾವು ಹೊರಟುಹೋಯಿತು. ಸುಮಾ ನಂತರ ಮಂಗಳೂರಿಗೇ ಬಂದು ಒಂದು ಹಾಸ್ಟೆಲ್ ಸೇರಿಕೊಂಡಳು. ಸುಧಾಕರ ತನ್ನ ಭಜರಂಗಿ ಕೆಲಸ ಮಾಡಿಕೊಂಡು ವೆಲ್ಡಿಂಗ್ ಶಾಪ್ ನೋಡಿಕೊಂಡಿದ್ದ. ಆದರೆ ಅವನ ಮೊಬೈಲ್‌ನಲ್ಲಿದ್ದ ಸೆಕ್ಸ್ ವೀಡಿಯೋವನ್ನು ತನ್ನ ಉಳಿದ ಭಜರಂಗಿ ಮಿತ್ರರಿಗೆ ನೋಡಲು ಕಳಿಸುತ್ತಿದ್ದ. ಹೀಗೇ.... ಕೈಯಿಂದ ಕೈಗೆ ದಾಟಿದ ಈ ಅಸಹ್ಯ ದೃಶ್ಯಾವಳಿಗಳೀಗ ಕರಾವಳಿಯಾದ್ಯಂತ ಮಾರಾಟಕ್ಕೆ ಬಂದುಬಿಟ್ಟಿದೆ.

ಈ ಮಧ್ಯೆ ಸುಮಾರ ತಾಯಿ ತನ್ನ ಮಗಳಿಗಾದ ಅನ್ಯಾಯದ ವಿರುದ್ಧ ಬಜ್ಪೆ ಪೊಲೀಸರಿಗೆ ದೂರು ಕೊಟ್ಟರೂ ಅವರು ತನಿಖೆ ನಡೆಸಿಲ್ಲ. ನೆಪಕ್ಕೆ ಒಮ್ಮೆ ಸುಧಾಕರನನ್ನು ಠಾಣೆಗೆ ಕರೆಸಿ ಹೇಳಿಕೆ ಮಾತ್ರ ತೆಗೆದುಕೊಂಡಿದ್ದಾರೆ.

ಸುಮಾ ಈಗೆಲ್ಲಿ

ಮೊದಲು ಸುಧಾಕರನ ಬ್ಲ್ಯಾಕ್‌ಮೇಲ್‌ಗೆ ಹೆದರಿ ಅವನೊಂದಿಗೇ ಸ್ನೇಹ ಬೆಳೆಸಿ ಸೆಕ್ಸ್ ರಾಕೆಟ್‌ಗೆ ಬಲಿಯಾದ ಸುಮಾ ನಂತರ ಸುಧಾಕರನ ಗೂಂಡಾಗಿರಿ ಸಮಾಜಘಾತುಕ ಕೆಲಸಗಳನ್ನು ಗಮನಿಸಿ ಹೆದರಿ ಅವನಿಂದ ದೂರಾಗಿದ್ದಳು. ಅವನ ಮುಖದರ್ಶನವೇ ಬೇಡವೆಂದು ಮಂಗಳೂರು ತ್ಯಜಿಸಿ ಕೆಲತಿಂಗಳ ಹಿಂದೆಯೇ ಬೆಂಗಳೂರಿಗೆ ಬಂದು ಕೆಲಸ ಹುಡುಕಿಕೊಂಡಿದ್ದಳು.

ಈಗ ಈ ಹಗರಣ ಬೆಳಕಿಗೆ ಬಂದಮೇಲೆ ಬಜ್ಪೆ ಪೊಲೀಸರು ಸುಮಾಳನ್ನು ಮಂಗಳೂರಿಗೆ ಕರೆಸಿಕೊಂಡು ಒಂದು ವಿಚಿತ್ರ ಹೇಳಿಕೆ ಬರೆಸಿಕೊಂಡಿದ್ದಾರೆ. ಆ ಪ್ರಕಾರ ಹೇಳಬೇಕೆಂದರೆ "ಸುಧಾಕರ ಸುಮಾಳನ್ನು ಲಾಡ್ಜ್‌ಗೆ ಕರೆದುಕೊಂಡು ಹೋಗಿದ್ದು ನಿಜ. ಆದರೆ ಅಲ್ಲಿನ ಸೆಕ್ಸ್ ದೃಶ್ಯಗಳನ್ನು ಸುಮಾಳ ಮೊಬೈಲ್‌ನಲ್ಲೇ ಯಾರೋ ಸೆರೆ ಹಿಡಿದು ನಂತರ ಮೊಬೈಲ್ ಅನ್ನು ಅವಳಿಗೆ ವಾಪಸ್ ಕೊಟ್ಟರು. ನಂತರ ಕೆಲ ತಿಂಗಳಾದ ಮೇಲೆ ಸುಮಾ ಆ ಮೊಬೈಲ್ ಅನ್ನು ಕ್ರಿಶ್ಚಿಯನ್ ಒಬ್ಬನಿಗೆ ಮಾರಿದಳು. ಆದರೆ ಮಾರುವಾಗ ಈ ಅಸಹ್ಯ ದೃಶ್ಯಗಳನ್ನು ಡಿಲೀಟ್ ಮಾಡಿರಲಿಲ್ಲ, ಮೊಬೈಲ್ ಖರೀದಿಸಿದಾತ ಈಗ ಅದನ್ನು ಯಾರಿಗೋ 'ಮಾರಿಕೊಂಡು ಅದೇ ಈಗ 'ಎಡಪದವು ಗುಬ್ಬರ ಮೇಲೆ' ಎಂಬ ಸೆಕ್ಸ್ ಸಿಡಿಯಾಗಿ ಮಾರ್ಕೆಟ್ಟಿಗೆ ಬಂದಿದೆ."


–ಇದು ಪೊಲೀಸರ ತನಿಖೆಯ ಸ್ವರೂಪ!

–ಭಜರಂಗಿಗಳ ವಿರಾಟರೂಪ!

● ವರದಿಗಾರ

ಹಗರಣ ಪತ್ತೆ ಹಚ್ಚಿದ್ದು ಕರಾವಳಿ ಅಲೆ ಪತ್ರಿಕೆ

ಭಜರಂಗಿ ಸುಧಾಕರ ಯಾನೆ ಒಡಿಲ್‌ನ ಈ ಸೆಕ್ಸ್ ಸಿಡಿ ಹಗರಣವನ್ನು ಮೊದಲು ಪತ್ತೆಹಚ್ಚಿ ಪ್ರಕಟಿಸಿದ್ದು ಮಂಗಳೂರಿನ ಕರಾವಳಿ ಅಲೆ ಪತ್ರಿಕೆ. ನಂತರ ಸುಮಾಳ ತಾಯಿ ಪತ್ರಿಕೆಯ ಪ್ರತಿಯನ್ನೇ ಲಗತ್ತಿಸಿ ತನ್ನ ಮಗಳು ಕಾಣೆಯಾಗಿರುವ ಬಗ್ಗೆ ಬಜ್ಪೆ ಪೊಲೀಸರಿಗೆ ಕಂಪ್ಲೇಂಟ್ ಕೊಟ್ಟಿದ್ದರು. ಆದರೇನು ಕರಾವಳಿ ಪೊಲೀಸರಿಗೆ ಮೊದಲಿನಿಂದಲೂ ಭಜರಂಗದಳ, ಶ್ರೀರಾಮ ಸೇನೆ, ಹಿಂದೂ ಯುವ ಸೇನೆಯವರ ಬಗ್ಗೆ ವಿಶೇಷ ಮಮತೆ, ಪ್ರೀತಿಯಿದೆ. ಇವರೇನೇ ಪುಂಡಾಟಿಕೆ ನಡೆಸಿದರೂ 'ಮಾಫ್' ಮಾಡುವ ಇರಾದೆ ಪೊಲೀಸರದ್ದು. ಹಾಗಾಗಿ ಈಗ ಅಮಾಯಕ ಹುಡುಗಿಯೊಬ್ಬಳನ್ನು ನಂಬಿಸಿ ಸೆಕ್ಸ್ ಸಿಡಿ ಮಾಡಿರುವ ಸುಧಾಕರ ಅವರ ಪ್ರಕಾರ ಅಮಾಯಕ. ಇದೇ ವಿಚಾರದಲ್ಲಿ ಅಂದರೆ ಸಿಡಿ ಬಗ್ಗೆ ಅಲ್ಲಲ್ಲಿ ಹೇಳಿಕೊಂಡು ತಿರುಗಿದ ಎಂದು ಆನಂದ್ ದೇವಾಡಿಗ ಎಂಬ ರಿಕ್ಷಾ ಚಾಲಕನಿಗೂ ಈ ಭಜರಂಗಿಗಳು ಹೊಡೆದಿದ್ದಾರೆ. ಜುಲೈ 15 ರ ... ಗಂಜಿ ಭಜರಂಗಿಗಳಾದ ... ಈ ಪ್ರದೀಪ ಹಾಗೂ ಹರೀಶ್ ... ಗೂಂಡಾಗಿರಿ ನಡೆಸಿದ್ದರೂ ಪೊಲೀಸರು ... ತಿರುಗಿಯೂ ನೋಡಿಲ್ಲ.



...ಭಜರಂಗಿಗಳ ದಾಳಿಗೆ ತುತ್ತಾದ ಆನಂದ್...

●



ಕಳೆದ ವಾರವಷ್ಟೇ 'ಲಂಕೇಶ್' 'ಹವ್ಯಕ ಅಭಿಮಾನಕ್ಕೆ ಅಂಡುನೋವೇ ಮದ್ದು' ವರದಿಯಲ್ಲಿ ಬಿಳಿ ಜಿರಲೆಯಂತಿರುವ ನಟ ದಿಗಂತ್ ಮತ್ತು ಆತ ನಟಿಸುತ್ತಿರುವ 'ಈ ಪ್ರೀತಿ' ಎಂಬ ಚಿತ್ರದ ನಿರ್ದೇಶಕಿಯ ಮಧ್ಯೆ ನಡೆಯುತ್ತಿರುವ ಸಮರದ ಸಣ್ಣ ಟಿಪ್ಪಣಿ ಪ್ರಕಟಿಸಿತ್ತು. ಈಗ ಇವರ ಜಗಳ ಬೆಂಗಳೂರಿನಿಂದ ಹಿಡಿದು ದೂರದ ಅಮೆರಿಕದ ತನಕ ವ್ಯಾಪಿಸಿದೆ.

ಪ್ರೀತಿ ಇಲ್ಲದ 'ಈ ಪ್ರೀತಿ'

ದಿಗಂತನ ಮಾನ ಹರಾಜು

ಮಾನ ಹರಾಜು ಹಾಕುವುದೆಂದರೆ ಬಹುಶಃ ಇದೇ ಇರಬೇಕು!

ಕಳೆದ ವಾರವಷ್ಟೇ 'ಲಂಕೇಶ್' 'ಹವ್ಯಕ ಅಭಿಮಾನಕ್ಕೆ ಅಂಡುನೋವೇ ಮದ್ದು' ವರದಿಯಲ್ಲಿ ಬಿಳಿ ಜಿರಲೆಯಂತಿರುವ ನಟ ದಿಗಂತ್ ಮತ್ತು ಆತ ನಟಿಸುತ್ತಿರುವ 'ಈ ಪ್ರೀತಿ' ಎಂಬ ಚಿತ್ರದ ನಿರ್ದೇಶಕಿಯ ಮಧ್ಯೆ ನಡೆಯುತ್ತಿರುವ ಸಮರದ ಸಣ್ಣ ಟಿಪ್ಪಣಿ ಪ್ರಕಟಿಸಿತ್ತು. ಈಗ ಇವರ ಜಗಳ ಬೆಂಗಳೂರಿನಿಂದ ಹಿಡಿದು ದೂರದ ಅಮೆರಿಕದ ತನಕ ವ್ಯಾಪಿಸಿದೆ.

■ ಅರುಣ್‌ಕುಮಾರ್ ಜೆ.

ಅಮೆರಿಕದಲ್ಲಿ ನೆಲೆಸಿರುವ ಮೂರು ಮಂದಿ ಎನ್ನಾರೈಗಳು ಮತ್ತು ಭಾರತದಲ್ಲಿರುವ ನಿರ್ಮಾಪಕರೊಬ್ಬರು ಸೇರಿ 'ಈ ಪ್ರೀತಿ' ಎಂಬ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಅದೇ ಅಮೆರಿಕದಲ್ಲೇ ವಾಸ್ತವ್ಯ ಹೂಡಿರುವ ಮತ್ತೊಬ್ಬ ಕನ್ನಡದ ಹೆಣ್ಣುಮಗಳು ಪ್ರಿಯಾ ಭಾರತಿ ಅಲಿಯಾಸ್ ಶಿಲ್ಪಾ ಜಗದೀಶ್ ಎಂಬಾಕೆ ಈ ಚಿತ್ರದ ನಿರ್ದೇಶಕಿ. ಮೊದಲಿನಿಂದಲೂ ಈಕೆಗೆ ಕನ್ನಡದಲ್ಲಿ ಒಂದು ಸಿನಿಮಾ ನಿರ್ದೇಶಿಸಬೇಕೆಂಬ ಬಯಕೆ ಇತ್ತಂತೆ. ಹೀಗಾಗಿ ಈಕೆ ಕಳೆದ ವರ್ಷ 'ಈ ಪ್ರೀತಿ' ಎಂಬ ಚಿತ್ರವನ್ನು ಆರಂಭಿಸಿದ್ದರು. ನಟ



ದಿಗಂತ್ ಹವ್ಯಕ ಬ್ರಾಹ್ಮಣ ಎಂಬ ಕಾರಣಕ್ಕೆ ಚಿತ್ರದ ಪಾಲುದಾರರಾಗಿರುವ ನಾರಾಯಣ ಹೊಸ್ಮನೆ ಎಂಬ ಮತ್ತೊರ್ವ ಹವ್ಯಕ ಬ್ರಾಹ್ಮಣ ದಿಗಂತನೇ ಬೇಕು ಎಂದು ಹಠ ಹಿಡಿದು ಆತನನ್ನೇ ನಾಯಕನನ್ನಾಗಿಸಿದ್ದರು.

ಬೆಂಗಳೂರಿನ ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ಮುಹೂರ್ತ ಮುಗಿಸಿಕೊಂಡ ಚಿತ್ರತಂಡ ಸೀದಾ ಯುಎಸ್‌ಎಗೆ ಹಾರಿತ್ತು, ಅಲ್ಲಿ ಎರಡು ಷೆಡ್ಯೂಲ್ ಶೂಟಿಂಗ್ ಮುಗಿಯುವ ಹೊತ್ತಿಗೆ ನಟ ದಿಗಂತನ ಕುಚೇಷ್ಟೆಯ ಬಗ್ಗೆ ನಿರ್ದೇಶಕಿ ಪ್ರಿಯಾಭಾರತಿ ಒಂದೇಸಮ ಕಾಲಕೊಡತಗಿದಳು. ಆದರ ಗಬ್ಬು ಬೆಂಗಳೂರಿನ ಗಾಂಧಿನಗರದವರೆಗೂ [illegible] ಆಗಾಗ ಅಪ್ಪಳಿಸುತ್ತಿತ್ತು,

ಇದೆಲ್ಲ ಜಗಳ ಹೊರಬಿದ್ದಿದ್ದು ದಿಗಂತ್ ವಿರುದ್ಧ ಚೇಂಬರ್‌ಗೆ ಪ್ರಿಯಾ ದೂರು ಸಲ್ಲಿಸಿದಾಗ. ಆದರೆ ಇದರ ಅಂತರಾಳದಲ್ಲಿರುವ ಹೇಸಿಗೆಯೆಲ್ಲಾ ಗೊತ್ತಾಗಿದ್ದು ಚಿತ್ರದ ನಾಲ್ವರು ನಿರ್ಮಾಪಕರು ಪ್ರಿಯಾಳಿಗೆ ಒಂದು ನೋಟೀಸ್ ಜಾರಿಮಾಡಿ ಅದರ ಪ್ರತಿಗಳನ್ನು ಈ-ಮೇಲ್ ಮೂಲಕ ಫಿಲ್ಮ್ ಚೇಂಬರ್‌ಗೆ ಮತ್ತು ಮಾಧ್ಯಮಗಳಿಗೆ ಬಿಡುಗಡೆ ಮಾಡಿದಾಗ...

ಆ ಪತ್ರದಲ್ಲಿ ಪ್ರಿಯಾಳಿಗೆ 'ವಾರ್ನಿಂಗ್' ಕೊಟ್ಟ ನಿರ್ಮಾಪಕರು ಜುಲೈ 15ರ ಮುನ್ನ ಎಲ್ಲಾ ನಟನಟಿಯರನ್ನು ಅಮೆರಿಕಕ್ಕೆ ಕರೆತಂದು ಚಿತ್ರದ ಉಳಿದ ಭಾಗವನ್ನು ಮುಗಿಸಬೇಕು ಎಂದಿದ್ದರು. ಅಷ್ಟೇ ಅಲ್ಲ, ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ದಿಗಂತನ ವಿರುದ್ಧ ದೂರು ಸಲ್ಲಿಸಿದ್ದಕ್ಕೆ ಕ್ಷಮೆ ಕೇಳಬೇಕೆಂದೂ, ಸಿನಿಮಾಗೆ ಖರ್ಚು ಮಾಡಿರುವ ಹಣದ ಲೆಕ್ಕ ಕೊಡಬೇಕೆಂದೂ ಹೇಳಿದ್ದರು. ಇವೆರಡು ಆಜ್ಞೆಗಳನ್ನು ಪ್ರಿಯಾ ಚಾಚೂತಪ್ಪದೇ ಮಾಡದಿದ್ದರೆ ಆಕೆಗೆ ಇಲ್ಲಿಯತನಕ ನೀಡಿರುವ ಹಣವನ್ನು ವಾಪಸ್ ಕೊಡಬೇಕು ಎಂದರು. ಆ ಹಣ ಅಷ್ಟಿಷ್ಟಲ್ಲ, ಡಾ. ಪ್ರದೀಪ್ ಬೇಕಲ್ ಎಂಬಾತನಿಗೆ 1,10,000 ಡಾಲರ್ (ಸುಮಾರು 50 ಲಕ್ಷ ರೂಪಾಯಿ) ಮಹಿ ಮಹೇಶ್ ಎಂಬಾತನಿಗೆ 60,000 ಡಾಲರ್ (27 ಲಕ್ಷ), ಡಾ.ಹೊಸ್ಮನೆಗೆ 40,000 ಡಾಲರ್ (18 ಲಕ್ಷ) ಮತ್ತು ಭಾರತದಲ್ಲಿರುವ ನಿರ್ಮಾಪಕ ನಾರಾಯಣಸ್ವಾಮಿಗೆ 20 ಲಕ್ಷ ರೂಪಾಯಿಗಳು. ಅಂದರೆ ಒಟ್ಟು 1.5 ಕೋಟಿ ರೂಪಾಯಿಗಳು!

ಇದೇ ಪತ್ರದಲ್ಲಿ ಇನ್ನೊಂದು ಷರತ್ತನ್ನು ಹಾಕಲಾಗಿತ್ತು, ಅದೆಷ್ಟು ಬೇಗನೆ ಪ್ರಿಯಾ ಚಿತ್ರವನ್ನು ಸಂಪೂರ್ಣಗೊಳಿಸದಿದ್ದರೆ ಆಕೆಯ ವಿರುದ್ಧ ಅಮೆರಿಕದಲ್ಲಿ ಮತ್ತು ಭಾರತದಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡುತ್ತೇವೆ ಎಂದಿದ್ದರು ನಿರ್ಮಾಪಕರು!

▶▶▶

ಪ್ರಿಯಾಳ 'ಗುಟ್ಟು... ಪ್ರೀತಿ'

ಈ ಪ್ರಿಯಾ ಎಂಬಾಕೆ ಅದೃಷ್ಟವಿಲ್ಲದ ನಿರ್ದೇಶಕಿ ಅನಿಸುತ್ತಿದೆ. ಹಲವು ವರ್ಷಗಳ ಹಿಂದೆ ಈಕೆ 'ಗುಟ್ಟು' ಎಂಬ ಕನ್ನಡ ಚಿತ್ರ ನಿರ್ದೇಶಿಸಿದ್ದಳು. ಆಗತಾನೆ ಆದರ್ಶ ಫಿಲಂ ಇನ್‌ಸ್ಟಿಟ್ಯೂಟಿನಲ್ಲಿ ತರಬೇತಿ ಪಡೆದು ಹೊರಬಂದಿದ್ದ, ಯಾರೂ ಕೇಳಿರದಿದ್ದ-ಕಂಡಿರದಿದ್ದ ಗಣೇಶ್ ಎಂಬಾತನನ್ನೇ ಪ್ರಿಯಾ ತನ್ನ ಚಿತ್ರದ ನಾಯಕನಟನಾಗಿ ಆಯ್ಕೆ ಮಾಡಿಕೊಂಡಿದ್ದಳು. ನಾಯಕಿಯಾಗಿ ಛಾಯಾಸಿಂಗ್ ನಟಿಸಿದ್ದಳು.



'ಗುಟ್ಟು' ಒಂದು ಟೆಲಿಫಿಲಂ ಆಗಿದ್ದರಿಂದ ಅದನ್ನು ಅತ್ತ ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡುವಂತಿರಲಿಲ್ಲ, ಇತ್ತ ಯಾವ ಟಿವಿ ಚಾನೆಲ್ ಕೂಡ ಅದನ್ನು ಖರೀದಿಸಲಿಲ್ಲ. ಇದರಿಂದಾಗಿ ಆ ಚಿತ್ರವನ್ನು ಅಮೆರಿಕದಲ್ಲಿ ಮತ್ತು ಹಲವು ಚಿತ್ರೋತ್ಸವಗಳಲ್ಲಿ ಮಾತ್ರ ಪ್ರದರ್ಶಿಸಲಾಗಿತ್ತು. ಈ ಕಾರಣಕ್ಕಾಗಿಯೇ ಅದರ ನಿರ್ಮಾಪಕರಿಗೆ ಭಾರಿ ನಷ್ಟ ಉಂಟಾಗಿತ್ತು.

ಇದಾದನಂತರ ಪ್ರಿಯಾ ಭಾರತಿ ಅಮೆರಿಕಕ್ಕೆ ವಾಪಸ್ ಹೋದಳು. ಆದರೆ ಗಣೇಶ್ ಬಗ್ಗೆ ಆಕೆ ಎಲ್ಲೆಡೆ ಒಳ್ಳೆ ಮಾತು ಹೇಳಿದ್ದರಿಂದ ಆತನಿಗೆ ಟಿವಿ ಸೀರಿಯಲ್‌ಗಳಲ್ಲಿ ಪಾತ್ರಗಳು ಸಿಗಲಾರಂಭಿಸಿದವು. ಹಲವೇ ವರ್ಷಗಳಲ್ಲಿ ಈ ಗಣೇಶ್ 'ಗೋಲ್ಡನ್ ಸ್ಟಾರ್' ಆದ!

ಈಗ ಪ್ರಿಯಾ ನಿರ್ದೇಶಿಸಿರುವ 'ಈ ಪ್ರೀತಿ' ಕೂಡ ಅರ್ಧಕ್ಕೆ ನಿಂತಿದೆ. ಪ್ರಿಯಾಳ ಪಾಲಿಗೆ 'ಗುಟ್ಟು' ಗೆಲ್ಲಲಿಲ್ಲ, 'ಪ್ರೀತಿ'ಯೂ ಸಿಗಲಿಲ್ಲ ಎಂಬಂತಾಗಿದೆ.





...ವರೆ ಪ್ರಿಯಾ ಅದನ್ನು ಮಾಡಲಿಲ್ಲ.

...ದಲಾಗಿ ದಿಗಂತನ ಆಟಾಟೋಪಗಳಿಂದ ಸಿಕ್ಕಾಪಟ್ಟೆ ...ಗಿರುವ ಪ್ರಿಯಾ ಭಾರತಿ ಎಂಬ ಹೆಣ್ಣುಮಗಳು ...ನ ವಿರುದ್ಧ 8,000 ಪದಗಳಷ್ಟು ಸುದೀರ್ಘವಾದ ...ಪಗಳನ್ನು ಮಾಡಿ ಯಾವ ಮುಲಾಜೂ ಇಲ್ಲದೆ ... ಎಲ್ಲ ಪತ್ರಕರ್ತರಿಗೂ ಮತ್ತು ನಿರ್ಮಾಪಕರಿಗೂ ...ಪಗಟಾಗಿ ಇಮೇಲ್ ಕಳಿಸಿ ಆತನ ಮಾನ ...ರ್ಯಾದೆಯನ್ನು ಹರಾಜಿಗಿಟ್ಟಿದ್ದಾಳೆ.

...ಈ ಪ್ರಿಯಾಭಾರತಿ ಎಂಬ ನವ ನಿರ್ದೇಶಕಿ ದಿಗಂತ್ ...ಳೆ ಈ ಪಾಟಿ ಮುರಕೊಂಡು ಬಿದ್ದಿದ್ದಾಳೆ? ...ಕರಣಕ್ಕೆ ಕೈಕೊಟ್ಟ ಮಾತ್ರಕ್ಕೆ ಇಷ್ಟು ದೊಡ್ಡ ...ತವಾ?

ಭರ್ತಿ ಹತ್ತುಪುಟ!

...ಯಾ ಭಾರತಿ ಕಳಿಸಿರುವ ಈ-ಮೇಲ್ ಪತ್ರವನ್ನು ... ಲೋಡ್ ಮಾಡಿ ನೋಡಿದರೆ ದಿಗಂತ್‌ನ ...ಸ, ತಿಮಿರು, ಅಶಿಸ್ತು ಎಲ್ಲವೂ ಗೊತ್ತಾಗುತ್ತದೆ. ...ಪ್ರೀತಿ' ಚಿತ್ರ ಆರಂಭವಾದಾಗಿನಿಂದಲೂ ಈಗ ...ಯುತ್ತಿರುವ ಈ-ಮೇಲ್ ಜಗಳದ ತನಕ ಏಳು ...ಂಟ್‌ಗಳ ಬಗ್ಗೆ ಪ್ರಿಯಾ ಒಂದೊಂದು ...ಸೆಯನ್ನೂ ನೀಡಿದ್ದಾಳೆ.

ಒಂದೇ ಬೆಡ್ಡು!

...ಮೆರಿಕದಲ್ಲಿ ಈ ನಟನಟಿಯರಿಗೆಲ್ಲಾ ಬೋರ್ಡಿಂಗ್ ...ಗ್ ಮಾಡಿ ಮೇಂಟೇನ್ ಮಾಡುವುದು ...ರಿಯಾದ್ದರಿಂದ ದಿಗಂತ್ ಮತ್ತು ನಾಯಕಿಯರಾದ ...ನಿ ಹಾಗೂ ನೀನಾ ಮಹೇಶ್- ಈ ಮೂವರನ್ನೂ ...ಶಕಿ ಪ್ರಿಯಾ ತನ್ನ ಮನೆಯಲ್ಲೇ ಉಳಿಸಿಕೊಂಡಿದ್ದರು. ...ಮನೆಯ ಒಂದು ಭಾಗದಲ್ಲಿರುವ ಗೆಸ್ಟ್ ರೂಮಿನಲ್ಲಿ ...ನನ್ನೂ, ತಮ್ಮ ಪರ್ಸನಲ್ ಬೆಡ್ ರೂಮಿನಲ್ಲಿ ...ಕಿಯರಿಬ್ಬರನ್ನೂ ಮಲಗಿಸುತ್ತಿದ್ದ ಪ್ರಿಯಾ ತಾನು ...ಂಗ್ ರೂಂನಲ್ಲಿ ನಿದ್ರಿಸುತ್ತಿದ್ದಳು. ರಾತ್ರಿ ಮಲಗುವಾಗ ...ಬೇರೆ ಕೋಣೆಯಲ್ಲಿ ಮಲಗಿಕೊಳ್ಳುತ್ತಿದ್ದ ನಾಯಕಿ ... ಮತ್ತು ದಿಗಂತ್ ಅರ್ಧ ರಾತ್ರಿ ಹೊತ್ತಿಗೆ ಒಂದೇ ... ಸೇರಿ ಸಿಂಗಲ್ ಬೆಡ್ಡಿಗೆ ಸೇರಿಬಿಡುತ್ತಿದ್ದರಂತೆ.

ಎಲ್ಲೆಲ್ಲೂ ಬಾಟಲಿಯೇ

...ೂದಲೇ ಬೆಂಗಳೂರಿನ ಪಾರ್ಟಿಗಳಲ್ಲಿ ಕಂಠಮಟ್ಟ ... ಚಿತ್ತಾಗುವ ದಿಗಂತನನ್ನು ಕರೆದೊಯ್ದು ಅಮೆರಿಕಕ್ಕೆ ...ಕ್ಷಣ ಆತನ ಚಪಲ ಮತ್ತು ಚಂಚಲ ಬುದ್ಧಿ ...ಸಿದ್ದೀತೆ?

...ಯಾರ ತಂದೆ ತಾಯಿ ಬೆಳಗ್ಗೆ ಎದ್ದು ರೂಂಗಳನ್ನು ...ಮಾಡಲು ಹೋದರೆ ಯಾವ ಸಂದಿ ಗೊಂದಿಗಳಲ್ಲಿ ...ಟ್ಟರೂ, ಎಲ್ಲೆಂದರಲ್ಲಿ ಈತ ರಾತ್ರಿ ಕುಡಿದು ...ಟ್ಟಿರುವ ಲಿಕ್ಕರ್ ಬಾಟಲಿಗಳು, 'ಇತ್ಯಾದಿ'ಗಳೇ ...ದ್ದವಂತೆ.

... ಎಲ್ಲ ಕರ್ಮಕಾಂಡವನ್ನು ನೋಡಿ ಬೇಸತ್ತ ಪ್ರಿಯಾ ...ಮ್ಮ ನಿರ್ಮಾಪಕ ನಾರಾಯಣ ಹೊಸ್ಮನೆಗೆ ದಿಗಂತ್ ... ನೀನಾರ 'ಸ್ಕೈಟ್ ಎಫೇರ್' ಹಾಗೂ 'ಪೀಪಾಯಿ ...'ದ ಬಗ್ಗೆ ವಿವರಿಸಿದ್ದಾರೆ. ನಂತರ ಹೊಸ್ಮನೆ ಅವರ ...ದಂತೆ ಇವರನ್ನು ಮನೆ ಕೆಳಗಿರುವ ಬೇಸ್‌ಮೆಂಟಿಗೆ ...ಮಾಡಿದ್ದಾರೆ. ನಂತರದ ದಿನಗಳಲ್ಲಿ ನೀನಾ ಮತ್ತು ...ದ ಮತ್ತೊಬ್ಬ ನಾಯಕಿ ಕೇಟ್ಸ್ಕಿನಿ ಅಲ್ಲಿದ್ದ ಸೋಫಾ ... ಮಲಗಿದ್ದರೆ, ಇರುವ ಎರಡೂ ಕಾಟ್‌ಗಳನ್ನು ...ಸಿಕೊಂಡು ಅದರ ಮೇಲೆ ಆರಾಮಾಗಿ ಒರಗಿಕೊಳ್ಳುತ್ತಿದ್ದನಂತೆ ... ದಿಗಂತ!

[illegible]?

...ಗಂತ್‌ಗೆ ಕಾಲಿನಲ್ಲಿ ಕಾಡುತ್ತಿದ್ದ ಚರ್ಮ ವ್ಯಾಧಿಗೆ [illegible]

ದ್ದಾನಂತೆ. ಹೀಗೆ ದಿಗಂತ್ ನೂರಾರು ಡಾಲರ್ ಹಣವನ್ನು ಮನಸೋಇಚ್ಛೆ ಖರ್ಚು ಮಾಡಿರುವ ವಿಚಾರ ಪ್ರಿಯಾಗೆ ಗೊತ್ತಾಗಿದ್ದು ಅದರ ಬಿಲ್ ಬಂದ ನಂತರವಷ್ಟೇ. ಅಷ್ಟು ಹೊತ್ತಿಗಾಗಲೇ ದಿಗಂತ ಬೆಂಗಳೂರು ಸೇರಿದ್ದರಿಂದ ಪ್ರಿಯಾ ಸಿಟ್ಟು ನೆತ್ತಿಗೇರಿದೆ.

ಈ ಬೆಡ್ಡು, ಬಾಟ್ಲುಗಳ ಹೊರತಾಗಿಯೂ ತನ್ನ ಅಶಿಸ್ತಿನಿಂದಾಗಿಯೇ ದಿಗಂತ್ ತನಗೆ ಕೊಟ್ಟ ಮಾನಸಿಕ ಹಿಂಸೆಯ ಬಗ್ಗೆಯೂ ಪ್ರಿಯಾ ವಿವರಿಸಿದ್ದಾಳೆ. ಕೊಟ್ಟ ಡೇಟಿಗೆ ಹಾಜರಾಗದಿರುವುದು, ಹೊಸ ಡೇಟುಗಳನ್ನು ನಿಗದಿಪಡಿಸದೇ ಇರುವುದು, ಯೋಗರಾಜ ಭಟ್ಟರ 'ಮನಸಾರೆ' ಚಿತ್ರಕ್ಕೆ ನೀಡಿರುವ ಡೇಟ್‌ಗಳನ್ನೇ ಪ್ರಿಯಾಳಿಗೂ ನೀಡಿ ಆಕೆಯನ್ನು ಕಂಗಾಲಾಗಿಸುವುದು, ಕೊನೆಕೊನೆಗೆ ಪ್ರಿಯಾ ಮತ್ತು ಹೊಸ್ಮನೆಯವರ ಈ-ಮೇಲ್, ಮೊಬೈಲ್ ಕರೆಗಳಿಗೆ ಪ್ರತಿಕ್ರಿಯಿಸದೇ ದಿಗಂತ್ ತನ್ನ ಅಶಿಸ್ತನ್ನು ಮೆರೆದಿದ್ದಾನೆ.


ಈ ಚಿತ್ರಕ್ಕಾಗಿ ಪ್ರಿಯಾ ಮಾಡಿರುವ ತ್ಯಾಗಗಳು ಕಡಿಮೆ ಏನಿಲ್ಲ, ಆಕೆ ತನ್ನ ಸರ್ಕಾರಿ ನೌಕರಿಗೆ ರಾಜೀನಾಮೆ ನೀಡಿ, ಸಂಬಳವೂ ಇಲ್ಲದೆ ಕಳೆದ ಒಂದು ವರ್ಷದಿಂದ ಇದಕ್ಕಾಗಿ ಬೆವರು ಸುರಿಸಿದ್ದಾಳೆ. ತನಗೆ ಚಿತ್ರ ನಿರ್ದೇಶಿಸಲು ಅವಕಾಶ ಮಾಡಿಕೊಟ್ಟ ನಿರ್ಮಾಪಕರ ಹಣ ಹೆಚ್ಚು ವೆಚ್ಚವಾಗದಂತೆ ತನ್ನ ಮನೆಯಲ್ಲೇ ನಟನಟಿಯರನ್ನು ಉಳಿಸಿಕೊಂಡಿದ್ದಾಳೆ, ತನ್ನ ತಾಯಿಯಿಂದಲೇ ಎಲ್ಲರಿಗೂ ಅಡುಗೆ ಮಾಡಿಸಿದ್ದಾಳೆ, ತನ್ನ ಕಾರಿನಲ್ಲೇ ಎಲ್ಲರನ್ನೂ ಶೂಟಿಂಗ್ ಜಾಗಕ್ಕೆ ಕರೆದುಕೊಂಡು ಹೋಗಿ ಬರುವುದನ್ನು ಯಕಶ್ಚಿತ್ ಡ್ರೈವರ್ ಕೆಲಸ ಮಾಡಿದ್ದಾಳೆ. ಇದನ್ನೆಲ್ಲ ನೋಡಿದರೆ ಪ್ರಿಯಾಳ ಬಗ್ಗೆ ಪಾಪ ಅನಿಸುತ್ತದೆ.

ಹೀಗೆ ದಿಗಂತ್ ಮಾಡಿರುವ ಗಾಯಗಳ ಮೇಲೆ ನಿರ್ಮಾಪಕರು "ನಮ್ಮ ಹಣ ವಾಪಸ್" ಕೊಡು ಎಂದು ಹುಳಿಯನ್ನು ಸುರಿದರೆ ಪ್ರಿಯಾ ಏನು ಮಾಡಬೇಕು?

ದಿಗಂತನಿಂದಾಗಿಯೇ ಚಿತ್ರ ಮೊದಲಿನ ಬಜೆಟ್‌ಅನ್ನು ಮೀರಿರುವುದು ವಾಸ್ತವ. ಎಲ್ಲದರ ಲೆಕ್ಕವನ್ನೂ ನೀಡಲು ಪ್ರಿಯಾ ತಯಾರಿದ್ದಾಳೆ. ಆದರೆ, "ನಮ್ಮ ಹಣ ವಾಪಸ್ ಕೊಡು" ಎಂಬ ನಿರ್ಮಾಪಕರ ನಿಲುವಿನೊಂದಿಗೆ ಆಕೆ ತನ್ನ ಅಸಮ್ಮತಿ ಸೂಚಿಸಿದ್ದಾಳೆ. "ನೀವು ಈ ಹಣವನ್ನು ಬಂಡವಾಳವಾಗಿ ಹೂಡಿದ್ದೀರಿ ಹೊರತು ನನಗೆ ಸಾಲವಾಗಿ ನೀಡಿಲ್ಲ" ಎಂಬ ಅಂಶವನ್ನು ಆಕೆ ಸರಿಯಾಗಿಯೇ ಎತ್ತಿದ್ದಾಳೆ. ಅಷ್ಟೇ ಅಲ್ಲ, ತಾವೆಲ್ಲ ಎಷ್ಟು ಹಣ ಹೂಡಿದ್ದೇವೆಂದು ಬಹಿರಂಗಗೊಳಿಸುವ ಮೂಲಕ ಹೆಚ್ಚಿನ ಬೆಲೆಗೆ ಆ ಚಿತ್ರವನ್ನು ಮಾರಾಟ ಮಾಡುವ ಅವಕಾಶವನ್ನೂ ಕಳೆದುಕೊಂಡಿದ್ದೀರಿ ಮೂರ್ಖರಾ ಎಂಬಂತೆ ಅವರನ್ನು ಲೇವಡಿ ಮಾಡಿದ್ದಾಳೆ.

"ನಿರ್ಮಾಪಕರ ದುಡ್ಡನ್ನು ಉಳಿಸುವುದಕ್ಕೆ ಬೆಂಗಳೂರಿನಲ್ಲಿದ್ದಾಗ ಆಟೋರಿಕ್ಷಾ ಬದಲಿಗೆ ಬಿಟಿಎಸ್ ಬಸ್‌ನಲ್ಲಿ ಸುತ್ತಾಡಿದ್ದೇನೆ. ಬಾಡಿಗೆ ಕಾರಿನ ಬದಲಾಗಿ ಸ್ನೇಹಿತರ ಕಾರನ್ನು ಉಪಯೋಗಿಸಿದ್ದೇನೆ. ಲೊಕೇಷನ್ ವೆಚ್ಚ ಉಳಿಸಲು ನಮ್ಮ ಚಿಕ್ಕಮ್ಮನ ಮನೆಯಲ್ಲೇ ಶೂಟ್ ಮಾಡಿದ್ದೇನೆ. ತಂತ್ರಜ್ಞರೊಂದಿಗಿನ ಮೀಟಿಂಗುಗಳಿಗೆ ನನ್ನ ದೊಡ್ಡಮ್ಮನಿಂದ ತಿಂಡಿತಿನಿಸುಗಳನ್ನು ಮಾಡಿಸಿ ಹೋಟೆಲ್ ಹಣವನ್ನು ಕಡಿಮೆ ಮಾಡಿದ್ದೇನೆ. ಬೇರೆಯವರಾದರೆ ಹೆಚ್ಚು ಲೆಕ್ಕ ತೋರಿಸುತ್ತಾರೆಂದು ನಾನೇ ಚಿಕ್ಕಪೇಟೆಯಲ್ಲಿರುವ ಸಗಟು ಮಾರಾಟದ ಅಂಗಡಿಗಳಿಗೆ ಹೋಗಿ ನಟನಟಿಯರಿಗೆ ಉಡುಪುಗಳನ್ನು ಖರೀದಿಸಿದ್ದೇನೆ. ಇಷ್ಟೆಲ್ಲಾ ಮಾಡಿದ್ದರೂ ನನ್ನ ಬಗ್ಗೆ ಅನುಮಾನ, ನನಗೆ ಅವಮಾನ ಮತ್ತು ಬೆದರಿಕೆಗಳನ್ನು ಒಡ್ಡುತ್ತಿದ್ದೀರಿ" ಎಂದು ನಿರ್ಮಾಪಕರ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾಳೆ.

ಕೊನೆಗೆ "ಬೇಕಿದ್ದರೆ ನೀವು ಹೊಸ ನಿರ್ದೇಶಕರನ್ನು ನೇಮಕ ಮಾಡಿಕೊಂಡು ಚಿತ್ರವನ್ನು ಸಂಪೂರ್ಣಗೊಳಿಸಿ. ನನ್ನ ಯಾವ ಅಭ್ಯಂತರವೂ ಇಲ್ಲ, ನೀವು ನನ್ನ ವಿರುದ್ಧ ಕಾನೂನುಕ್ರಮ ತೆಗೆದುಕೊಳ್ಳುವುದಿದ್ದರೆ ತೆಗೆದುಕೊಳ್ಳಿ. ನಾನು ಎಲ್ಲವನ್ನೂ ಕೋರ್ಟಿನ ಮುಂದೆಯೇ ಹೇಳುತ್ತೇನೆ. ಈಗಾಗಲೇ ನೀವು ಕೊಟ್ಟಿರುವ ಹಣ ಸಂಪೂರ್ಣವಾಗಿ ಖರ್ಚಾಗಿದೆ. ಇದನ್ನು ಸಂಪೂರ್ಣಗೊಳಿಸಲು ಇನ್ನೂ ಇಪ್ಪತ್ತು ದಿನ ಮತ್ತು 35 ಸಾವಿರ ಡಾಲರ್‌ಗಳು ಬೇಕಾಗುತ್ತದೆ. ಎಲ್ಲದರ ಬಗ್ಗೆಯೂ ಅಂತಿಮ ನಿರ್ಧಾರ ನಿಮ್ಮದು. ನಾನು ಬಹಳ ಇಷ್ಟಪಡುವ ಕನ್ನಡ ಭಾಷೆಯಲ್ಲಿ ಒಂದು ಸಿನಿಮಾ ನಿರ್ದೇಶಿಸುವ ಅವಕಾಶವನ್ನು ನನಗೆ ಕೊಟ್ಟಿದ್ದಕ್ಕೆ, ಧನ್ಯವಾದಗಳು" ಎಂದು ಪ್ರಿಯಾ ಈ-ಮೇಲ್‌ನಲ್ಲಿ ಹೇಳಿದ್ದಾಳೆ.



ಮೊದಲು ಕ್ಷಮೆ ಆಮೇಲೆ ಶೂಟಿಂಗು

...ಹೀಗೆ ನಿರ್ದೇಶಕಿ ಪ್ರಿಯಾ ಭಾರತಿ ದಿಗಂತನ ಚರಿತ್ರೆಯನ್ನೇ ತೆರೆದಿಟ್ಟು ಆತನ ಮಾನ ಮರ್ಯಾದೆಯನ್ನು ಊರಬಾಗಿಲಮುಂದೆ ಹರಾಜಿಗಿಟ್ಟಿದ್ದರೂ, 'ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ' ಎಂಬ ಹಾಗೆ ಈ ದಿಗಂತನ ಧಿಮಾಕು ಕಡಿಮೆಯಾಗಿಲ್ಲ. "ಪ್ರಿಯಾಭಾರತಿ ನನ್ನ ವ್ಯಕ್ತಿತ್ವಕ್ಕೆ ಕಪ್ಪುಚುಕ್ಕೆಯಿಟ್ಟಿದ್ದಾರೆ. ಅವರು ನನ್ನ ಬಳಿ ಕ್ಷಮೆ ಕೇಳುವ ತನಕ ನಾನು ಅವರ ಚಿತ್ರದ ಚಿತ್ರೀಕರಣಕ್ಕೆ ಹಾಜರಾಗುವುದಿಲ್ಲ, ಮೊದಲು ಅಪಾಲಜಿ, ಆಮೇಲೆ ಶೂಟಿಂಗ್...." ಎಂದು ಬಿಂಕ ಮಾಡುತ್ತಿದ್ದಾನೆ.

ಇನ್ನೂ ಇಪ್ಪತ್ತು ಪರ್ಸೆಂಟ್ ಶೂಟಿಂಗ್ ಬಾಕಿಯಿರುವುದರಿಂದ ಈತ ಕೈಕೊಟ್ಟರೆ ಎಲ್ಲಿ ಸಿನಿಮಾಗೆ ಹಾಕಿದ ಬಂಡವಾಳ ಗೋತಾ ಹೊಡೆಯುತ್ತದೋ ಎಂಬ ಭಯದಿಂದ ನಿರ್ಮಾಪಕ ನಾರಾಯಣ ಹೊಸ್ಮನೆ ಅಮೆರಿಕದಲ್ಲೇ ಕುಳಿತು ಪ್ರಿಯಾ ಭಾರತಿ ವಿರುದ್ಧವೇ ಈ-ಮೇಲು ಕಳಿಸಿದ್ದಾರಲ್ಲದೆ, 'ಪ್ರಿಯಾಭಾರತಿ ತಕ್ಷಣ ದಿಗಂತನ ಬಳಿ ಕ್ಷಮೆ ಕೋರಬೇಕು' ಎಂದು ಆಜ್ಞಾಪಿಸುತ್ತಿದ್ದಾರೆ.

ಆದರೆ ಪ್ರಿಯಾ ಮಾತ್ರ ಸುತರಾಂ ಇದಕ್ಕೆ ಒಪ್ಪುತ್ತಿಲ್ಲ. ಬದಲಾಗಿ ಪತ್ರಿಕಾಗೋಷ್ಠಿ ಕರೆದು ಇದ್ದದ್ದನ್ನೆಲ್ಲ ಇದ್ದಹಾಗೆ ಹೇಳುತ್ತೇನೆ ಎಂದಿದ್ದಾಳೆ.

[illegible]

ತೀರ್ಥಹಳ್ಳಿಯ ಸಣ್ಣ ಹಳ್ಳಿಯೊಂದರಲ್ಲಿ ಹುಟ್ಟಿಬೆಳೆದ ದಿಗಂತ್‌ನನ್ನು ಈ ಬೆಂಗಳೂರೆಂಬ ಮಾಯೆ ಬದಲಿಸದ್ದು ಆಶ್ಚರ್ಯವಲ್ಲ.


ಬೆಂಗಳೂರಿಗೆ ಬಂದವನೇ ಫ್ಯಾಷನ್ ಡಿಸೈನರ್ ಪ್ರಸಾದ್ ಬಿದ್ದಪ್ಪನ ಗರಡಿಗೆ ಬಿದ್ದವನು ದಿಗಂತ್. ನೋಡಲು ಬೆಳ್ಳಗೆ ಬೆಳ್ಳಗಿದ್ದಾನೆ ಎಂಬ ಕಾರಣಕ್ಕೆ ನಿರ್ದೇಶಕ ಕೂಡ್ಲು ರಾಮಕೃಷ್ಣ ತಮ್ಮ ನಿರ್ದೇಶನದ 'ಮಿಸ್ ಕ್ಯಾಲಿಫೋರ್ನಿಯಾ' ಚಿತ್ರದಲ್ಲಿ ಈತನನ್ನೂ ಹೀರೋ ಮಾಡಿದರು. ಆ ಚಿತ್ರ ತೋಪೆದ್ದ ನಂತರ ಚಿತ್ರರಂಗದಲ್ಲಿ ಯಾವ ಛಾನ್ಸೂ ಇಲ್ಲದೆ ಅಲೆಯುತ್ತಿದ್ದ ದಿಗಂತ್ ಟಿ.ಎನ್. ಸೀತಾರಾಂ ನಿರ್ದೇಶನದ 'ಮೀರಾ ಮಾಧವ ರಾಘವ' ಎಂಬ ಇನ್ನೊಂದು ಭಯಾನಕ ತೋಪು ಚಿತ್ರದಲ್ಲಿ ನಟಿಸಿದ್ದ. ಈ ಮಧ್ಯೆ ಸಂದೀಪ್ ಮಲಾನಿಯ 'ಎಸ್‌ಎಂಎಸ್' ಎಂಬ ಚಿತ್ರದಲ್ಲೂ ಈತ ನಟಿಸಿದ್ದನಾದರೂ ಆ ಚಿತ್ರ ಯಾವಾಗ ಬಿಡುಗಡೆಯಾಯಿತು ಎಂದು ಯಾರಿಗೂ ನೆನಪಿದ್ದಂತಿಲ್ಲ.

ಹೀಗೆ ಚಿತ್ರರಂಗದಲ್ಲೂ ನೆಲೆಯಿಲ್ಲದೆ, ಮಾಡೆಲಿಂಗ್‌ನಲ್ಲೂ ಅವಕಾಶವಿಲ್ಲದೆ ಅಂಡಲೆಯುತ್ತಿದ್ದ ದಿಗಂತನನ್ನು ಯೋಗರಾಜ್ ಭಟ್ಟರು ಕರೆದು 'ಮುಂಗಾರು ಮಳೆ'ಯಲ್ಲಿ ಸಣ್ಣದೊಂದು ಅವಕಾಶ ಕೊಟ್ಟದ್ದೇ ಬಂತು; ಈತನಿಗೆ ನೆಲದ ಮೇಲೆ ಹಿಡಿದಿಡಲಾರದಷ್ಟು ತಿಮಿರು ಬೆಳೆಯಿತು. ಇನ್ನು ಭಟ್ಟರು ತಮ್ಮ 'ಗಾಳಿಪಟ'ದಲ್ಲಿ ಈತನನ್ನು ಸೆಕೆಂಡ್ ಹೀರೋ ಮಾಡಿದನಂತರ ಈತನ ಅಹಂಕಾರ ಮತ್ತಷ್ಟು ಇಮ್ಮಡಿಗೊಂಡಿತ್ತು. ಹೂವಿನ ಜೊತೆ ನಾರೂ ಸ್ವರ್ಗ ಸೇರಿದಂತೆ ಯೋಗರಾಜ್ ಭಟ್ ಮತ್ತು ಗೋಲ್ಡನ್ ಸ್ಟಾರ್ ಗಣೇಶ್‌ರ ಕ್ರೇಜ್ ಮಧ್ಯೆ ದಿಗಂತನಿಗೂ ಚಿತ್ರರಂಗದಲ್ಲಿ ಒಂದಷ್ಟು ಬೆಲೆ ಬಂತು. 'ಹೌಸ್ ಫುಲ್', 'ಬಿಸಿಲೆ', 'ಪುತ್ರ', 'ತಾರೆ', 'ಸಿಹಿಕನಸು', 'ಮಳೆಬಿಲ್ಲೇ'... ಮುಂತಾದ ಚಿತ್ರಗಳಿಗೆ ಬುಕ್ ಆದ. ಮಾತ್ರವಲ್ಲ ಯೋಗರಾಜ್ ಭಟ್ ಈತನನ್ನು ತಮ್ಮ 'ಮನಸಾರೆ' ಚಿತ್ರದಲ್ಲಿ ಪೂರ್ಣ ಪ್ರಮಾಣದ ನಾಯಕನನ್ನಾಗಿಸಿಕೊಂಡರು.

ಈಗ ನೋಡಿದರೆ ಈ ತಲೆಕೆಟ್ಟ ದಿಗಂತ್ ನಿರ್ಮಾಪಕರಿಗೆ ಮಾತು ಕೊಟ್ಟಂತೆ ಜುಲೈ 14ರಂದು ಅಮೆರಿಕಕ್ಕೆ ಹೋಗಿ ಶೂಟಿಂಗ್ ಮುಗಿಸುವ ಬದಲಾಗಿ ಇಲ್ಲೇ ಠಿಕಾಣಿ ಹೂಡಿದ್ದಾನೆ. ಅಷ್ಟೇ ಅಲ್ಲ, ಪ್ರಿಯಾಳಿಗೆ ಸಿನಿಮಾ ನಿರ್ದೇಶನವೆಂದರೆ ಏನೊಂದೂ ಗೊತ್ತಿಲ್ಲ, ಆಕೆಯ ಅಟ್ಟಹಾಸವನ್ನು ತಾಳಲಾರದೆ ಅದೆಷ್ಟೋ ಜನ ಈ ಚಿತ್ರದಿಂದಲೇ ದೂರ ಸರಿದಿದ್ದಾರೆ ಎಂದೆಲ್ಲಾ ಆರೋಪಿಸುತ್ತಿದ್ದಾನೆ. ಅದಕ್ಕಿಂತಲೂ ಆಘಾತಕಾರಿ ವಿಚಾರವೇನೆಂದರೆ ಪ್ರಿಯ ತನ್ನೊಂದಿಗೆ ಅಸಭ್ಯವಾಗಿ ವರ್ತಿಸಿದಳು, ಆಕೆಯ ಆಸೆಗಳಿಗೆ ತಾನು ಮಣಿಯಲಿಲ್ಲವಾದ್ದರಿಂದ ಆಕೆ ತನ್ನ ವಿರುದ್ಧ ಇಂತಹ ಆರೋಪಗಳನ್ನು ಮಾಡುತ್ತಿದ್ದಾಳೆ ಎಂಬಂತಹ ಸುದ್ದಿಗಳನ್ನು ಹರಡುತ್ತಿದ್ದಾನೆ. (ಮಹಿಳೆಯೊಬ್ಬಳ ಬಗ್ಗೆ ಹೀಗೆಲ್ಲಾ ಆರೋಪಿಸುವುದು ಸರಿಯೇ?)

ದಿಗಂತ್ ಮೊದಲು ತಾನು ನೆಟ್ಟಗಾಗುವುದನ್ನು ಕಲಿಯಲಿ, ತನ್ನ ವೃತ್ತಿಜೀವನದಲ್ಲಿ ಶಿಸ್ತನ್ನು ತಂದುಕೊಳ್ಳಲಿ. ರಾತ್ರಿಯಿಡೀ ಪಾರ್ಟಿಗಳಲ್ಲಿ ಕುಣಿದುಕುಪ್ಪಳಿಸುವ ಬದಲಾಗಿ ನೆಟ್ಟಗೆ ನಟಿಸುವುದನ್ನು ಕಲಿಯಲಿ. ತನ್ನನ್ನು ನಂಬಿ ಹಣ ಹೂಡುವ ನಿರ್ಮಾಪಕರಿಗೂ, ತನ್ನನ್ನು ಆಯ್ಕೆ ಮಾಡಿಕೊಳ್ಳುವ ನಿರ್ದೇಶಕರಿಗೂ ಒಂದಿಷ್ಟು ಮರ್ಯಾದೆ ತೋರಿಸುವುದನ್ನು ಮೈಗೂಡಿಸಿಕೊಳ್ಳಲಿ.

ಇಲ್ಲವೆಂದರೆ ದೂದ್‌ಪೇಡಾ ದಿಗಂತನನ್ನು ಎಕ್ಸ್‌ಟ್ರಾಗಳಿರಲಿ, ಗಾಂಧಿನಗರವೇ ತಿರಸ್ಕರಿಸುತ್ತದೆ.



ಹೊಸ್ಮನೆ ಮತ್ತು ಫ್ಲಾಪ್ ಚಿತ್ರಗಳು

ಕಳೆದ ಮೂರು ದಶಕಗಳಿಂದ ಅಮೆರಿಕದಲ್ಲಿ ಕ್ಯಾನ್ಸರ್ ತಜ್ಞರಾಗಿ ಅಪಾರ ಹೆಸರು ಮಾಡಿರುವ ನಾರಾಯಣ ಹೊಸ್ಮನೆ ಎಂಬ ಎನ್‌ಆರ್‌ಐಗೆ ಚಿತ್ರರಂಗದ ಬಗ್ಗೆ ಅದೆಂತಹದ್ದೋ ವ್ಯಾಮೋಹ ಇದ್ದಂತಿದೆ. ಅದಕ್ಕಾಗಿಯೇ ಅವರು ಈಗಾಗಲೇ ಹಲವಾರು ಸಿನಿಮಾಗಳ ನಿರ್ಮಾಣದಲ್ಲಿ ಪಾಲುದಾರರಾಗಿದ್ದಾರೆ. ಅವುಗಳಲ್ಲಿ 'ರಘು ರೋಮಿಯೋ' ಎಂಬ ಹಿಂದಿ ಚಿತ್ರ ಬಾಕ್ಸಾಫೀಸ್‌ನಲ್ಲೂ ಯಶಸ್ವಿಯಾಗಿ ಸುಮಾರು ಪ್ರಶಸ್ತಿಗಳನ್ನೂ ಪಡೆಯಿತು. ಆದರೆ ಅವರ ದುರಾದೃಷ್ಟ ಎಂತಹದ್ದು ಎಂದರೆ ಅವರು ಈತನಕ ಕೈಗೆತ್ತಿಕೊಂಡಿರುವ ಎಲ್ಲಾ ಕನ್ನಡ ಚಿತ್ರಗಳೂ ಬಾಕ್ಸ್ ಆಫೀಸಿನಲ್ಲಿ ಮಕಾಡೆ ಮಲಗಿವೆ.

ಮೂಲತಃ ಗೋಕರ್ಣದ ಹವ್ಯಕ ಬ್ರಾಹ್ಮಣರಾದ ಹೊಸ್ಮನೆ ಸುನಿಲ್ ಕುಮಾರ್ ದೇಸಾಯಿ ನಿರ್ದೇಶನದ 'ರಮ್ಯ ಚೈತ್ರ ಕಾಲ' ಎಂಬ ಸಿನಿಮಾದಲ್ಲಿ ಹಣ ಹೂಡಿದ್ದರು. ಆದರೆ ಆ ಚಿತ್ರ ಬಾಕ್ಸ್ ಆಫೀಸಿನಲ್ಲಿ ನೆಲಕಚ್ಚಿತು. ಅದಾದ ನಂತರ ಅವರು ಅರು [illegible] ಜೊತೆಗೂಡಿ ಟಿ.ಎನ್. ಸೀತಾರಾಂ ನಿರ್ದೇಶನದ 'ಮೀರಾ ಮಾಧವ ರಾಘವ' ಎಂಬ ಚಿತ್ರ ನಿರ್ಮಿಸಿದ್ದರು. ಈ ಚಿತ್ರವೂ ಇನ್ನಿಲ್ಲದಂತೆ ಮುಗ್ಗರಿಸಿತು.

ಆನಂತರ ಅವರು ಏಡ್ಸ್ ಕುರಿತು ಅರಿವು ಮೂಡಿಸುವ 'ಮುಖಪುಟ' ಎಂಬ ಚಿತ್ರವನ್ನು ನಿರ್ಮಿಸಿದರು. ಈ ಚಿತ್ರದ ನಿರ್ದೇಶಕಿ ರೂಪಾ ಅಯ್ಯರ್ ಸಾಕಷ್ಟು ಪ್ರಚಾರ ಪಡೆದರಾದರೂ ಚಿತ್ರ ಇನ್ನೂ ಬಿಡುಗಡೆಗೊಂಡಿಲ್ಲ.

'ಈ ಪ್ರೀತಿ' ಹೊಸ್ಮನೆಯವರ ನಾಲ್ಕನೇ ಚಿತ್ರ. ದಿಗಂತನ ತಿಮಿರಿನಿಂದಾಗಿ ಈ ಚಿತ್ರ ವಾದವಿವಾದದಲ್ಲಿ ಸಿಲುಕಿಕೊಂಡಿದೆಯಲ್ಲದೆ, ಸಂಪೂರ್ಣಗೊಳ್ಳದೆ, ಅರ್ಧಕ್ಕೆ ನಿಂತಿದೆ. ಪಾಪ ಹೊಸ್ಮನೆ!



ಮೈಸೂರೆಂಬ ಮೈಸೂರು ಹದಿನೈದೇ ದಿನದಲ್ಲಿ ತನ್ನ ಚೆಲುವನ್ನೆಲ್ಲಾ ಕಳೆದುಕೊಂಡು ದಿಗಿಲಿನಿಂದ ನಡುಗುತ್ತಿದ್ದರೆ, ಉಸ್ತುವಾರಿ ಸಚಿವೆ ಶೋಭಕ್ಕ ಮಾತ್ರ ಪಸಂದಾಗಿ ಅಮೆರಿಕ ಪ್ರವಾಸದಲ್ಲಿದ್ದಾಳೆ. ಆದರೆ ಈ ಇಡೀ ಕೋಮುಗಲಭೆಗೆ ಎಲ್ಲಾ ಪೂರ್ವ ತಯಾರಿಗಳೂ ನಡೆದಿದ್ದು ಮಾತ್ರ ಶೋಭ ಕರಂದ್ಲಾಜೆಯ ಉಸ್ತುವಾರಿಯಲ್ಲೇ ನಡೆದಿದೆ. ಇಂತಹ ಸಂದರ್ಭಗಳನ್ನು ಸರಿಯಾಗಿ ನಿಭಾಯಿಸುತ್ತಿದ್ದ ಹಿಂದಿನ ದಲಿತ ಪೊಲೀಸ್ ಅಧಿಕಾರಿ ಪರಮಶಿವಯ್ಯನವರನ್ನು ಎತ್ತಂಗಡಿ ಮಾಡಿ, ಆ ಜಾಗದಲ್ಲಿ ಚೆಡ್ಡಿಗಳ ಬಾಲಬಡುಕ ಸುನೀಲ್ ಅಗರ್‌ವಾಲ್‌ನನ್ನು ಕೂರಿಸಲಾಗಿದೆ.

ಮೈಸೂರಿನಲ್ಲಿ ಖಾಕಿ ಭಯೋತ್ಪಾದನೆ


ದೂರದೂರದ ಪ್ರವಾಸಿಗರಿಂದ ಸದಾ ಜೀವಂತಿಕೆಯಿಂದ, ತುಳುಕುತ್ತಿದ್ದ ಮೈಸೂರೆಂಬ ಸಾಂಸ್ಕೃತಿಕನಗರಿಯಲ್ಲಿ ಇಂದು ಆತಂಕ, ಭಯಗಳಿಂದ ಹೊರ ಬರದ ಸ್ಥಿತಿ ಏರ್ಪಟ್ಟಿದೆ ಎಂದರೆ ಅದಕ್ಕೆ ಚೆಡ್ಡಿ ಸಚಿವೆ ಶೋಭಾ ಕರಂದ್ಲಾಜೆ ಹಾಗೂ ಪೊಲೀಸ್ ವರಿಷ್ಠಾಧಿಕಾರಿ ಸುನೀಲ್ ಅಗರ್‌ವಾಲ್‌ರೇ ಹೊಣೆಗಾರರು. ಎರಡು ಧಾರ್ಮಿಕ ಸಮುದಾಯಗಳ ನಡುವೆ ಕಳೆದ ಏಪ್ರಿಲ್‌ನಲ್ಲಿ ಉಂಟಾದ ಕ್ಷುಲ್ಲಕ ಸಮಸ್ಯೆಯೊಂದನ್ನು ಜಿಲ್ಲಾಡಳಿತ ಸರಿಯಾದ ರೀತಿ ನಿಭಾಯಿಸಿದ್ದರೆ; ಪ್ರಮೋದ್ ಮುತಾಲಿಕ್‌ನೆಂಬ ಕೊಳಕುಬಾಯಿ ಮನುಷ್ಯನಿಗೆ ತಕ್ಕ ಶಾಸ್ತಿ ಮಾಡಿದ್ದರೆ ಮೈಸೂರಿನ ಶಾಂತಿ ಕದಡಲು ಕಾರಣವೇ ಇರಲಿಲ್ಲ.

ಕಮೀಷನರ್ ಸುನೀಲ್ ಅಗರ್‌ವಾಲ್ ಇದೀಗ ಮೈಸೂರಿನಲ್ಲಿ ಸೃಷ್ಟಿಸುತ್ತಿರುವ ಭಯೋತ್ಪಾದನೆಯನ್ನು ನೋಡಿದರೆ ಇದೇನು ಕರ್ನಾಟಕವೋ ಗುಜರಾತೋ ಎಂಬ ಸಂದೇಹ ವುಂಟಾಗುತ್ತದೆ. ಕೋಮುಘರ್ಷಣೆಯಾದಾಗಲಾದರೂ ಜನರು ಅಷ್ಟೊಂದು ಭಯಗೊಂಡಿರಲಿಲ್ಲ, ಆದರೆ ಈಗ ಸಾವಿರಾರು ಸಂಖ್ಯೆಯ ಪೊಲೀಸರು ಮೈಸೂರಿನ ರಸ್ತೆಗಳಲ್ಲಿ, ಗಲ್ಲಿಗಳಲ್ಲಿ, ಒಂದೂ ಬಿಡದಂತೆ ವಾಹನಗಳನ್ನು, ವಾಹನಗಳೊಳಗೆ ಪ್ರಯಾಣಿಕರ ಬ್ಯಾಗುಗಳನ್ನು, ತಲಾಶ್ ಮಾಡುತ್ತಾ ನಾಗರಿಕರಲ್ಲಿ ಅನವಶ್ಯಕ, ವಿಪರೀತ ಭಯಭೀತ ವಾತಾವರಣ ಸೃಷ್ಟಿಸುತ್ತಿದ್ದಾರೆ. ಕಂಡಕಂಡ ಮುಸ್ಲಿಮರನ್ನು ಬಂಧಿಸುತ್ತಿದ್ದಾರೆ. 19ರ ಮಧ್ಯರಾತ್ರಿಯವರೆಗೂ ನಿಷೇಧಾಜ್ಞೆ ಹೇರಲಾಗಿದೆ. ಕಳೆದ 15 ದಿನಗಳಲ್ಲಿ ಮಂಡಿಮೊಹಲ್ಲಾ, ಉದಯಗಿರಿ, ಲಷ್ಕರ್ ಏರಿಯಾಗಳಲ್ಲಿ ಕೂಲಿ ಮಾಡಿ ಬದುಕುವ ಜನರು ಮನೆಯಿಂದ ಹೊರಗೇ ಬರದಂತಾಗಿ ಒಪ್ಪೊತ್ತಿನ ಗಂಜಿಗೂ ಕರಕಷ್ಟವಾಗಿದೆ. ಹೊರಗೆ ಬಂದರೆ ಪೊಲೀಸರು ಬಂಧಿಸಿಬಿಡುವ ಭಯ. ಗಲಭೆ ಪೀಡಿತ ಪ್ರದೇಶಗಳಲ್ಲಿ ಒಂದು ಪೇಪರ್, ಹಾಲಿಗೂ ಪರದಾಡ ಬೇಕಾಗಿದೆ.


ಕೆಎಫ್‌ಡಿ, ಪಿಎಫ್‌ಐನ ರಾಕ್ಷಸೀಕರಣ

ಮೈಸೂರು ಗಲಭೆಗಳ ಹಿಂದೆ ಕೆಎಫ್‌ಡಿ, ಪಿಎಫ್‌ಐ ಸಂಘಟನೆಗಳ 'ಕೈವಾಡ'ವಿದೆ. ಹೊರರಾಜ್ಯ, ಜಿಲ್ಲೆಗಳಿಂದ 'ಜನ'ರನ್ನು ಕರೆಸಿದ್ದರು. ಇವಕ್ಕೆಲ್ಲ ಬಲವಾದ ಪುರಾವೆಗಳು ದೊರೆತಿವೆ ಎಂದು ಯಡ್ಡಿ ಮತ್ತು ಗೃಹಮಂತ್ರಿ ಆಚಾರ್ಯ ಯಾರೋ ಬಾಂಬು ಬಂದೂಕು ಹಿಡಿದು ದಾಳಿ ನಡೆಸಿದ ಭಯೋತ್ಪಾದಕರ ಬಗ್ಗೆ ಹೇಳುವಂತೆ ಹೇಳುತ್ತಿದ್ದರೆ, ಕೆಲ ಬೇಜವಾಬ್ದಾರಿ ಮಾಧ್ಯಮದವರು 'ಹೌದು, ಅವರು ಯಾವಾಗ ಬಂದಿದ್ದರು? ಎಲ್ಲಿ ಉಳಿದಿದ್ದರು ಎಂಬುದನ್ನು ತಿಳಿಯುವಲ್ಲಿ ಬೇಹುಗಾರಿಕಾ ಪಡೆಗಳು ವಿಫಲವಾಗಿವೆ!' ಅಂತೆಲ್ಲಾ ಬರೆಯುತ್ತಿದ್ದಾರೆ

ಹಾಗಾದರೆ ಕೆಎಫ್‌ಡಿ, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಗಳು ಅಲ್ಲಿ ಮಾಡಿದ ಅಪರಾಧವಾದರೂ ಏನು? ಜುಲೈ 3ರಂದು ರಾಮಸೇನೆಯವರು ಮುತಾಲಿಕನ ಸೂಚನೆಯಂತೆ ಶ್ರೀರಂಗಪಟ್ಟಣದ ನಾಗರಾಜಲಿಚ್ಚಿ ಎಂಬುವನಿಂದ ಹಂದಿ ತಲೆಯನ್ನು ತಂದು ಮಸೀದಿಯಲ್ಲಿಟ್ಟ ನಂತರದ ಗಲಭೆಗಳಲ್ಲಿ ಮೂವರು ಅಮಾಯಕ ಬಡವರು ಬಲಿಯಾಗುತ್ತಾರೆ. ಈ ಘಟನೆಯ ಬಗ್ಗೆ ಯಾವ ತನಿಖೆಯನ್ನು ನಡೆಸಿ 'ಹಂದಿ ತಲೆ'ಯ ಹಿಂದಿನ ಚೆಡ್ಡಿ ತಲೆಗಳನ್ನು ಗುರುತಿಸುವ ಬದಲು, ಎಸ್ಪಿ ಸುನೀಲ್ ಅಗರ್‌ವಾಲ್ ಕಾನೂನುಬಾಹಿರವಾಗಿ ಬಿಜೆಪಿ ಸಂಘಪರಿವಾರದ ಬಂದ್‌ಗೆ ಸಮ್ಮತಿ ಒದಗಿಸುತ್ತಾನೆ. ಹಿಂದಿನ ದಿನ ಬಿಜೆಪಿ ಯುವ ಮೋರ್ಚಾದ ಅಧ್ಯಕ್ಷ ಗಿರೀಶನ ಮೇಲೆ ಹಲ್ಲೆ ಮಾಡಿದವರನ್ನು ಕಂಡುಹಿಡಿಯುವುದಾಗಲೀ, ಕ್ರಮಕೈಗೊಳ್ಳುವುದಾಗಲೀ ನಡೆಸುವುದಿಲ್ಲ, ಇಲ್ಲೂ ರಾಜಕೀಯ ಮಾಡುವ ಆಚಾರ್ಯ ಗಿರೀಶನನ್ನು ಭೇಟಿ ಮಾಡುತ್ತಾನಾಗಲೀ, ಗಲಭೆಯಲ್ಲಿ ಸತ್ತ ಇಬ್ಬರು ಮುಸ್ಲಿಂ ಮತ್ತು ಒಬ್ಬ ಹಿಂದೂ ಬಡವರ ಮನೆಗೆ ಭೇಟಿ ಮಾಡುವುದಿಲ್ಲ. ಐದನೇ ತಾರೀಕು ಗಲಭೆಗೆ ಸಂಬಂಧಿಸಿ ದಿಢೀರ್ ಅಂತ 90ರಿಂದ 100 ಮುಸ್ಲಿಂ ಯುವಕರ ಬಂಧನವಾಗುತ್ತದೆ. ಗಲಭೆಗಳನ್ನು ನಡೆಸಿದ್ದು ಕೆಎಫ್‌ಡಿ ಎಂಬ ಆರೋಪವನ್ನು ಅಲ್ಲಗಳೆದು ಸ್ಪಷ್ಟೀಕರಣ ನೀಡಲು ಪತ್ರಿಕಾಗೋಷ್ಠಿ ಕರೆದಿದ್ದ ಕೆಎಫ್‌ಡಿ ಜಿಲ್ಲಾಧ್ಯಕ್ಷ ಖಲೀಮ್ ಮತ್ತು ಇತರ 17 ಕಾರ್ಯಕರ್ತರನ್ನು ಬಂಧಿಸಿ ಸೆ.143, 144, 147, 153(ಎ), 120(ಬಿ), RW 149 ಕೇಸು ದಾಖಲಿಸಿ, ಪೊಲೀಸ್ ಕಸ್ಟಡಿಗೆ ತೆಗೆದುಕೊಂಡು ಮತ್ತೆ 307 ಕೇಸು ದಾಖಲಿಸಲಾಗುತ್ತದೆ. 7ರಂದು ಸಂಜೆ ಪಿಎಫ್‌ಐನ ಜಿಲ್ಲಾ ಕಚೇರಿಯ ಬಾಗಿಲು ಒಡೆದು ನುಗ್ಗಿ ಕಂಪ್ಯೂಟರ್, ಸ್ವಾತಂತ್ರ್ಯೋತ್ಸವ ಪರೇಡ್ ಡ್ರೆಸ್, ನಾಲ್ಕು ರಾಷ್ಟ್ರಧ್ವಜಗಳನ್ನು ಕೊಂಡೊಯ್ಯಲಾಗುತ್ತದೆ. ಸಂಜೆ ಏಳೂವರೆಗೆ ಕಚೇರಿಗೆ ಸೀಲು ಹಾಕಲಾಗುತ್ತದೆ. ಇದರ ಹೊರತಾಗಿಯೂ ಅಮಾಯಕ ಮುಸ್ಲಿಮರ ಮನೆಗಳಿಗೆ ನುಗ್ಗಿ ಬಂಧಿಸುತ್ತಲೇ ಇರುತ್ತಾರೆ.




ಪ್ರತಿಭಟನಾ ನಿರತರು.....




ಪೊಲೀಸರು ಅಶ್ರುವಾಯು ಸಿಡಿಸುತ್ತಿರುವುದು....

ಬಂಧನಕ್ಕೊಳಗಾದ ಅಮಾಯಕರ ಬಿಡುಗಡೆಗಾಗಿ 9ರಂದು 'ಜೈಲ್ ಭರೋ' ಚಳವಳಿಯನ್ನು ನಡೆಸುತ್ತಿದ್ದೇವೆ ರಕ್ಷಣೆ ಕೊಡಿ ಎಂದು 8ರ ರಾತ್ರಿಯೇ ಸಂಘಟನೆಯ ಪದಾಧಿಕಾರಿಗಳು ಪೊಲೀಸರಿಗೆ ಮಾಹಿತಿಯನ್ನು ನೀಡಿರುತ್ತಾರೆ. ಬೆಂಗಳೂರು, ಮಂಗಳೂರು, ಮಂಡ್ಯ, ಉಡುಪಿ ಮುಂತಾದೆಡೆಗಳಿಂದ ಬಂದ ಸಾವಿರಾರು ಮಂದಿ ಶಾಂತಿಯುತವಾಗಿ ಮೆರವಣಿಗೆ ಹೊರಡುತ್ತಾರೆ. ಇದು ಜೈಲ್‌ಭರೋ ಚಳವಳಿಯಾದ್ದರಿಂದ, ಒತ್ತಾಯಪೂರ್ವಕವಾಗಿಯೇ ಕೆಲವರು ಬಂಧನಕ್ಕೊಳಗಾಗುತ್ತಾರೆ. ಉಳಿದವರೂ 'ನಮ್ಮನ್ನೂ ಬಂಧಿಸಿ' ಎಂದು ಒತ್ತಾಯಿಸುತ್ತಿದ್ದಂತೇ ಎಸಿಪಿ ಡಿಸೋಜ, ಪೂಜಾರಿ ಮುಂತಾದವರು ಹೊಲಸು ಮಾತನಾಡುತ್ತಾ, ಮಹಿಳಾ ಕಾರ್ಯಕರ್ತೆಯರ ಮೇಲೆ ಲಾಠಿಚಾರ್ಜ್ ಆರಂಭಿಸಿಯೇ ಬಿಟ್ಟರು. ಅಶ್ರುವಾಯು ಸಿಡಿಸಲಾಯಿತು. 260 ಜನರ ಬಂಧನದ ನಂತರ ಪೊಲೀಸರೇ ಸೃಷ್ಟಿಸಿದ ಈ ಉದ್ವಿಗ್ನ ಪರಿಸ್ಥಿತಿಯಲ್ಲಿ ಆವೇಶಗೊಂಡ ಕೆಲವರು ಕಲ್ಲು ತೂರಿ ಒಂದಿಬ್ಬರು ಪೊಲೀಸರಿಗೂ ಗಾಯಗಳಾದವು. ಯಾವನೋ ಕಿಡಿಗೇಡಿಯೊಬ್ಬ ಪೊಲೀಸನೊಬ್ಬನಿಗೆ ಚಾಕುವಿನಿಂದ ಹೊಡೆದಿದ್ದಾನೆ. ಈ ನಡುವೆಯೂ ಪಿಎಫ್‌ಐ ನಾಯಕರೇ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದು ಜನರನ್ನು ಹಿಂದೆ ಸರಿಯಲು ಹೇಳಿದ್ದಾರೆ.



ಶೋಭಾ ಕರಂದ್ಲಾಜೆ



ಸುನೀಲ್‌ಅಗರ್‌ವಾಲ್

ಈಗ ಹೇಳಿ, ಯಡ್ಡಿ ಹೇಳುವಂತೆ ಇಡೀ ಪ್ರಕರಣದಲ್ಲಿ ಯಾವ ಷಡ್ಯಂತ್ರವಿದೆ? ತಮ್ಮ ಪದಾಧಿಕಾರಿಗಳ ಬಿಡುಗಡೆಗೆ ಒತ್ತಾಯಿಸಿ ಬೇರೆ ಬೇರೆ ಜಿಲ್ಲೆಗಳಿಂದ ಕಾರ್ಯಕರ್ತರು ಬಂದು ಹೋರಾಟ ನಡೆಸಿದ್ದರೆ ಅದು ಷಡ್ಯಂತ್ರ ಹೇಗಾಗುತ್ತದೆ? ಪ್ರಜಾಪ್ರಭುತ್ವದಲ್ಲಿ ಇದಕ್ಕೆ ಅವಕಾಶವಿಲ್ಲವೇ?

ಈ ಕುರಿತು ಮೈಸೂರಿನ ಪ್ರಗತಿಪರರೆಲ್ಲಿ ಕೊಂಡ... ಮೂಗು ಬಾಯಿ ಮುಚ್ಚಿಕೊಂಡಿರುವುದೇಕೆ? ಬಾ... ಬಂದಂತೆ ಮಾತಾಡುವ ಯಡ್ಡಿಯಾಗಲೀ ಎಲ್ಲ... ಸೆನ್ಸೇಶನ್ ಮಾಡಬಯಸುವ ಚೆಡ್ಡಿ ಬುದ್ಧಿ... ಮಾಧ್ಯಮದವರಾಗಲೀ ಒಂದನ್ನಂತೂ ಅರ್ಥ ಮಾಡಿಕೊ... ಬೇಕು. ಇಂದು ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಸಾವಿರಾ... ಶಿಸ್ತುಬದ್ಧ ಕಾರ್ಯಕರ್ತರನ್ನು ಹೊಂದಿ, ವಿವಿಧ ಪ್ರಗತಿಪ... ಸಂಘಟನೆಗಳೊಂದಿಗೆ ಜಂಟಿಯಾಗಿ ಸೌಹಾರ್ದ... ಕಾರ್ಯಕ್ರಮಗಳನ್ನು, ಹೋರಾಟಗಳನ್ನು ಹಮ್ಮಿಕೊಳ್ಳ... ಬಂದಿರುವ, ನಾಡಿನ ಬಹುಸಂಖ್ಯಾತ ಹಿಂದೂಗಳೊಂದಿ... ಸಹಬಾಳ್ವೆಯ ಅಗತ್ಯವನ್ನು ಎಲ್ಲಾ ಮುಸ್ಲಿಮರಿಗೂ... ಮನವರಿಕೆ ಮಾಡುತ್ತಾ ಕೆಲವೊಮ್ಮೆ ಚುನಾವಣೆಗಳಲ್ಲಿಯೂ... ತನ್ನ ಅಭ್ಯರ್ಥಿಗಳನ್ನು ನಿಲ್ಲಿಸುತ್ತಾ ಬಂದಿರುವ ಕೆಎಫ್... ಪಿಎಫ್‌ಐ, ಸಂಘಟನೆಗಳು ಶಾಂತಿಮಾರ್ಗವನ್ನು ಬಿಟ್ಟಿದ್ದ... ಇಷ್ಟರಲ್ಲಿ ದೊಡ್ಡ ರಕ್ತಪಾತವೇ ನಡೆಯುತ್ತಿತ್ತು.

ಮತ್ತೆ ಮೈಸೂರು ಪೊಲೀಸರು, ಕೆಎಫ್‌ಡಿ, ಪಿಎಫ್... ಸಂಘಟನೆಯಿಂದ ಅಷ್ಟು ಲಕ್ಷ ಜನ ಬರ್ತಾರಂತೆ, ಮು... ಗಲಾಟೆ ಮಾಡ್ತಾರಂತೆ ಎಂದು ಇಲ್ಲಸಲ್ಲದ ಕತೆಗಳನ್ನು ಕಟ್ಟಿ ಸಾರ್ವಜನಿಕರಲ್ಲಿ ಸಂಘಟನೆಯ ಬಗ್ಗೆ ವಿಚಿ... ಪೂರ್ವಾಗ್ರಹ, ಆತಂಕಗಳಿಗೆ ಕಾರಣರಾಗುತ್ತಿದ್ದಾರೆ.

ಜೈಲುಗಳಲ್ಲಿ ಕಾರ್ಯಕರ್ತರು

ರಾಜ್ಯದಲ್ಲಿ ರೈತಸಂಘ, ಡಿಎಸ್‌ಎಸ್‌ಗಳು ನೂರಾರು ಸಲ ಜೈಲ್ ಭರೋ ಚಳವಳಿ ನಡೆಸಿವೆ. ಅಂತಹ ಸಂದರ್ಭದಲ್ಲೆಲ್ಲಾ ಅವರನ್ನು ಒಂದೆರಡು ದಿನಗಳಲ್ಲಿಯೇ ಬಿಡುಗಡೆ ಮಾಡಲಾಗಿದೆ.

ಆದರೆ ಇಲ್ಲಿ ನಡೆದಿರುವುದೇನು? ಪಿಎಫ್‌ಐನ ಬಂಧಿತ... 200 ಕಾರ್ಯಕರ್ತರನ್ನು ಗುಲ್ಬರ್ಗಾ, ಬೆಳಗಾ... ಜೈಲುಗಳಲ್ಲಿರಿಸಿ, ಎಲ್ಲರ ಮೇಲೂ ಹಾಫ್ ಮರ್ಡ... ಕ್ರಿಮಿನಲ್ ಕೇಸುಗಳನ್ನು ಹಾಕಲಾಗಿದೆ. ಹಲವಾರು ಕಾರ್ಯಕರ್ತರನ್ನು ಪೊಲೀಸರು ವಿಚಾರಣೆಗೆ ಕರೆ... ಮನಸೋಇಚ್ಛೆ ಥಳಿಸಲಾಗಿದೆ. ಬಂಧಿತರ ಪರವಾಗಿ ಹೋ... ಅಬೂಬಕರ್ ಹಾಗೂ ಷರೀಫ್ ಎಂಬ ವಕೀಲರಿಗೂ ಕೈದಿಗಳ ಭೇಟಿಗೆ ಅವಕಾಶ ಕೊಟ್ಟಿಲ್ಲ, ಇದೆಲ್ಲಾ ಮಾನವ... ಹಕ್ಕುಗಳ ಉಲ್ಲಂಘನೆಯಲ್ಲವೇ? ಅಷ್ಟೂ ಜನರ ಮನೆಗಳ... ಪರಿಸ್ಥಿತಿ ಏನಾಗಿರಬೇಡ? ನಮ್ಮ ಪತ್ರಿಕೆಗಳಿಗೆ... ಟಿ.ವಿ. ಇದೇಕೆ ಸೆನ್ಸೇಶನ್ ಸುದ್ದಿ ಆಗಲ್ಲ?

ಶೋಭಕ್ಕ ಎಲ್ಲಕ್ಕ?


ಮೈಸೂರೆಂಬ ಮೈಸೂರು ಹದಿನೈದೇ ದಿನದಲ್ಲಿ ತನ್ನ ಚೆಲುವನ್ನೆಲ್ಲಾ ಕಳೆದುಕೊಂಡು ದಿಗಿಲಿನಿಂದ ನಡುಗುತ್ತಿದ್ದರೆ, ಉಸ್ತುವಾರಿ ಸಚಿವೆ ಶೋಭಕ್ಕ ಮಾತ್ರ ಪಸಂದಾಗಿ ಅಮೆರಿ... ಪ್ರವಾಸದಲ್ಲಿದ್ದಾಳೆ. ಆದರೆ ಈ ಇಡೀ ಕೋಮುಗಲಭೆಗೆ ಎಲ್ಲಾ ಪೂರ್ವ ತಯಾರಿಗಳೂ ನಡೆದಿದ್ದು ಮಾತ್ರ, ಶೋಭ... ಕರಂದ್ಲಾಜೆಯ ಉಸ್ತುವಾರಿಯಲ್ಲೇ ನಡೆದಿದೆ. ಇಂತಹ ಸಂದರ್ಭಗಳನ್ನು ಸರಿಯಾಗಿ ನಿಭಾಯಿಸುತ್ತಿದ್ದ ಹಿಂದಿನ ದಲಿತ ಪೊಲೀಸ್ ಅಧಿಕಾರಿ ಪರಮಶಿವಯ್ಯನವರನ್ನು ಎತ್ತಂಗಡಿ ಮಾಡಿ, ಆ ಜಾಗದಲ್ಲಿ ಚೆಡ್ಡಿಗಳ ಬಾಲಬಡುಕ ಸುನೀಲ್ ಅಗರ್‌ವಾಲ್‌ನನ್ನು ಕೂರಿಸಲಾಗಿದೆ. ಅಷ್ಟೇ ಅಲ್ಲ, ಈ ಗಲಭೆಯನ್ನು ಸರಿಯಾದ ರೀತಿಯಲ್ಲಿಯೇ ನಿಭಾಯಿಸುವ ಪ್ರಯತ್ನದಲ್ಲಿ... ಜಿಲ್ಲಾಧಿಕಾರಿ ಮಣಿವಣ್ಣನ್‌ಗೂ ಬ್ರೇಕ್ ಹಾಕಲಾಗಿದೆ. ಒಂದು ಹಂತದಲ್ಲಿ ಮಣಿವಣ್ಣನ್ ಶ್ಲಾಘನೀಯ ರೀತಿಯಲ್ಲಿ ಕಾರ್ಯ... ನಿರ್ವಹಿಸಿದರೂ, ಹಾಗೆ ಮುಂದುವರೆಯಲು ಅಗರ್‌ವಾಲ್ ಬಿಡಲೇ ಇಲ್ಲ.

ಮೈಸೂರು ಮತ್ತೆ ಶಾಂತವಾಗಬೇಕಾದರೆ.....

ಯಡ್ಡಿ ಬಾಯಿಗೆ ಬಂದಂತೆ ಅಸಂಬದ್ಧ ಮಾತನಾಡುವುದನ್ನು ಮೊದಲು ನಿಲ್ಲಿಸಲಿ. ಕೋಮುಗಲಭೆ... ಕಾರಣರಾದವರನ್ನು ಗುರುತಿಸಿ, ಕ್ರಮಕೈಗೊಳ್ಳಬೇಕು. ಎರಡೂ... ಸಮುದಾಯಗಳ ನಡುವೆ ನಂಬಿಕೆ ವಿಶ್ವಾಸ ಮೂಡಿಸಲು... ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ... ಕೂಡಲೇ ವಿಧಿಸಿರುವ ಕರ್ಫ್ಯೂ ಹಿಂತೆಗೆಯಬೇಕು. ಬಂಧಿಸಲ್ಪಟ್ಟಿರುವ ಇನ್ನೂರಕ್ಕೂ ಹೆಚ್ಚು ಅಮಾಯಕ... ಹಿಂದೂ-ಮುಸ್ಲಿಮರನ್ನು ಬಿಡುಗಡೆಗೊಳಿಸಿ ಅವರ... ಮೇಲಿನ ಕೇಸುಗಳನ್ನು ಹಿಂಪಡೆದುಕೊಳ್ಳಬೇಕು. ಪಿಎಫ್‌ಐ... ಮೇಲಿನ ದುರುದ್ದೇಶಪೂರಿತ ಅಪಪ್ರಚಾರವನ್ನು ನಿಲ್ಲಿಸಬೇಕು. ಮೈಸೂರಿನಲ್ಲಿ ಸರ್ವಧರ್ಮ, ಸರ್ವಪ... ಸಂಘಟನೆಗಳ ಸಭೆ ಕರೆದು ಪರಿಸ್ಥಿತಿಯನ್ನು ತಿಳಿಗೊಳಿಸುವ... ಜಿಲ್ಲಾಡಳಿತ ಪ್ರಾಮಾಣಿಕ ಪ್ರಯತ್ನ ಮಾಡಬೇಕು.

● ವರದಿಗಾ...

ಸರಹಳ್ಳಿ: ಡವಿಯ ಭೂಮಿಗೆ ಾಯಿ ಹಾಕಿದ ರೌಡಿ ಎಲ್‌ಎ ಮುನಿರಾಜು



ಮುನಿರಾಜು

ಅಸಹಾಯಕ ಹೆಣ್ಣುಮಗಳಿಗೆ 80 ವರ್ಷ. 1 ಎಕರೆ ಜಮೀನಿನಲ್ಲಿ 32 ವರ್ಷಗಳಿಂದ ಕೃಷಿ ತ್ತ ಮೂವರು ಹೆಣ್ಣುಮಕ್ಕಳನ್ನು ಳೆ. ಈಗ ನೆಲಗಳ್ಳ ರೌಡಿಯೊಬ್ಬ ಮಿಗೆ ಕೈ ಹಾಕಿ, ಗೂಂಡಾಗಿರಿಯ ಕ ವೃದ್ಧೆಯ ಜಮೀನನ್ನು ಕಿತ್ತು ಹೊರಟಿದ್ದಾನೆ.



ಲಕ್ಷ್ಮಮ್ಮ

ಗಳೂರೆಂಬ ಈ ರಿಯಲ್ ಪ್ರಪಂಚದಲ್ಲಿ ಇಂಥವು ನಿತ್ಯ ಎಂದು ನೀವು ಉಪೇಕ್ಷೆ ಮಾಡು ? ಆದರೆ ಈ ಭೂಗಳ್ಳ ಮಹಾ ದಾಸರಹಳ್ಳಿಯ ಎಂಎಲ್‌ಎ ಮುನಿ ನೆಲಗಳ್ಳತನ ಬಿಟ್ಟರೆ ಮತ್ತೇನೂ ಗೊತ್ತಿರದ ಕಂಟಕ ಎಲಿಮೆಂಟುಗಳಿಗೆ ಟಿಕೆಟು ನೀಡಿ ೌಧದ ಒಳಗೆ ಬಿಟ್ಟುಕೊಂಡ ಬಿಜೆಪಿಯ ಭಂಡರಿಗೆ ರ್ಷದ ಅಮಾಯಕ ವೃದ್ಧೆಯ ಧ್ವನಿ ಕೇಳಿತಾದರೂ ಾದಕ್ಕೆ ನಿದರ್ಶನ ಎಂಬಂತೆ ಸದ್ಯ ಜೀವಭಯದಲ್ಲಿ ತ್ತಿರುವ ಈ ಮಹಿಳೆ ಪೊಲೀಸ್ ಕಮೀಷನರ್, ತ್ರಿ, ಮುಖ್ಯಮಂತ್ರಿಗಳಿಗೆ ಮನವಿ ಅರ್ಪಿಸಿದ್ದು ಪ್ರಯೋಜನಕ್ಕೂ ಬಂದಿಲ್ಲ. ಬದಲಾಗಿ ಅಲ್ಲಿನ ಪೊಲೀಸರೇ ಆಕೆಗೆ ಧಮಕಿ ಹಾಕುತ್ತಿದ್ದಾರೆ. ಶಾಸಕನ ಗೂಂಡಾಪಡೆ ದಿನವೂ ಈ ಮಹಿಳೆಯ ಮನೆಗೆ ಬಂದು ಗಲಾಟೆ ಮಾಡುತ್ತಿದೆ.

ದಾಸರಹಳ್ಳಿ ಕ್ಷೇತ್ರದ ವ್ಯಾಪ್ತಿಗೆ ಬರುವ ಯಶವಂತಪುರ ಹೋಬಳಿಯ ಕೆರೆಗುಡ್ಡದ ಹಳ್ಳಿಯ 80 ವರ್ಷ ವಯಸ್ಸಿನ ಮಲ್ಲಮ್ಮರಿಗೆ ಆ ಊರಲ್ಲಿ ಸರ್ವೆ ನಂಬರ್ 12/1 ರಲ್ಲಿ 1 ಎಕರೆ 15 ಗುಂಟೆ ಜಮೀನಿದ್ದು ಮೂರು ದಶಕಗಳಿಂದ ಅಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಗಂಡ ತೀರಿಹೋದ ಮೇಲೆ ಇಡೀ ಸಂಸಾರದ ಜವಾಬ್ದಾರಿ ಮಲ್ಲಮ್ಮರ ಮೇಲೆ ಬಿತ್ತು. ಮೂವರು ಹೆಣ್ಣು ಮಕ್ಕಳಲ್ಲಿ ಒಬ್ಬಳು ವಿಕಲಚೇತನೆ.

1984ರಲ್ಲಿ ರಾಜ್ಯ ಸರ್ಕಾರ ಯುಎಲ್‌ಸಿ ವತಿಯಿಂದ ಈ ಭೂಮಿಯನ್ನು ಸ್ವಾಧೀನ ಮಾಡಿಕೊಂಡಿತ್ತು. ಆದರೆ ಯಾವುದೇ ಪರಿಹಾರ ತೆಗೆದುಕೊಳ್ಳಲು ನಿರಾಕರಿಸಿದ ಮಲ್ಲಮ್ಮ ಕೋರ್ಟ್ ಮೊರೆ ಹೋದರು. 25/07/2007ರಂದು ಹೈಕೋರ್ಟ್‌ನ ವಿಭಾಗೀಯ ಪೀಠ ನೀಡಿದ ತೀರ್ಪು ಮಲ್ಲಮ್ಮನ ಪರವಾಗಿತ್ತು. ಮತ್ತೆ ಮಲ್ಲಮ್ಮ ಅಲ್ಲಿ ಕೃಷಿ ಮುಂದುವರೆಸಿದರು.

ಕಂಡಕಂಡ ನೆಲಕ್ಕೆ ನಾಲಿಗೆ ಚಾಚುವುದನ್ನೆ ಪರಮ ವೃತ್ತಿಯಾಗಿ ಮಾಡಿಕೊಂಡಿರುವ ಶೆಟ್ಟಿಹಳ್ಳಿ ಮುನಿರಾಜು ಶಾಸಕನಾದ ನಂತರ ಮಲ್ಲಮ್ಮನ ಹೊಲದ ಪಕ್ಕದಲ್ಲಿದ್ದ ತನ್ನ ಜಮೀನನ್ನು ವಿಸ್ತರಿಸುವ ಪ್ಲಾನು ಹಾಕಿದ. ಮಲ್ಲಮ್ಮ ಮತ್ತು ಆಕೆಯ ಮಕ್ಕಳನ್ನು ತನ್ನ ಮನೆಗೆ ಕರೆಸಿಕೊಂಡ ರಾಕ್ಷಸ ಮುನಿರಾಜು ಜಮೀನನ್ನು ತನಗೆ ಮಾರಲೇಬೇಕು ಎಂದು ಆವಾಜ್ ಹಾಕಿದ. ಇರುವ ಒಂದು ಎಕರೆ ಭೂಮಿ ಹೋದರೆ ತಾವೆಲ್ಲ ಬೀದಿಪಾಲು ಎಂದರಿತ ಮಲ್ಲಮ್ಮ ಸುತರಾಂ ಸಾಧ್ಯವಿಲ್ಲ ಎಂದುಬಿಟ್ಟರು. 'ತಹಶೀಲ್ದಾರ್ ಆಫೀಸಿನಲ್ಲಿ ನೀನು ಅದ್ಹೇಗೆ ಆರ್‌ಟಿಸಿ, ಮ್ಯುಟೇಷನ್ ಮಾಡಿಸಿಕೊಳ್ಳುತ್ತೀಯಾ ನೋಡುತ್ತೇನೆ. ನೀನು, ನಿನ್ನ ಮೂವರು ಹೆಣ್ಣುಮಕ್ಕಳು ಅದ್ಹೇಗೆ ಬದುಕುತ್ತೀರಿ ನೋಡ್ತೀನಿ' ಅಂತಾ ಗೂಂಡಾ ಭಾಷೆಯಲ್ಲಿ ಬೊಗಳಿದ. ಮಲ್ಲಮ್ಮನ ಅಳಿಯಂದಿರಾದ ಪುಟ್ಟಸ್ವಾಮಿ ಮತ್ತು ಗಂಗಾಧರರಿಗೆ ಕೊಲೆ ಬೆದರಿಕೆ ಹಾಕಿದ.



ಲಕ್ಷ್ಮಮ್ಮ ತನ್ನ ಹೊಲದಲ್ಲಿ...

ಹೈಕೋರ್ಟ್ ಆದೇಶವನ್ನು ಲಗತ್ತಿಸಿ ತಹಶೀಲ್ದಾರ್ ಕಚೇರಿಗೆ ಆರ್‌ಟಿಸಿ, ಮ್ಯುಟೇಷನ್‌ಗಾಗಿ ಅರ್ಜಿ ಹಾಕಿದಳು ಮಲ್ಲಮ್ಮ. ದುಷ್ಟ ಮುನಿರಾಜು ನಕಲಿ ದಾಖಲೆಗಳನ್ನು ಸೃಷ್ಟಿಸಿ, ಮಲ್ಲಮ್ಮನ ಜಮೀನಿಗೆ ನಕಲಿ ವಾರಸುದಾರರನ್ನು ಹುಟ್ಟು ಹಾಕಿ ಮಲ್ಲಮ್ಮನಿಗೆ ಅಡ್ಡಿಪಡಿಸತೊಡಗಿದ. ಆದರೆ ಹೈಕೋರ್ಟ್ ಆದೇಶವಿದ್ದುದರಿಂದ ವಿಶೇಷ ತಹಶೀಲ್ದಾರ್ ಸಹ ಏನೂ ಮಾಡುವಂತಿರಲಿಲ್ಲ. 06/05/2008ರಂದು ಮಲ್ಲಮ್ಮನ ಹೆಸರಿಗೆ ಆರ್‌ಟಿಸಿ, ಮ್ಯುಟೇಷನ್ ನೀಡಲು ಆದೇಶಿಸಿದರು. ಇದರ ಅನ್ವಯ ಉಪವಿಭಾಗಾಧಿಕಾರಿಗಳು ಕೂಡಾ ಇದನ್ನು ಅನುಮೋದಿಸಿದರು. ಆದರೆ ನಂತರ ಮುನಿರಾಜುವಿನ ಒತ್ತಡದಿಂದ ತಡೆಯಾಜ್ಞೆ ನೀಡಿದರು. ಆದರೂ ಮಲ್ಲಮ್ಮ ಹಿಂದೆ ಸರಿಯಲಿಲ್ಲ. ಕೊನೆಗೆ 30/08/2008ರಂದು ತಡೆಯಾಜ್ಞೆಯನ್ನು ತೆರವುಗೊಳಿಸಿದರು.

ಅಂದಿನಿಂದ ಮುನಿರಾಜು ಮೃಗನಂತೆ ಈ ಅಮಾಯಕ ಕುಟುಂಬವನ್ನು ಕಾಡತೊಡಗಿದ. ಮ್ಯುಟೇಷನ್ ಆಯಿತು. ಆದರೆ ಆರ್‌ಟಿಸಿ ಮಾಡುವ ಸಮಯದಲ್ಲಿ ಮತ್ತೆ ಶಾಸಕ ಅಡ್ಡಿ ಮಾಡಲಾರಂಭಿಸಿದ. ಜಿಲ್ಲಾ ರಾಜಸ್ವ ನಿರೀಕ್ಷಕರ ಮೇಲೆ ಒತ್ತಡ ಹೇರಿ ಆರ್‌ಟಿಸಿ ಮಾಡುವುದನ್ನು ತಡೆ ಹಿಡಿದ. ಈಗ ಮಲ್ಲಮ್ಮ ರಾಜಸ್ವ ನಿರೀಕ್ಷಕರ ವಿರುದ್ಧ ಲೋಕಾಯುಕ್ತರಿಗೆ ದೂರು ನೀಡಿದ್ದಾರೆ.

ಇದಷ್ಟೇ ಅಲ್ಲದೆ, ಮಲ್ಲಮ್ಮನ ಕುಟುಂಬ ತಮ್ಮ ಜಮೀನಿನಲ್ಲಿ ವ್ಯವಸಾಯ ಮಾಡದಂತೆ ಅಡ್ಡಿ ಮಾಡುತ್ತಿದ್ದಾನೆ ಖದೀಮ ಮುನಿರಾಜು. ಸ್ಥಳೀಯ ಇನ್ಸ್‌ಪೆಕ್ಟರ್ ಸುಬ್ಬಣ್ಣನನ್ನು ಬಳಸಿಕೊಂಡು ಅವರು ಹೊಲಕ್ಕೆ ಹೋಗದಂತೆ ತಡೆಯುತ್ತಿದ್ದಾನೆ. ಇದನ್ನು ತಪ್ಪಿಸಲು ಸಿವಿಲ್ ಕೋರ್ಟ್ ಮೊರೆ ಹೋದ ಮಲ್ಲಮ್ಮ ತಮ್ಮ ಪರವಾಗಿ ನಿಷೇಧಾಜ್ಞೆ (ಆದೇಶ ಸಂಖ್ಯೆ ಒ.ಎಸ್.1367/08) ತಂದು, ಜಮೀನಿನಲ್ಲಿ ಈ ಕುರಿತು ಬೋರ್ಡ್ ಕೂಡಾ ಹಾಕಿದ್ದಾರೆ. ಆದರೂ ಸುಮ್ಮನಿರದ ಮುನಿರಾಜು ಇನ್ಸ್‌ಪೆಕ್ಟರ್ ಮೂಲಕ ಬೋರ್ಡ್ ಕಿತ್ತು ಹಾಕಲು ಪ್ರಯತ್ನಿಸುತ್ತಲೇ ಇದ್ದಾನೆ.

ಮುನಿರಾಜುವಿನ ಈ ದಬ್ಬಾಳಿಕೆ ಕುರಿತು ಮಲ್ಲಮ್ಮನವರು ಮುಖ್ಯಮಂತ್ರಿ, ಗೃಹಮಂತ್ರಿ, ಕಂದಾಯ ಮಂತ್ರಿಗಳಿಗೆ ನೀಡಿದ ದೂರು ಕಸದಬುಟ್ಟಿ ಸೇರಿದೆ. ಮುನಿರಾಜುವಿನ ಕಸ ತಿಂದು ಟಿಕೆಟ್ ಕೊಟ್ಟವರು ಇನ್ನೇನು ಮಾಡುತ್ತಾರೆ? ಸಿ.ಎಂ, ಗೃಹಮಂತ್ರಿಗಳೇ ಸುಮ್ಮನಿರುವಾಗ, ಮಾನವ ಹಕ್ಕು ಆಯೋಗ, ಪೊಲೀಸ್ ಕಮೀಷನರ್, ಡೆಪ್ಯೂಟಿ ಕಮೀಷನರ್, ಲೋಕಲ್ ಪೊಲೀಸ್ ಠಾಣೆಗಳಿಗೆ ನೀಡಿದ ದೂರಿನ ಗತಿ ಏನಾಗಿರುತ್ತದೆ ಎಂದು ಊಹಿಸುವುದು ಕಷ್ಟವೇನಲ್ಲ. ಮುನಿರಾಜು ಎಂಬ ಕ್ರಿಮಿನಲ್ ಕ್ರಿಮಿ ವಿಧಾನಸೌಧ ಹೊಕ್ಕಿದ್ದರ ಫಲಿತಾಂಶವಿದು.

ಸದ್ಯ ಮಲ್ಲಮ್ಮನ ಕುಟುಂಬಕ್ಕೆ ಕುಡಿಯುವ ನೀರು ಮತ್ತು ಇತರ ಸೌಲಭ್ಯಗಳು ಸಿಗದಂತೆ ಮಾಡುತ್ತಿರುವ ಕ್ರೂರಿ ಶಾಸಕನಿಂದ ಈ ಬಡ ಕುಟುಂಬವನ್ನು ರಕ್ಷಿಸುವವರ್ಯಾರು?

ಮಲ್ಲಮ್ಮನಿಗೆ ಕೂಡಲೇ ಆರ್‌ಟಿಸಿ ದೊರೆಯುವಂತೆ ಮಾಡಿ, ತಪ್ಪಿತಸ್ಥ ಅಧಿಕಾರಿಗಳನ್ನು ಲೋಕಾಯುಕ್ತರು ಶಿಕ್ಷಿಸಬೇಕಿದೆ.

● ಪಿ.ಕೆ.ಮಲ್ಲನಗೌಡರ್

ಜನ್ ನೆಲಗಳ್ಳ ಶಾಸಕರು

ಜ್ಯದ ವಿಧಾನಸಭೆಯಲ್ಲಿ ಬೆಂಗಳೂರು ಒಂದರಿಂದಲೇ ಒಂದು ಡಜನ್ ರಿಯಲ್ ಎಸ್ಟೇಟ್ ಶಾಸಕರಿದ್ದಾರೆ! ರಾಮನ ಪಕ್ಷದ್ದೇ ಸಿಂಹಪಾಲು!

ಆರ.ಪುರದ ನಂದೀಶ್ ರೆಡ್ಡಿ, ಬೊಮ್ಮನಹಳ್ಳಿಯ ಸತೀಶ್ ರೆಡ್ಡಿ, ಯಲಹಂಕದ ವಿಶ್ವನಾಥ್ ರೆಡ್ಡಿ, ದಾಸರಹಳ್ಳಿಯ ರಾಜು, ರಾಜರಾಜೇಶ್ವರಿ ನಗರದ ಶ್ರೀನಿವಾಸ್, ಹೆಬ್ಬಾಳದ ಕಟ್ಟಾ, ಪದ್ಮನಾಭನಗರದ ಅಶೋಕ್... ಈ ರ ಕಾರಣದಿಂದ ಪೊಲೀಸ್ ಠಾಣೆಗಳು ರಿಯಲ್ ಎಸ್ಟೇಟ್ ಅಡ್ಡೆಗಳಾಗಿ ಹೋಗಿವೆ.

ನರ ಫಲವೇ ಈಗ ದಾಸರಹಳ್ಳಿಯ ಮಲ್ಲಮ್ಮ ಒಂದು ಕಡೆ ರೌಡಿಗಳಿಂದ, ಇನ್ನೊಂದು ಕಡೆ ಪೊಲೀಸರಿಂದ ಯ ಎದುರಿಸುವಂತಾಗಿದೆ.

ಕ್ರಿಕೆಟ್: ಕಾಂಬ್ಳಿ ಬ್ರಾಹ್ಮಣನಾಗಿರಬೇಕಿತ್ತು!

ಭಾರತೀಯ ಸಮಾಜದಲ್ಲಿ ಜಾತಿ ಒಂದು

ರಾಮಮನೋಹರ ಲೋಹಿಯಾ


ನ್ನ ಜಾತಿ ಮತ್ತು ಬಣ್ಣದ ಕಾರಣದಿಂದಾಗಿ ಕ್ರಿಕೆಟ್ ಮಂಡಳಿಯಿಂದ ತಾರತಮ್ಯಕ್ಕೊಳಗಾದೆ". ಮಾಜಿ ಕ್ರಿಕೆಟರ್ ವಿನೋದ್ ಕಾಂಬ್ಳಿ ರಿಯಾಲಿಟಿ ಒಂದರಲ್ಲಿ ಸತ್ಯ ಹೇಳುವ ಮೂಲಕ ಕ್ರಿಕೆಟ್ ರುವ ಬ್ರಾಹ್ಮಣ್ಯರ ಹಿಡಿತವನ್ನು ಎತ್ತಿ ಿದ್ದಾರೆ.

ದು ಇವತ್ತಿನ ಮಾತಲ್ಲ; ಸ್ವಾತಂತ್ರ್ಯ ಪೂರ್ವ ೂ ನಡೆದೇ ಇದೆ. ದಲಿತರು, ಕೆಳವರ್ಗದವರು ನ್ಯಾಯ ಅನುಭವಿಸುತ್ತಲೇ ಬಂದಿದ್ದಾರೆ.

ದಶಕದಲ್ಲಿ ಭಾರತವನ್ನು ಪ್ರತಿನಿಧಿಸಿದ ಕ್ರಿಕೆಟ್ ನ್ನು ಗಮನಿಸಿ: 16 ಜನರ ಟೀಮಿನಲ್ಲಿ ಕನಿಷ್ಠ ದ ಹನ್ನೆರಡು ಜನ ಬ್ರಾಹ್ಮಣರು, ಒಬ್ಬರೋ ಸಿಖ್ಖರು, ಒಬ್ಬರೋ ಇಬ್ಬರು ಮುಸ್ಲಿಂ ಮತ್ತು ು ಇತರ ಜಾತಿಗೆ ಸೇರಿದವರು. ದಲಿತ ಸೇರಿದ ಕೆಳಜಾತಿಯಿಂದ ಬಂದ ಸ್ಲಂ ಹುಡುಗ ್ ಕಾಂಬ್ಳಿ ಕೆಲಕಾಲ ಫಾರ್ಮ್ ಕಳೆದುಕೊಂಡ [illegible] ಜೀವನವನ್ನೇ ಮುಗಿಸಿಹಾಕಿಬಿ [illegible]



[illegible] ಅಲ್ಪಾವಧಿಗೆ ಫಾರ್ಮ್ ಳ್ಳುವುದು ಎಲ್ಲ ಆಟಗಾರರ ಲ್ಲಿ ಸಂಭವಿಸುವಂತದ್ದೇ. ಲ್ಲಿ ತನ್ನ 17ನೆಯ ಮತ್ತು [illegible] ಬ್ಯಾಟಿಂಗ್ ಸರಾಸರಿ 54.20. ಬಹುತೇಕ ಆಟಗಾರರ ಸರಾಸರಿ 45ರಿಂದ 58 ಎಂಬುದನ್ನು ಗಮನಿಸಿ, ತಗೆದುಕೊಂಡಾಗ,



ಕಾಂಬ್ಳಿ ನಿರ್ನಾಮಕ್ಕೆ ವ್ಯವಸ್ಥಿತವಾದ ಆದರೆ ಅಗೋಚರವಾದ ಪ್ರಯತ್ನಗಳು ನಡೆದಿರುವುದು ಅರ್ಥವಾಗುತ್ತದೆ. ಅದಿರಲಿ, ಕಾಂಬ್ಳಿ ಹೇಳಿದ ಇನ್ನೊಂದು ಮಾತೂ ಗಂಭೀರವಾದದ್ದೇ. "ಸದ್ಯ ನನ್ನನ್ನು ಮಿತ್ರನೆಂದು ಹೇಳಿಕೊಳ್ಳುವಲ್ಲಿ ಸಚಿನ್‌ಗೆ ಮುಜುಗರವಿದ್ದಂತೆ ಕಾಣುತ್ತಿದೆ...." ಸ್ಕೂಲ್‌ನಲ್ಲಿದ್ದಾಗ ಸಚಿನ್ ಮತ್ತು ಕಾಂಬ್ಳಿ 664 ರನ್‌ಗಳ ಜೊತೆಯಾಟದ ದಾಖಲೆ ಮೂಲಕ ಮುನ್ನೆಲೆಗೆ ಬಂದವರು. ಸಚಿನ್‌ನಷ್ಟೇ ಪ್ರತಿಭಾವಂತನಾಗಿದ್ದ ಕಾಂಬ್ಳಿಗೆ ಕೆಳಮಟ್ಟದಿಂದ ರಾಷ್ಟ್ರೀಯಮಟ್ಟದವರೆಗೆ ಎಡರುತೊಡರುಗಳೇ ಎದುರಾದವು. ಕಾರಣ : ಜಾತಿ.....

ನಮ್ಮದೇ ರಾಜ್ಯದ ದೊಡ್ಡ ಗಣೇಶ್, ಡೇವಿಡ್ ಜಾನ್ಸನ್‌ರನ್ನು ರಾಷ್ಟ್ರೀಯ ತಂಡದಲ್ಲಿ ಕೇವಲ ಒಂದೇ ಸರಣಿಯಲ್ಲಿ ಆಡಿಸಿ, ಎರಡನೇ ಅವಕಾಶ ಕೊಡದೇ ನಾಶ ಮಾಡಿದ್ದು ನಮ್ಮ ಕಣ್ಣೆದುರೇ ಇದೆ.

ಅದೇ ಬೆವರು ಸುರಿಸುವ, ದೈಹಿಕ ಸಾಮರ್ಥ್ಯ ಅಗತ್ಯವಿರುವ ಹಾಕಿ, ಫುಟ್‌ಬಾಲ್, ಅಥ್ಲೆಟಿಕ್ಸ್, ಕುಸ್ತಿ, ಕಬಡ್ಡಿಗಳಲ್ಲಿ ಈ ಬ್ರಾಹ್ಮಣ ಆಟಗಾರರು ಜೀರೋ. ಅಲ್ಲಿ ಗಾಡ್‌ಫಾದರ್‌ಗಳಿಲ್ಲದೇ ತಮ್ಮ ಕೌಶಲ್ಯ ಹಾಗೂ ಶಕ್ತಿಗಳಿಂದ ಛಾಪು ಮೂಡಿಸುತ್ತಿರುವವರು ಮಾಂಸಾಹಾರಿಗಳಾದ ದಲಿತರು, ಆದಿವಾಸಿಗಳು ಮತ್ತು ಇತರ ಕೆಳಜಾತಿಯವರು. ಆದರೆ ಕ್ರಿಕೆಟಿಗರಿಗೆ ಸಿಕ್ಕ ಮನ್ನಣೆ ಇವರಿಗಿಲ್ಲವೇ ಇಲ್ಲ. ಹಾಗೂ ಹೀಗೂ ಕಷ್ಟಪಟ್ಟು ರಾಷ್ಟ್ರೀಯ ಕ್ರಿಕೆಟ್ ತಂಡ ಪ್ರತಿನಿಧಿಸಿದ ಪ್ರತಿಭಾವಂತ ದಲಿತರು, ಕೆಳವರ್ಗದವರನ್ನು ಆರಂಭದಲ್ಲೇ 'ಔಟ್' ಮಾಡುತ್ತಾ ಬರಲಾಗಿದೆ. ಬಲವಂತ್ ಪಾಲೂ, ಏಕನಾಥ್ ಸೋಲ್ಕರ್, ವಿನೋದ್ ಕಾಂಬ್ಳಿ.... ಮುಂದೆ ಯಾರೋ?

ಬಳಸಿ ಬಿಸಾಡುವ ಮಡಕೆಗಳು


ಸ್ವಾತಂತ್ರ್ಯಪೂರ್ವದಲ್ಲಂತೂ ಅಸ್ಪೃಶ್ಯರು ಕ್ರಿಕೆಟ್ ಆಡುವುದೇ ಪಾಪವಾಗಿತ್ತು. ಆದರೂ ತಮ್ಮ ಅತ್ಯದ್ಭುತ ಪ್ರತಿಭೆಯಿಂದಾಗಿ ಧಾರವಾಡ ಮೂಲದ, ಪೂನಾವಾಸಿಗಳಾದ ಪಾಲ್ವನ್‌ಕರ್ ಕುಟುಂಬದ ಶಿವರಾಮ್, ಗಣಪತ್, ವಿಠ್ಠಲ್ ಮತ್ತು ಬಾಲೂಗಳು ಆಗಿನ ರಾಷ್ಟ್ರೀಯ ತಂಡವಾದ ಜಿಮಖಾನಾ ತಂಡ ಪ್ರವೇಶಿಸಿದರು. 1911ರ ಇಂಗ್ಲೆಂಡ್ ಪ್ರವಾಸದಲ್ಲಿ ಇವರೆಲ್ಲ- ಅದರಲ್ಲೂ ಸ್ಪಿನ್ನರ್ ಬಾಲೂ- ಅಮೋಘ ಪ್ರದರ್ಶನ ನೀಡಿದರು. ಆದರೆ ಟೀ ವಿರಾಮದ ವೇಳೆ ಇತರ ಆಟಗಾರರು ಇವರೊಂದಿಗೆ ಬೆರೆಯುತ್ತಿರಲಿಲ್ಲ. ಇವರು ಎಲ್ಲೋ ನಿಂತು ಮಡಕೆಯ ಕಪ್‌ಗಳಲ್ಲಿ ಚಹಾ ಸೇವಿಸಬೇಕಿತ್ತು. ಬಾಲೂ ಪಾಲ್ವನಕರ್ ಬರೀ ಕ್ರಿಕೆಟ್ ಆಟಗಾರನಾಗಿರಲಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಮುಳುಗಿದ ದೇಶಪ್ರೇಮಿಯಾಗಿದ್ದ. ಅಂಬೇಡ್ಕರ್ ಸಹ ಈತನ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಆದರಿವತ್ತು ಬಾಲೂ ಎಂಬ ಹೆಸರು ಬಿಸಿಸಿಐಗೆ ಗೊತ್ತೇ ಇಲ್ಲ. ಆತನ ಹೆಸರಲ್ಲಿ ಒಂದು ಟ್ರೋಫಿ ಕೂಡಾ ಇಲ್ಲ.

ಪ್ರತಿಭೆಯಿದ್ದೂ ಜಾತಿಯ ಕಾರಣಕ್ಕಾಗಿ ಇಂತವರೆಲ್ಲ ಬಳಸಿ ಬಿಸಾಡುವ ಮಡಕೆ ಕಪ್‌ಗಳಂತಾಗಿ ಇತಿಹಾಸದಿಂದ ಅಳಿಸಲ್ಪಟ್ಟಿದ್ದಾರೆ. ಇಲ್ಲಿ ಗವಾಸ್ಕರ್, ಸಚಿನ್, ಶ್ರೀಕಾಂತ್, ರವಿಶಾಸ್ತ್ರಿ ಕುಂಬ್ಳೆ, ಶ್ರೀನಾಥ್, ವೆಂಕಿ-ಪಿಂಕಿಗಳು ಮಾತ್ರ ಸದಾ ಮಿಂಚುತ್ತಿರುತ್ತಾರೆ. ●

ಮುಂ

ಪಾಕ್‌ನಲ್ಲೂ ಜಾತಿಭೂತ





ಪಾಕಿಸ್ತಾನದ ಕ್ರಿಕೆಟ್‌ನಲ್ಲೂ ಈ ಜಾತಿ ಆಚರಣೆ ಇದೆ. ಅಲ್ಲಿ ಪಠಾಣ್ ಮತ್ತು ರಜಪೂತ್‌ಗಳದ್ದೇ ಪ್ರಾಬಲ್ಯ. ಪಾಕಿಸ್ತಾನದ ಮಹಾನ್ ಬ್ಯಾಟ್ಸ್‌ಮನ್ ಮೊಹಮ್ಮದ್ ಯೂಸುಫ್ ನೆನಪಿರಬೇಕಲ್ಲ? ಮೂಲತಃ ಆತನ ಕುಟುಂಬದವರು ಹಿಂದೂ ಧರ್ಮದ ಕೆಳಜಾತಿಗೆ ಸೇರಿದವರು. ಯೂಸುಫ್ ತಾತ ಲಾಹೋರ್ ರೈಲ್ವೇ ಸ್ಟೇಷನ್‌ನಲ್ಲಿ ಶೌಚಾಲಯ ತೊಳೆಯುತ್ತಿದ್ದ. ಮುಂದೆ ಈ ಕುಟುಂಬ ಕ್ರಿಸ್ತ ಧರ್ಮಕ್ಕೆ ಮತಾಂತರಗೊಂಡಿತು.

ನಂತರ ಯೂಸುಫ್ ಇಸ್ಲಾಂ ಸೇರಿದ. ನಾಯಕನಾಗುವಲ್ಲ ಸಾಮರ್ಥ್ಯ ಹೊಂದಿದ್ದರೂ ಯೂಸುಫ್‌ಗೆ ಎಂದೂ ಆ ಭಾಗ್ಯ ಬರಲಿಲ್ಲ. ಕಾರಣ ಮತ್ತದೇ ಜಾತಿ.

ಹೇಳಿಕೇಳಿ ಪಾಕಿಸ್ತಾನವೂ ಈ ನೆಲದಿಂದಲೇ ಬೇರೆಯಾದ ದೇಶವಲ್ಲವೇ?

ಶಿವಮೊಗ್ಗ : ಹರತಾಳು ಹಾಲಪ್ಪ ಗೋಪಾಲಕೃಷ್ಣರ ಮಧ್ಯೆ ನರಿಬುದ್ಧಿಯ ದಿವಾಕರ






ಬಿಜೆಪಿಯ ಶಾಸಕದ್ವಯರ ನಡುವಿನ ಕಚ್ಚಾಟ ಮೊನ್ನೆ ಪರಾಕಾಷ್ಠೆಗೆ ತಲುಪಿದೆ. ಸೊರಬದ ಶಾಸಕ ಹರತಾಳು ಹಾಲಪ್ಪ ಹಾಗೂ ಸಾಗರದ ಶಾಸಕ ಬೇಳೂರು ಗೋಪಾಲ ಕೃಷ್ಣರ ನಡುವೆ ಕಳೆದ ಹಲವಾರು ತಿಂಗಳಿಂದ ಆಗಾಗ ಕಾಣಿಸಿಕೊಳ್ಳುತ್ತಲೇ ಇದ್ದ ಅಸಮಾಧಾನ ಇದೀಗ ಬೀದಿ ಜಗಳ ವಾಗಿದೆ. ಜುಲೈ ಹನ್ನೊಂದರ ಮಧ್ಯಾಹ್ನ 12 ಗಂಟೆಗೆ ಸಾಗರದ ತಾಲ್ಲೂಕು ಪಂಚಾಯ್ತಿ ಕಚೇರಿಯಲ್ಲಿ ಸಚಿವ ಹಾಲಪ್ಪ ಮತ್ತು ವಿಧಾನ ಪರಿಷತ್ ಸದಸ್ಯೆ ಭಾರತಿ ಶೆಟ್ಟಿ ಗೋಪಾಲಕೃಷ್ಣರನ್ನೇ ಬಿಟ್ಟು ಬರ ಪರಿಶೀಲನಾ ಸಭೆ ಆರಂಭಿಸುತ್ತಿದ್ದಂತೇ, ಗೋಪಾಲಕೃಷ್ಣನ ಬೆಂಬಲಿಗರು ಗಲಾಟೆ ಎಬ್ಬಿಸಿದ್ದಾರೆ. "ನಂ ಸಾಹೇಬ್ರಿಗೆ ಒಂದು ಮಾತೂ ಕರೀದೇ ನೀವು ಅದ್ಹೆಂಗೆ ಇಲ್ಲಿ ಮೀಟಿಂಗ್ ಮಾಡ್ತೀರಾ?" ಎಂದು ಗೋಪಾಲಕೃಷ್ಣನ ಬಂಟರು ನುಗ್ಗುತ್ತಿದ್ದಂತೆಯೇ ಗೋಪಾಲಕೃಷ್ಣನೂ ಅಲ್ಲಿಗೆ ಧಾವಿಸಿದ್ದಾನೆ. ಇನ್ನೇನು ಹಾಲಪ್ಪನ ಮೈಮೇಲೆ ಬದ್ದೇ ಬಿಡುತ್ತಾನೆನ್ನುವ ರೀತಿ ಟೇಬಲ್ ಮೇಲೆ ಗುದ್ದಿ ಹಾಲಪ್ಪನಿಗೆ ಆವಾಜ್ ಹಾಕಲು ಶುರು ಮಾಡಿದ್ದಾನೆ. "ಏಯ್, ಹಾಲಪ್ಪಾ ಏನೋ ನನ್ನತ್ರಾನೇ ದೌಲತ್ ತೋರಿಸ್ತೀಯಾ. ತಾಕತ್ತಿದ್ರೆ ರಾಜೀನಾಮೆ ಕೊಡು. ನಾನೂ ಕೊಡ್ತೀನಿ. ಇಬ್ರೂ ಎಲೆಕ್ಷನ್‌ಗೆ ನಿಲ್ಲೋಣ. ನಿಂಗೆ ತಾಕತ್ತಿದ್ರೆ ಗೆದ್ದು ಬಾ. ಈ ಥರ ಹಿಂದುಗಡೆ ವ್ಯವಹಾರ ಯಾಕೆ ಮಾಡ್ತೀಯಾ? ನೀನೇನ್ ನಾನು ನೋಡ್ದೇ ಇರೋ ಮುಖ್ಯಮಂತ್ರಿಯನ್ನ ನೀನು ನೋಡಿರೋ ಥರ ಆಡ್ತೀಯಲ್ಲೋ. ನನ್ ಪರ್ಮಿಶನ್ ಇಲ್ದೆ ನನ್ನ ಕ್ಷೇತ್ರದಲ್ಲಿ ಯಾವ ಮಂತ್ರಿನೂ ಕಾಲಿಡುವಂತಿಲ್ಲ, ಅಂತಾದ್ರಲ್ಲಿ ನೀನು ಬಂದು ಕೈಯಾಡಿಸೋಕೆ ಯಾವ ಹಕ್ಕಿದೆ....? ಹೀಗೆ ಎರ್‍ರಾಬಿರ್‍ರಿ ಬಾರಿಸಿದ ಹೊಡೆತಕ್ಕೆ ಥಂಡಾ ಹೊಡೆದ ಸಚಿವ ಹಾಲಪ್ಪ ಮಾತಾಡಿದ್ರೆ ಕೆಲಸ ಕೆಡುವ ಸೂಚನೆ ಕಂಡು ತನ್ನ ಬಂಟ ಜಿಲ್ಲಾ ಪಂಚಾಯತ್ ಸದಸ್ಯ ರವಿಕುಗ್ವೆಗೂ ಸನ್ನೆ ಮಾಡಿ ಸುಮ್ಮನೇ ನಿಂತುಬಿಟ್ಟಿದ್ದ. ಮಧ್ಯೆ ಭಾರತಿ ಶೆಟ್ಟಿ ಬಾಯಿ ಹಾಕುತ್ತಿದ್ದಂತೆ ಗೋಪಾಲಕೃಷ್ಣನ ಹುಡುಗರು ಧಿಕ್ಕಾರ ಕೂಗಿದ್ದು ನೋಡಿ ಆಕೆ ಬುಳುಬುಳು ಕಣ್ಣೀರಿಟ್ಟಿದ್ದಾಳೆ.

ಇದಕ್ಕೆಲ್ಲಾ ಇರುವ ಕಾರಣವೆಂದರೆ, ಅದು ಸಾಗರ ಕ್ಷೇತ್ರದ ರಾಜಕೀಯದಲ್ಲಿ ಹಾಲಪ್ಪ ಮೂಗು ತೂರಿಸಲು ಪ್ರಯತ್ನಿಸುತ್ತಿರುವುದು. ಇದಕ್ಕಾಗಿ ಹಾಲಪ್ಪ ಯಡ್ಡಿಗೆ ಬಕೆಟ್ ಹಿಡಿದು, ತೆರೆಮರೆಯಲ್ಲಿ ಬೆಂಬಲ ಪಡೆಯುತ್ತಿರುವುದು. ಇದು ಬೇಳೂರು ಗೋಪಾಲಕೃಷ್ಣನಿಗೆ ಉರಿ ತರಿಸಿದೆ. ಕಳೆದ ಚುನಾವಣೆಯ ಸಂದರ್ಭದಲ್ಲಿ ಈ ಶಾಸಕರಿಬ್ಬರ ಮುಸುಕಿನ ಗುದ್ದಾಟ ಬಯಲಾಗಿತ್ತು. ಯಡ್ಡಿ ಹಾಜರಾಗಬೇಕಿದ್ದ ಒಂದು ಪ್ರಚಾರ ಸಭೆಗೆ ತನ್ನ ನೂರಾರು ಬಂಟರನ್ನು ಛೂಬಿಟ್ಟಿದ್ದ ಗೋಪಾಲಕೃಷ್ಣ ವೇದಿಕೆಗೆ ನುಗ್ಗಿ ಹಾಲಪ್ಪನಿಗೆ ಧಿಕ್ಕಾರ, ಯಡ್ಡಿಗೆ ಜೈಕಾರ ಕೂಗಿಸಿದ. ಇವರ ಜಗಳದಲ್ಲಿ ಎಲ್ಲಿ ತನ್ನ ಮಗ ರಾಘವೇಂದ್ರ ಸೋತು, ಬಂಗಾರಪ್ಪ ಗೆದ್ದು ಬಿಡುತ್ತಾನೋ ಎಂಬ ಭಯದಿಂದ ಯಡ್ಡಿ ಗೋಪಾಲಕೃಷ್ಣನನ್ನು ಸಮಾಧಾನಪಡಿಸಿದ್ದ.

ಮೊನ್ನೆ ನಡೆದ ಚುನಾವಣೆಯಲ್ಲಿ ಸೊರಬ ಕ್ಷೇತ್ರದ ಹಲವಾರು ಹಳ್ಳಿಗಳಲ್ಲಿ ಜನರು ಹಾಲಪ್ಪನಿಗೆ ಎಂಟ್ರಿಯನ್ನೇ ಕೊಟ್ಟಿರಲಿಲ್ಲ. ಹಿಂದಿನ ಎಂಎಲ್‌ಎ ಚುನಾವಣೆಯಲ್ಲಿ ಸೊರಬದಲ್ಲಿ ಜಟಾಪಟಿಗೆ ಬಿದ್ದಿದ್ದ ಬಂ ಮಕ್ಕಳು ಮಧು ಮತ್ತು ಕುಮಾರರ ನಡುವಿನ ಕಚ್ಚಾಟವೇ ಹಾಲಪ್ಪನಿಗೆ ವರದಾನ ವಾಗಿ ಆರಿಸಿಬಂದಿದ್ದ. ಆದರೆ ಮುಂದಿನ ಚುನಾವಣೆಯಲ್ಲೂ ಹಾಗೇ ಆಗುವ ಲಕ್ಷಣಗಳಿಲ್ಲ. ಇತ್ತ ತನ್ನ ಮೂಲಕ್ಷೇತ್ರ ಹೊಸನಗರ ಈಗ ಅಸ್ತಿತ್ವದಲ್ಲಿ ಇಲ್ಲ. ಕ್ಷೇತ್ರ ಪುನರ್ ವಿಂಗಡಣೆಯ ನಂತರ ಹೊಸನಗರವು, ತೀರ್ಥಹಳ್ಳಿ, ಶಿವಮೊಗ್ಗ ಸಾಗರಗಳಿಗೆ ಹರಿದು ಹಂಚಿದೆ. ಹಾಗಾಗಿ ಹೇಗಾದರೂ ಮಾಡಿ ಗೋಪಾಲಕೃಷ್ಣನನ್ನು ಸೈಡ್‌ಲೈನ್ ಮಾಡಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲಿಕ್ಕಾಗಿ ಏನು ಬೇಕೋ ಎಲ್ಲಾ ಮಾಡುತ್ತಿದ್ದಾನೆ ಈ ಹಾಲಪ್ಪ.



ಇತ್ತೀಚೆಗೆ ಯಡ್ಡಿಯ ವಿರುದ್ಧ ಈಶ್ವರಪ್ಪ ಮತ್ತು ಗಣಿ ರೆಡ್ಡಿಗಳು ಬಂಡಾಯ ಎದ್ದಾಗ ಸಣ್ಣಗೆ ರಾಗ ಹೊರಡಿಸಿದ್ದ. ಈ ಶಾಸಕ ಗೋಪಾಲಕೃಷ್ಣನಿಗೆ ತನ್ನನ್ನು ಎಂದಿದ್ದರೂ ಯಡ್ಡಿ ಎತ್ತಿ ಒಗೆಯುವ ಸೂಚನೆ ಸಿಕ್ಕಿರುವುದ ರಿಂದ, ಅದಕ್ಕೆ ಕಾರಣನಾದ ಹಾಲಪ್ಪನನ್ನು ಮೊನ್ನೆ ಅಟಕಾಯಿಸಿಕೊಂಡಿದ್ದಾನೆ.

ಎಲ್ಲೂ ಇಲ್ಲದ ಹಾಲಪ್ಪ

ಹಾಲಪ್ಪನಿಗೆ ಮುಂದಿನ ಚುನಾವಣೆಯ ಹೊತ್ತಿಗೆ ಸಾಗರ ಕ್ಷೇತ್ರಕ್ಕೆ ಕಾಲಿಡುವುದು ಅನಿವಾರ್ಯವಾಗಿಬಿಟ್ಟಿದೆ.

ನರಿಬುದ್ಧಿಯ ದಿವಾಕರ


ಈಡಿಗ ಜಾತಿಯ ಈ ಇಬ್ಬರು ಶಾಸಕರ ನಡುವೆ ನಿಜಕ್ಕೂ ಕಡ್ಡಿ ಆಡಿಸುತ್ತಾ ತನ್ನ ಬೇಳೆ ಬೇಯಿಸಿಕೊಳ್ಳುತ್ತಿರುವುದು ಯಡ್ಡಿಯ ಕಾನೂನು ಸಲಹೆಗಾರನಾಗಿರುವ ಕೆ. ದಿವಕಾರನೆಂಬ ನರಿಬುದ್ದಿಯ ಮನುಷ್ಯ. ಕ್ಷೇತ್ರ ಪುನರ್ ವಿಂಗಡಣೆಯ ಪರಿಣಾಮವಾಗಿ ಸಾಗರ ಕ್ಷೇತ್ರದಲ್ಲಿ ಈ ಹಿಂದೆ ಪ್ರಾಬಲ್ಯತೆ ಹೊಂದಿದ್ದ ಈಡಿಗರಷ್ಟೇ ಲಿಂಗಾಯತ, ಬ್ರಾಹ್ಮಣ ಮತಗಳೂ ಇವೆ. ಲಿಂಗಾಯತರು ಮತ್ತು ಬ್ರಾಹ್ಮಣರು ಹೇಗಾದರೂ ಮಾಡಿ ಈಡಿಗರೇ ಎಮ್ಮೆಲ್ಲೆ ಯಾಗುವುದನ್ನು ತಪ್ಪಿಸುವ ಸಂಚುಗಳನ್ನು ನಡೆಸುತ್ತಲೇ ಇದ್ದಾರೆ. ಇದಕ್ಕಾಗಿಯೇ ಈ ಹಾಲಪ್ಪ ಗೋಪಾಲಕೃಷ್ಣರ ನಡುವೆ ಹುಳಿ ಹಿಂಡುವ ಎಲ್ಲಾ ಕೆಲಸವನ್ನು ಹವ್ಯಕ ದಿವಾಕರ ಮಾಡುತ್ತಲೇ ಬಂದಿದ್ದಾನೆ. ಇಬ್ಬರ ಜಗಳದಲ್ಲಿ ಲಾಭ ಪಡೆದು ಬರುವ ಚುನಾವಣೆಯಲ್ಲಿ ಸಾಗರದಿಂದ ತಾನೇ ಚುನಾವಣೆಗೆ ನಿಲ್ಲುವುದೆಂತಲೂ ಈ ದಿವಾಕರ ನಿರ್ಧರಿಸಿಯಾಗಿದೆ. ಸದ್ಯ ಯಡ್ಡಿಯ ಕೃಪಾಕಟಾಕ್ಷ ಹಾಲಪ್ಪನ ಮೇಲೇ ಬೀಳುವುದರಲ್ಲೂ ಈ ದಿವಾಕರನ ಪಾತ್ರ ಸಾಕಷ್ಟಿದೆ. ಗೋಪಾಲಕೃಷ್ಣನನ್ನು ನೆಲಕ್ಕೆ ಬೀಳಿಸಿದ ಮೇಲೆ ಹಾಲಪ್ಪನನ್ನು ಕೆಡವಲು ಬಹಳ ಹೊತ್ತು ಬೇಕಾಗುವುದಿಲ್ಲ ಎನ್ನುವುದು ದಿವಾಕರನ ಲೆಕ್ಕಾಚಾರ.

ಗೋಪಾಲಕೃಷ್ಣ 'ಕೈ' ಹಿಡಿದರೆ?!

ತನ್ನ ಸ್ವಾರ್ಥಕ್ಕಾಗಿ ಬಂಗಾರಿಯ ಕೈಹಿಡಿದು ಮಾವ ಕಾಗೋಡು ತಿಮ್ಮಪ್ಪನನ್ನೇ ತುಳಿದಿದ್ದ ಬೇಳೂರು ಗೋಪಾಲಕೃಷ್ಣನ ಭವಿಷ್ಯ ಈಗ ನಿಂತಿರುವುದೂ ಕಾಗೋಡು ತಿಮ್ಮಪ್ಪನ ಮೇಲೆಯೇ ಎನ್ನುವುದು ವಿಚಿತ್ರವಾದರೂ ಸತ್ಯ. ತನ್ನ ಮಗನ ಗೆಲುವಿಗಾಗಿ ಗೋಪಾಲಕೃಷ್ಣನನ್ನು ಸಹಿಸಿಕೊಂಡಿದ್ದ ಯಡ್ಡಿಯ ಪಾಲಿಗೆ ಈಗ ಅವನು ಕಾಲಕಸ. ಆದರೆ ಯಡ್ಡಿ ತಾನಾಗಿಯೇ ಗೋಪಾಲಕೃಷ್ಣನನ್ನು ಓಡಿಸದೇ ಅವನಾಗಿಯೇ ಓಡಿಹೋಗಲು ಎಲ್ಲವನ್ನೂ ಮಾಡುತ್ತಿದ್ದಾನೆ. ಹಾಲಪ್ಪ ದಿವಾಕರರೂ ಯಡ್ಡಿಯ ಕಿವಿಯ ಬುಡದಲ್ಲೇ ಇದ್ದಾರೆ. ಜಾತಿ ಮತದಾರರನ್ನು ಚೆನ್ನಾಗಿಯೇ ಇಟ್ಟುಕೊಂಡಿರುವ ಗೋಪಾಲಕೃಷ್ಣ ಮುಂದಿನ ಚುನಾವಣೆ ಯಲ್ಲಿ ತನ್ನ ಮಾವನ ಕೈಹಿಡಿದರೂ ಆಶ್ಚರ್ಯವಿಲ್ಲ. ರಾಜಕೀಯದಲ್ಲಿ ಇವೆಲ್ಲಾ ಮಾಮೂಲಲ್ಲವೇ? ಹೇಗೂ ತನಗೂ ವಯಸ್ಸಾಯಿತೆಂದುಕೊಂಡು ಕಾಗೋಡು ತಿಮ್ಮಪ್ಪನೇನಾದರೂ ಅಳಿಯನಿಗೆ ಅಭಯಹಸ್ತ ನೀಡಿದರೆ, ಅಡ್ಡಗಾಲಾಕಲು ಸದ್ಯಕ್ಕಂತೂ ಸಾಗರ ಕಾಂಗ್ರೆಸ್‌ನಲ್ಲಿ ಯಾರೂ ಇಲ್ಲ.

● ವರದಿಗಾರ

ಬಾಗಲಕೋಟೆ: ಸ್ತ್ರೀಪೀಡಕನ ಕೈಯಲ್ಲಿ 'ಮಹಿಳಾ ಕಲ್ಯಾಣ'



ಈತನ ಹೆಸರು ಎಚ್.ಎಸ್. ಪಾಟೀಲ್. ಬಾಗಲಕೋಟೆ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಈತ ಉಪನಿರ್ದೇಶಕ. ಈತ ಹೋದಲೆಲ್ಲ ಅಂಗನವಾಡಿ ಕಾರ್ಯಕರ್ತೆಯರ ಜತೆ ಚೆಲ್ಲಾಟವಾಡಲು ಹೋಗಿ ಒದೆ ತಿನ್ನುತ್ತಾನೆ. ಈತ ಬರೀ ಸ್ತ್ರೀಪೀಡಕನಷ್ಟೇ ಅಲ್ಲ, ಮಹಿಳೆ ಮತ್ತು ಮಕ್ಕಳ ಕಲ್ಯಾಣವೆಂದರೆ ತನ್ನ ಕಲ್ಯಾಣ ಎಂದು ಬಗೆದು ಇಲಾಖೆಯ ತಿಜೋರಿಗೆ ತೂತು ಕೊರೆಯುವಾತ.

ಇತ್ತೀಚೆಗಷ್ಟೇ ಈ ಭೂಪ 'ಮಹಿಳಾ ಮತ್ತು ಮಕ್ಕಳ ಕಲ್ಯಾಣ'ವೆಂದರೇನು? ಎನ್ನುವುದನ್ನು ಪ್ರಾಕ್ಟಿಕಲ್ಲಾಗಿ ತೋರಿಸಿದ. ಬೆಳಗಾವಿಯಲ್ಲಿ ಅದ್ದೂರಿಯಾಗಿ ಮಗಳ ಕಲ್ಯಾಣ ನಡೆಸಿದ, ಇಲಾಖೆಯ ಎಲ್ಲ ಅಧಿಕಾರಿಗಳಿಂದ ಇಂತಿಂಥ ಗಿಫ್ಟು ಬೇಕೆಂದು ಅಲಿಖಿತ ಆದೇಶವನ್ನೇ ಹೊರಡಿಸಿದ್ದ. ಇವನ ಹಣದಾಹ ಎಷ್ಟಿದೆಯೆಂದರೆ ಮಗಳ ಮದುವೆಗೆ ಅಂಗನವಾಡಿ ಕಾರ್ಯಕರ್ತೆಯರಿಂದಲೂ ಕಾಸು ಕಲೆಕ್ಟ್ ಮಾಡಿದ. ಅಡುಗೆ ತಯಾರಿಸುವ ನಾನಿ ಗಳಿಂದಲೂ ಸಿಕ್ಕಷ್ಟು ಸಿಗಲಿ ಎಂದು ವಸೂಲಿ ಮಾಡಿದ.

ಈ ಹಿಂದೆ 2006ರಲ್ಲಿ ಈ ಪಾಟೀಲನ ಕುರಿತು 'ಲಂಕೇಶ್' ಬರೆದಿತ್ತು, ಆಗ ಒಂದಿಷ್ಟು ದಿನ 'ಓಂ ಶಾಂತಿ' ಎಂದು ಮೌನಕ್ಕೆ ಜಾರಿದ್ದವ ಮತ್ತೆ ಅದೇ ಕೆಲಸ ಶುರುಹಚ್ಚಿಕೊಂಡ. ಮುಂದೆ ಬಾಗಲಕೋಟೆಯಿಂದ ಕಾರವಾರಕ್ಕೆ ಹಾರಿದ. ಅಲ್ಲಿ ಅಂಗನವಾಡಿ ಕಾರ್ಯಕರ್ತೆಯರೊಂದಿಗೆ ಅಸಭ್ಯವಾಗಿ ವರ್ತಿಸಿ ಒದೆತಿಂದ. ನಂತರ ಶ್ರೀರಾಮುಲುನ ಚೇಲಾ ಅರವಿಂದ ಎಂಬುವವನಿಗೆ 15 ಲಕ್ಷ ಕೊಟ್ಟು ಗದುಗಿಗೆ ವರ್ಗಾಯಿಸಿದ. ಅಲ್ಲಿ ಬುದ್ಧಿಮಾಂದ್ಯ ಮಕ್ಕಳು, ಹಿರಿಯ ನಾಗರಿಕರ ಹೆಸರಿನಲ್ಲಿ ಎನ್‌ಜಿಒಗಳೊಂದಿಗೆ ಶಾಮೀಲಾಗಿ ಇಲಾಖೆ ದುಡ್ಡನ್ನು ಮುಂದಿನ ಬಾಗಿಲಿನಲ್ಲಿ ಬೇಕಾಬಿಟ್ಟಿಯಾಗಿ ಹಂಚಿ, ಸಂಜೆ ಹೊತ್ತು ಹಿತ್ತಲಿನಲ್ಲಿ ಕಮಿಷನ್ ಎಣಿಸಿಕೊಳ್ಳುತ್ತಾ ಬಂದ. ಕಚೇರಿಯಲ್ಲಿರುವ ಮಹಿಳಾ ನೌಕರರೊಂದಿಗೆ ಲೂಸ್ ಲೂಸ್ ಆಗಿ ವರ್ತಿಸಿದ. ಮತ್ತಲ್ಲೂ ಚಟಾರ್ ಎಂದು ಏಟು ಬಿದ್ದೊಡನೆ ಅರವಿಂದ ಲಿಂಬಾವಳಿಗೆ ಬೆಣ್ಣೆ ಸವರಿ ಬಾಗಲಕೋಟೆಗೆ ಪುನಃ ಬಂದ. ಕಳೆದೊಂದು ವರ್ಷದಿಂದ ಇಲಾಖೆಯ ಹುಲ್ಲುಗಾವಲಿನಲ್ಲಿ ಸೇಫಾಗಿ ಮೇಯುತ್ತಿದ್ದಾನೆ. ಒಂದಿಷ್ಟು ಆಯಾಸವಾದಾಗ ಮಲಗುತ್ತಿದ್ದಾನೆ. ಲಿಂಬಾವಳಿಯ ಅಭಯಹಸ್ತ ಇರುವುದರಿಂದ, ಹಿರಿಯ ಅಧಿಕಾರಿಗಳ ಭಯವೂ ಇಲ್ಲ ಈ ಭ್ರಷ್ಟನಿಗೆ.

ಅಂದಂತೆ, ಪಾಟೀಲ್ ಪದೇ ಪದೇ ಬಾಗಲಕೋಟೆಗೆ ವರ್ಗಾ ಮಾಡಿಸಿಕೊಳ್ಳಲು ಕಾರಣವಿದೆ. ಕದ್ದ ದುಡ್ಡನ್ನೆಲ್ಲ ಸುರಿದು ಬಾಗಲಕೋಟೆಯಲ್ಲಿ ಆಸ್ತಿಗಳನ್ನು ಮಾಡಿಕೊಂಡಿದ್ದಾನೆ. ನವನಗರದ ಸೆಕ್ಟರ್ ನಂಬರ್ ಅರವತ್ನಾಲ್ಕರಲ್ಲಿ ಎರಡೂವರೆ ಕೋಟಿಯ ಎರಡು ಭವ್ಯ ಬಂಗಲೆಗಳಿವೆ. ಅಲ್ಲೇ ಒಂದು ನರ್ಸರಿ ಸ್ಕೂಲ್ ನಡೆಸುತ್ತಾನೆ. ವಿದ್ಯಾಗಿರಿಯಲ್ಲಿ ವರ್ಕಿಂಗ್ ವುಮೆನ್ ಹಾಸ್ಟೆಲ್ ತೆರೆದಿದ್ದಾನೆ. ಇವೆಲ್ಲವೂ ಹೆಂಡತಿಯ ಹೆಸರಿನಲ್ಲಿವೆ.


ಅಳಿಯ ಗಿರೀಶ್ ಪಾಟೀಲನ ಹೆಸರಲ್ಲಿ ಇಂಡಿಯನ್ ಗ್ಯಾಸ್ ಏಜೆನ್ಸಿ ಪಡೆದಿದ್ದಾನೆ. ವಾಸ್ತವವಾಗಿ ಈ ಏಜೆನ್ಸಿ ಬಾಗಲಕೋಟೆ ಸಿಟಿಯೊಳಗಿರಬೇಕಿತ್ತು, ಆದರೆ ನವನಗರದ ಸರ್ಕಾರಿ ಆಸ್ಪತ್ರೆ ಎದುರು ಅಂಗಡಿ ತೆರೆದು ಕುಳಿತಿದ್ದಾನೆ.

ಜಿಲ್ಲೆಯ ಆರು ತಾಲ್ಲೂಕು ಸಿಡಿಪಿಒಗಳಿಗೆ ಮಂಕ್ಕಿ ನೀಡಿ ನೀಡಿ ಸಾಕಾಗಿ ಹೋಗಿದೆ. ಸಾಕಷ್ಟು ಬೇನಾಮಿ ಎನ್‌ಜಿಒಗಳನ್ನು ಹುಟ್ಟು ಹಾಕಿರುವ ಪಾಟೀಲ್, ತನ್ನ ಎನ್‌ಜಿಒಗಳಿಗೇ ಆಹಾರ ಸರಬರಾಜು ಗುತ್ತಿಗೆ ನೀಡಬೇಕೆಂದು ತಾಲ್ಲೂಕು ಅಧಿಕಾರಿಗಳಿಗೆ ಫರ್ಮಾನು ಹೊರಡಿಸಿದ್ದಾನೆ. ಇಂತಹ ಎನ್‌ಜಿಒ ಜಾಲವನ್ನು ನಿಭಾಯಿಸಲು ತಗ್ಗಿ ಮತ್ತು ಗುಳೇದ ಎಂಬಿಬ್ಬರು ಚಾರ್‌ಸೋಬೀಸ್‌ಗಳನ್ನು ನೇಮಕ ಮಾಡಿಕೊಂಡಿದ್ದಾನೆ. ಅಂಗವಿಕಲರಿಗೆ ನೀಡಬೇಕಾದ ಸಲಕರಣೆಗಳನ್ನು ನೀಡದೇ ಬೋಗಸ್ ಬಿಲ್ ಎತ್ತುವಲ್ಲಿ ಎತ್ತಿದ ಕೈ ತಗ್ಗಿ, ಗುಳೇದಗಳದ್ದು. ಬುದ್ಧಿಮಾಂದ್ಯ ಮಕ್ಕಳ ಶಾಲೆಗೆ ಪೂರೈಸಬೇಕಾದ ಆಹಾರ ಸಾಮಗ್ರಿಗೂ ನಾಲಿಗೆ ಚಾಚುವ ಈ ಖದೀಮ ಗುಂಪು ರಾಜಾರೋಷವಾಗಿ ಲೂಟಿ ನಡೆಸುತ್ತಲೇ ಇದೆ. ಬಾದಾಮಿ ಆದಿಗೊಂಡ ಸ್ವಯಂಸೇವಾ ಸಂಸ್ಥೆಯ ಎಚ್.ಕೆ. ಗಿರಡ್ಡಿಗೆ ನಿರಂತರ ಅನುದಾನ ಒದಗಿಸುವೆನೆಂದು ಹೇಳಿದ ಪಾಟೀಲ್, ಸಿಂಡಿಕೇಟ್ ಬ್ಯಾಂಕ್ ಖಾತೆ 723308950ಗೆ ಎರಡು ಲಕ್ಷ ರೂ. ಜಮಾ ಮಾಡಿಸಿಕೊಂಡ. ಮುಂದೆ ನಿರೀಕ್ಷಿಸಿದಷ್ಟು ಅನುದಾನ ಹರಿದು ಬರದೇ ಇದ್ದಾಗ ಗಿರಡ್ಡಿ ಆಕ್ಷೇಪ ಎತ್ತಿದ. ತನ್ನ ಅಳಿಯ ಗಿರೀಶನನ್ನು ತೋರಿಸಿದ ಪಾಟೀಲ್, ಗಿರಡ್ಡಿಗೆ ಧಮಕಿ ನೀಡಿ ತೆಪ್ಪಗಾಗಿಸಿದ.

ಇಲಾಖೆಯು ಹಂಚಬೇಕಾದ ಸಾಧನೆ-ಸಲಕರಣೆಗಳಲ್ಲಿ ಕಮೀಷನ್ ಹೊಡೆಯುವುದು, ಅನಾಥ ಮಕ್ಕಳು, ಬುದ್ಧಿಮಾಂದ್ಯ ಮಕ್ಕಳ ಹೆಸರಲ್ಲಿ ಬೋಗಸ್ ಎನ್‌ಜಿಒಗಳನ್ನು ಸೃಷ್ಟಿಸಿ ಅನುದಾನಗಳನ್ನು ಜೇಬಿಗಿಳಿಸುವುದು, ಇದರ ಜೊತೆಗೆ ಅಂಗನವಾಡಿ ಕಾರ್ಯಕರ್ತೆಯರೊಂದಿಗೆ ಅಶ್ಲೀಲವಾಗಿ ವರ್ತಿಸುವುದು– ಇಂತಹ 'ಕಲ್ಯಾಣ' ಯೋಜನೆಯಲ್ಲಿ ಮುಳುಗಿರುವ ಪಾಟೀಲ್ ಎಂಬ ಹೆಗ್ಗಣಕ್ಕೆ ಶಾಸಕ ಚರಂತಿಮಠ, ಸಂಸದ ಗದ್ದಿಗೌಡ, ಜಿಲ್ಲಾ ಉಸ್ತುವಾರಿ ಸಚಿವ ಲಿಂಬಾವಳಿಯವರ ಬೆಂಬಲ ವಿರುವುದರಿಂದ, ಬಾಗಲಕೋಟೆಯಲ್ಲಿ [illegible] ಮತ್ತು ಮಕ್ಕಳ ಕಲ್ಯಾಣ ಇಲಾಖೆ ಪಾಟೀಲನ ಸ್ವಂತ ಆಸ್ತಿಯಾಗುವ ದಿನಗಳು ದೂರವಿಲ್ಲವೇನೋ......

● ಮೇಘರಾಜ್

...ಳ್ಳೇಗಾಲದ ಕಿಮಿ ಶ್ರೀನಿವಾಸ್ ...ಪತ್ನಿಯೂ ಹೋದಳು ಪೆಟ್ರೋಲ್ ಬಂಕೂ ಹೋಯ್ತು!




...ವಾಸ್

"ಅಲ್ಲಯ್ಯ ಶ್ರೀನಿವಾಸ್, ಕಾಫಿಬೋರ್ಡ್‌ನಲ್ಲಿ ಕೆಲಸದಲ್ಲಿದ್ದೀಯಾ. ನಮಗೇ ರೀಲು ಬಿಟ್ಟು ಎಸ್.ಸಿ. ಕೋಟಾದಲ್ಲಿ ಪೆಟ್ರೋಲ್ ಬಂಕ್ ಹೊಡೆದುಬಿಟ್ಟಿದ್ದೀಯಲ್ಲ, ಏಳು ಮೊದ್ಲು ಬಂಕ್ ಬಿಟ್ಟು ಏಳು" ಎಂದು ಕ್ಯಾಕರಿಸಿ ಉಗಿದಿರುವ ಇಂಡಿಯನ್ ಆಯಿಲ್ ಕಾರ್ಪೋರೇಷನ್ (IOC) ಶ್ರೀನಿವಾಸನ ಬಂಕ್‌ಗೆ ಬೀಗ ಜಡಿದಿದೆ. ಈಗ ಬೀಗ ತೆಗೆಸಲು ...ಾರಣಿಗಳ ಮನೆ ಬಾಗಿಲಿಗೆ ಅಲೆಯುತ್ತಿದ್ದಾನೆ ಶ್ರೀನಿವಾಸ್.

...ಿಂದಂತೆ ಇಷ್ಟು ವರ್ಷ IOCಯ ಕಣ್ಣಿಗೆ ಮಣ್ಣು ಎರಚುತ್ತ ...ನ್ದ ಶ್ರೀನಿವಾಸನ ಸಮಗ್ರ ಜಾತಕವನ್ನು IOCಗೆ ಒದಗಿಸಿದ್ದೇ ...ದ ಡೈವೋರ್ಸ್ ಪಡೆದಿರುವ ಪತ್ನಿ ಮೀನಾರವರು. ಮೈಸೂರಿನ ...ಾಲೇಜಿನಲ್ಲಿ ಪ್ರಾಧ್ಯಾಪಕಿಯಾಗಿರುವ ಮೀನಾರು ಶ್ರೀನಿವಾಸನನ್ನು ...ಸಿ ವಿವಾಹವಾಗಿದ್ದರು. ಮದುವೆಯಾದ ಸ್ವಲ್ಪ ದಿನಗಳಲ್ಲೇ ಶ್ರೀನಿವಾಸನ ...ಮುಖ ಕಾಣತೊಡಗಿತು. ನಿತ್ಯ ಚಿತ್ರಹಿಂಸೆ ನೀಡತೊಡಗಿದ. ಕೊನೆಗೆ ... ಉಪಟಳ ತಾಳದೇ ಡೈವೋರ್ಸ್ ಪಡೆದ ಮೀನಾ ಈಗ ...ಯಿಂದ ಬದುಕುತ್ತಿದ್ದಾರೆ. IOC ಗೆ ಒಂದು ಮೂಕರ್ಜಿ ಬರೆಯುವ ...ಕ ವಂಚಕ ಶ್ರೀನಿವಾಸನಿಗೆ ಸರಿಯಾದ ಪಾಠ ಕಲಿಸಿದ್ದಾರೆ.

...ಬೆಂಗಳೂರು ವಿ.ವಿ.ಯಿಂದ ಅದ್ಹೇಗೋ ಡಾಕ್ಟರೇಟ್ ಗಿಟ್ಟಿಸಿರುವ ...ವಾಸ್ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಕಾಫಿ ಬೋರ್ಡ್‌ನಲ್ಲಿ ...ಕೊಂಡ.



... ಚಿಕ್ಕಮಗಳೂರಲ್ಲಿ ... 1 ಹುದ್ದೆಯಲ್ಲಿ ...ಂಡು ತೇಗುತ್ತಲೇ ...ೋಲ್ ಬಂಕ್‌ಗೆ ... ಹಾಕಿದ. IOCಗೆ ...ುವ ದಾಖಲೆಗಳಲ್ಲಿ ... ಸರ್ಕಾರಿ ನೌಕರ ...ದನ್ನು ಮುಚ್ಚಿಟ್ಟ. ...ವಿ ಜನಾಂಗಕ್ಕೆ ...ುವ ಈತ ಎಸ್.ಸಿ. ಎಂದು ಸುಳ್ಳು ಜಾತಿ ಸರ್ಟಿಫಿಕೇಟ್ ಕೊಟ್ಟು, ...ಗೆ ವಂಚನೆ ಬಗೆದ. 1995ರಲ್ಲಿ ಎಸ್.ಸಿ. ಕೋಟಾದಡಿ ಬಂಕ್ ...ದುಕೊಂಡುಬಿಟ್ಟ. 1999ರಲ್ಲಿ ಎಸ್.ಸಿ. ಕೋಟಾದಡಿ ಕಾರ್ಪಸ್ ...ಿಂದ ಆರ್ಥಿಕ ನೆರವನ್ನು ಪಡೆದುಕೊಂಡ. ಕೊಳ್ಳೇಗಾಲದಲ್ಲಿ ರಿಟೇಲ್ ...ಟ್ ನಿರ್ಮಿಸಲು IOCಯೇ ಜಾಗ ಖರೀದಿಸಿ ಕೊಟ್ಟಿತು. ...ಗಾಲ ಸರ್ವೀಸ್ ಸ್ಟೇಷನ್' ಹೆಸರಲ್ಲಿ ಶ್ರೀನಿವಾಸ್ ಯಾವುದೇ ...ಲ್ಲದೆ ಬಂಕ್ ನಡೆಸತೊಡಗಿದ.

...ಂಕ್ ಅನ್ನು ಸ್ವತಃ ಆತನೇ ನಡೆಸಬೇಕೆಂಬ ನಿಯಮವಿದೆ. ಆದರೆ ...ನಿವಾಸ ತಾನು ಚಿಕ್ಕಮಗಳೂರಲ್ಲಿ ಕಾಫಿಬೋರ್ಡ್ ಬೋಳಿಸುತ್ತ ...ಳ್ಳೇಗಾಲದಲ್ಲಿ ಬೇರೆಯವರನ್ನು ಕೂಡ್ರಿಸಿ ಬಂಕ್ ನಡೆಸುತ್ತಿದ್ದ.

...ತನ ಮಾಜಿ ಪತ್ನಿ ಮೀನಾರವರು IOCಗೆ ದೂರು ನೀಡಿದ ... IOC ಎಚ್ಚೆತ್ತುಕೊಂಡಿತು. ಬೆಂಗಳೂರಿನಿಂದ ಕೊಳ್ಳೇಗಾಲಕ್ಕೆ ...ದ IOCಯ ಅಧಿಕಾರಿ ಕೆ.ಆರ್. ರವಿ ಬಂಕ್‌ಗೆ ಬೀಗ ಜಡಿದರು. ...ೀಳಿದೊಡನೆ ಚಿಕ್ಕಮಗಳೂರಿನಿಂದ ಬೆಂಗಳೂರಿಗೆ ಓಡಿಬಂದ ...ವಾಸ್ IOC ಅಧಿಕಾರಿಗಳ ಎದುರು ದರ್ಪದಿಂದ ಕೂಗಾಡಿದ. ... ಶ್ರೀನಿವಾಸ್ ಪ್ರಸಾದ್ ಕ್ಲೋಸು, ಸುಭಾಷ್ ಭರಣಿ ಇನ್ನೂ ... ಅಂತೆಲ್ಲ ಪರೋಕ್ಷವಾಗಿ ಬೆದರಿಸಲು ನೋಡಿದ. ಇದ್ಯಾವುದಕ್ಕೂ ...ಡದ IOC ಈತನಿಗೆ ಉಗಿದು ಕಳಿಸಿತು. ಅಷ್ಟೇ ಅಲ್ಲದೇ ಆ ...ಅನ್ನು ಈಗ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯವರಿಗೆ ... ನೀಡಿದೆ. ಈಗ ರಾಜಕಾರಣಿಗಳ ಮನೆಬಾಗಿಲಿಗೆ ಎಡತಾಕುತ್ತಿರುವ ...ವಾಸ್ ಬಂಕ್ ಮರಳಿ ಪಡೆಯುವ ಹುನ್ನಾರ ನಡೆಸಿದ್ದಾನೆ.

...ುಮರಿ ದಲಿತ ನಾಯಕರನ್ನು ಬೆನ್ನಿಗಿಟ್ಟುಕೊಂಡು ಕೊಳ್ಳೇಗಾಲದಲ್ಲಿ ...ನಡೆಸುತ್ತಿದ್ದ ಈ ಆಹಾರಿ ಶ್ರೀನಿವಾಸ್, ಕಂದಹಳ್ಳಿ ಶ್ರೀನಿವಾಸ್ ... ಸುಭಾಷ್ ಭರಣಿಗಳ ಹೆಸರು ಹೇಳಿಕೊಂಡು ಕೆಲಸ ...ಕೊಳ್ಳುತ್ತಾ ಬಂದಿದ್ದಾನೆ.

...ಗೆ ಮಾಡಿದ ಅನ್ಯಾಯಕ್ಕೆ ಈಗ ತಕ್ಕ ಶಿಕ್ಷೆಯೇ ಆಗಿದೆ ಇವನಿಗೆ.


• ಟಿಕಸಾಳಿಗೆ



ಮಲೆನಾಡು: ಪೋಲೀಸರ ರುದ್ರ ನರ್ತನಕ್ಕೆ ಕೊನೆ ಎಂದು?

ಮಲೆನಾಡಿನಲ್ಲಿ ದಲಿತರು ಮತ್ತು ಗಿರಿಜನರು ನೆಮ್ಮದಿಯಿಂದ ಬದುಕುವುದಾದರೂ ಹೇಗೆ? ಹೇಳಿಕೇಳಿ, ಇಲ್ಲಿ ನಡೆಯುವುದು ಭೂ ಮಾಲೀಕರ ದರ್ಬಾರು. ಇಲ್ಲಿನ ಕೂಲಿ ಕಾರ್ಮಿಕರು ಜೀತದಾಳುಗಳಂತೆ ಶ್ರೀಮಂತರ ಅಡಿಕೆ ತೋಟಗಳಲ್ಲಿ ದುಡಿಯುತ್ತಿದ್ದಾರೆ. ಬೆವರು ಸುರಿಸಿ ಕಷ್ಟಪಟ್ಟು ದಿನವಿಡೀ ದುಡಿದರೂ ಕೈಗೆ ಸಿಕ್ಕಿದ್ದು ಬಾಯಿಗಿಲ್ಲ, ತಲೆಗೆ ಹೊದ್ದರೆ ಕಾಲಿಗಿಲ್ಲ. ಈ ಕಿತ್ತು ತಿನ್ನುವ ಬಡತನದ ಜೊತೆಗೆ ಅವಿವೇಕಿ ಖಾಕಿ ಪಡೆಗಳ ಅಟ್ಟಹಾಸ. ದುಡಿದು ದಣಿವರಿಯಲು ಮನೆಗೆ ಬಂದರೆ ಅಲ್ಲೂ ನೆಮ್ಮದಿ ಎಂಬುದಿಲ್ಲ. ನಕ್ಸಲಿಯ ಚಟುವಟಿಕೆ ನೆಪದಲ್ಲಿ ಅಹೋರಾತ್ರಿಯೂ ಕದ ಬಡಿಯುವ ಪೊಲೀಸರು. ಅವರ ಅಟ್ಟಹಾಸದ ವಿರುದ್ಧ ಎದುರಾಡಿದರೆ ಸಿಗುತ್ತದೆ ಬೂಟಿನ ಒದೆತ, ಕಿರುಕುಳ, ಚಿತ್ರಹಿಂಸೆ. ಅಷ್ಟೇ ಅಲ್ಲ, ಸರ್ಕಾರದ ವಿರುದ್ಧ ದನಿ ಎತ್ತಿದ ಯುವಕರನ್ನಂತೂ ಎಳೆದೊಯ್ದು ಅಕ್ರಮ ಬಂಧನದಲ್ಲಿಟ್ಟು ಪೀಡಿಸಿ ಸುಳ್ಳು ಕೇಸು ಜಡಿದು ಜೈಲಿಗಟ್ಟುತ್ತಾರೆ.

ಕೆಲವು ತಿಂಗಳುಗಳ ಹಿಂದೆ ದೇಶದೆಲ್ಲೆಡೆ 'ಲೋಕಸಭಾ ಚುನಾವಣೆಯ ಜೋಂಪು ಹರಡಿತ್ತು, ಆ ಹೊತ್ತಿನಲ್ಲಿ ಈ ಜಿಲ್ಲೆಯಲ್ಲೊಂದು 'ಖಾಕಿ ಕ್ರಾಂತಿ' ನಡೆದುಹೋಯಿತು. ಅನಾಮತ್ತು 42 ಮಂದಿ ಅಮಾಯಕರ ಬಂಧನವಾಯಿತು. ಅವರೆಲ್ಲ ದಲಿತರು, ಗಿರಿಜನರು, ಅಲ್ಪಸಂಖ್ಯಾತರು ಎಂಬುದು ಗಮನಾರ್ಹ. ಇವರೆಲ್ಲರ ಮೇಲೆ 'ನಕ್ಸಲ್ ಬೆಂಬಲಿಗ'ರೆಂಬ ಆರೋಪ ಹೊರಿಸಲಾಗಿದೆ. ಇದೆಲ್ಲಾ ಯಥಾವತ್ತಾಗಿ, ಸುಲಲಿತವಾಗಿ ನಡೆದದ್ದು ಆರೆಸ್ಸೆಸ್ ಮೂಲದ ರಾಜ್ಯ ಗೃಹಮಂತ್ರಿ ವಿ.ಎಸ್. ಆಚಾರ್ಯ ನೇತೃತ್ವದಲ್ಲಿ ಎಂಬುದು ಈಗ ರಹಸ್ಯವಾಗಿಯೇನೂ ಉಳಿದಿಲ್ಲ.



ಅಂಗಡಿ ಚಂದ್ರು

ಇತ್ತೀಚೆಗೆ ಮಲೆನಾಡಿನಿಂದ ನಕ್ಸಲರ ಚಟುವಟಿಕೆಗಳ ಕುರಿತು ಯಾವ ಸುದ್ದಿಯೂ ಬಂದಿಲ್ಲ. ಹಾಗಿದ್ದರೂ ಸರ್ಕಾರ ನಕ್ಸಲ್ ದಮನಕ್ಕೆಂದು ಕೋಟ್ಯಂತರ ರೂಪಾಯಿ ಪೋಲು ಮಾಡುತ್ತಿದೆ. ರಾಜ್ಯದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ನಂತರ ನಕ್ಸಲ್ ನಿಗ್ರಹದಳದಲ್ಲಿರುವ ಪೊಲೀಸರ ಸಂಖ್ಯೆಯಲ್ಲಿ ಗಣನೀಯ ಏರಿಕೆ ಕಂಡಿದೆ.

ಇದನ್ನು ಸಮರ್ಥಿಸಿಕೊಳ್ಳಲೆಂದೋ ಏನೋ, ಪೊಲೀಸರು ದಿನಕ್ಕೊಂದು ಸುಳ್ಳುಸುದ್ದಿಯನ್ನು ಹರಡಿಸುವ ಪ್ರಯತ್ನಗಳನ್ನು ಎಡೆಬಿಡದೆ ಮಾಡುತ್ತಿದ್ದಾರೆ. "ಛತ್ತೀಸಗಢದಿಂದ ತರಬೇತಿ ಪಡೆದ ಹನ್ನೊಂದು ಜನರ ತಂಡವೊಂದು ಮಲೆನಾಡಿನ ಕಾಡಿನಲ್ಲಿ ಓಡಾಡಿಕೊಂಡಿದ್ದಾರೆ'' ಎಂಬುದೊಂದು ಪೊಲೀಸರೇ ಇತ್ತೀಚೆಗೆ ಹಬ್ಬಿಸಿದ ಸುದ್ದಿ.

ಇಂತಹ ಸುದ್ದಿಗಳನ್ನಾಧರಿಸಿಯೇ ಪೊಲೀಸರು ಈಗ ಅಮಾಯಕರನ್ನು, ಪ್ರಜಾತಂತ್ರವಾದಿಗಳನ್ನು ಬಂಧಿಸಿ ಯಾರೂ ಸರ್ಕಾರದ ವಿರುದ್ಧವಾಗಲೀ, ಪೊಲೀಸರ ದೌರ್ಜನ್ಯದ ವಿರುದ್ಧವಾಗಲೀ ಸೊಲ್ಲೆತ್ತದಂತೆ ಮಾಡುತ್ತಿದ್ದಾರೆ. ಉದಾಹರಣೆಗೆ: ಆದಿವಾಸಿ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಮರಿಯಪ್ಪ ಎಂಬುವವರನ್ನು ಪೊಲೀಸರು ಅಕ್ರಮ ಬಂಧನದಲ್ಲಿಟ್ಟಿದ್ದರು. ಅದರ ಬಗ್ಗೆ ವಿಚಾರಿಸಲು ಕೆರೆಕಟ್ಟೆ ಗ್ರಾಮ ಪಂಚಾಯತಿ ಅಧ್ಯಕ್ಷರು ಹೋಗಿದ್ದರು. ಆದರೆ ಪೊಲೀಸರು ಅವರಿಗೇ ಧಮಕಿ ಹಾಕಿದ್ದಾರೆ. "ಮುಂದಿನ ಬಾರಿ ನಿನ್ನದೇ ಸರದಿ, ಕಾದಿರು'' ಎಂದು ಹೇಳಿ ಅವರನ್ನು ಕಳಿಸಿದ್ದಾರೆ.

ಇನ್ನೊಂದು ಉದಾಹರಣೆ: ಮೂಡಿಗೆರೆಯ ಅಂಗಡಿ ಚಂದ್ರು ಎಂಬಾತ ಆಳುವ ಮೇಲ್ವರ್ಗದ ವಿರುದ್ಧದ ಹೋರಾಟದಲ್ಲಿ ಸಕ್ರಿಯನಾಗಿದ್ದ. ಆ ಕಾರಣಕ್ಕೇ ಪೊಲೀಸರು ಆತನನ್ನು ಬಂಧಿಸಿ ಧೂಳು ಹಿಡಿದಿದ್ದ ಐದು ಹಳೆಯ ಪ್ರಕರಣವನ್ನು ಆತನ ತಲೆಗೆ ಕಟ್ಟಿ ಈಗ ಜೈಲಿಗಟ್ಟಿದ್ದಾರೆ.

ಹಾಗೆಯೇ ಕೆರೆಕಟ್ಟೆಯ ರಮೇಶ, ದೊಡ್ಡಣ್ಣಕೊಂಡದ ಸಹೋದರರಾದ ಶಂಕರ ಮತ್ತು ಸುಂದರ, ಬೆಚ್ಚಳ್ಳಿ ಗ್ರಾಮದ ಸಹೋದರರಾದ ಹಾಲಪ್ಪ ಮತ್ತು ಅನಂತ, ನಜೀರ್, ಅಫ್ಸರ್ ಎಂಬ ಇತರೆ ಯುವಕರ ವಿರುದ್ಧ 'ಇವರೆಲ್ಲ ನಕ್ಸಲ್ ಬೆಂಬಲಿಗರು, ಅವರೊಂದಿಗೆ ಶಾಮೀಲಾಗಿದ್ದಾರೆ. ಅವರೊಂದಿಗೆ ಸಹಕರಿಸಿ ಅನೇಕ ಕಡೆಗಳಲ್ಲಿ ವಿಧ್ವಂಸಕ ಕೃತ್ಯ ನಡೆಸಿದ್ದಾರೆ' ಎಂದು ಆರೋಪಿಸಿ ಪ್ರಕರಣಗಳನ್ನು ದಾಖಲಿಸಿದ್ದಾರೆ. ಹೀಗೆ ಪೊಲೀಸರಿಂದ ಈಗ ಬಂಧನಕ್ಕೊಳಗಾಗಿರುವವರ ಸಂಖ್ಯೆ 42 ದಾಟಿ ನಿಂತಿದೆ.

ಯಾವಾಗ ಕುದುರೆಮುಖ ರಾಷ್ಟ್ರೀಯ ಉದ್ಯಾನವನ, ಮೀಸಲು ಅರಣ್ಯ ಎಂದೆಲ್ಲ ಅಲ್ಲಿನ ಆದಿವಾಸಿ ಮತ್ತು ಗಿರಿಜನರನ್ನು ಸರ್ಕಾರ ಒಕ್ಕಲೆಬ್ಬಿಸತೊಡಗಿತ್ತೋ ಆಗ ಅಲ್ಲಿನ ಜನರೂ ಪ್ರತಿಭಟಿಸಲಾರಂಭಿಸಿದರಲ್ಲದೆ, ನಕ್ಸಲರೂ ಇಲ್ಲಿ ಠಿಕಾಣಿ ಹೂಡಿದರು. ನಕ್ಸಲರನ್ನು ಹಿಡಿಯಲಾರದ ಪೊಲೀಸರು ಅದೇ ನಕ್ಸಲರ ನೆಪದಲ್ಲಿ ಅಮಾಯಕರನ್ನು ಮತ್ತು ತಮ್ಮ ಹಕ್ಕುಗಳಿಗಾಗಿ ಪ್ರಜಾಸತ್ತಾತ್ಮಕವಾಗಿ ಹೋರಾಡುತ್ತಿರುವವರನ್ನೂ ಬಂಧಿಸುವುದು ಯಾವ ನ್ಯಾಯ?

ಇವತ್ತಿಗೆ ಮಲೆನಾಡಿನ ಕಾಡಿನಂಚಿನ ಪರಿಸರದಲ್ಲಿ ಪೊಲೀಸರ ಬೂಟುಗಳ ಸದ್ದು, ಬಂದೂಕಿನ ಆರ್ಭಟ ವಿಪರೀತವಾಗಿದೆ. ಆದರೂ ಅವರ ವಿರುದ್ಧ ಧ್ವನಿ ಎತ್ತಲೂ ಜನ ಭಯಪಡುತ್ತಿದ್ದಾರೆ. ಯಾಕೆಂದರೆ ಪ್ರತಿಭಟಿಸಿದವರಿಗೆ 'ನಕ್ಸಲ್ ಬೆಂಬಲಿಗ' ಎಂಬ ಹಣೆಪಟ್ಟಿ ದೊರಕುತ್ತದಲ್ಲದೆ, ಸುಳ್ಳು ಆರೋಪಗಳಡಿ ಫಿಟ್ ಆಗಿ ಜೈಲುಪಾಲಾಗುವುದು ಇವತ್ತು ಖಚಿತ ಎಂಬಂತಾಗಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ನಕ್ಸಲೀಯ ಚಳವಳಿಯ ಪರಿವೆ ಇಲ್ಲದ, ಅದರ ಆಳ ಮತ್ತು ಅಗಲದ ಜ್ಞಾನವೇ ಇಲ್ಲದ, ಅದರೊಂದಿಗೆ ಯಾವ ಸಂಪರ್ಕವೂ ಇಲ್ಲದ ಜನರನ್ನೂ ಪೊಲೀಸರು ಬಂಧಿಸಿದ್ದಾರೆ.

ಗಿರಿಜನರ ಹಾಡಿಗಳಲ್ಲಿ ಹೆಚ್ಚಾಗಿ ಜನ ಕೂಲಿ ಕಾರ್ಮಿಕರು. ಗದ್ದೆ, ತೋಟಗಳಲ್ಲಿ ದುಡಿದು ಬದುಕು ಹೊಸೆಯುವ ಜನ. ಇಂತಹವರನ್ನೇ ಹೆಚ್ಚಿನ ಸಂಖ್ಯೆಯಲ್ಲಿ ಬಂಧಿಸಲಾಗಿದ್ದು ಈಗ ಅವರ ಕುಟುಂಬಗಳಿಗೆ ಆಧಾರಸ್ತಂಭಗಳೇ ಇಲ್ಲದಂತಾಗಿದೆ. ದುಡಿದು ತಿನ್ನುವ ಜನರನ್ನೇ ಬಂಧಿಸುವ ಪೊಲೀಸರು ಅದೇನನ್ನು ತಿನ್ನುತ್ತಾರೋ ಭಗವಂತನೇ ಬಲ್ಲ.

ಅದೇನೇ ಇರಲಿ, ನಕ್ಸಲರನ್ನು ನಿಗ್ರಹಿಸುವ ನೆಪದಲ್ಲಿ ಮಲೆನಾಡು ಭಾಗದ ಪೊಲೀಸರು, ನಕ್ಸಲ್ ನಿಗ್ರಹದಳ ಮತ್ತು ಗುಪ್ತಚರ ದಳಗಳು ಹೆಚ್ಚೆಚ್ಚು ಸೌಕರ್ಯಗಳನ್ನು ಪಡೆಯತೊಡಗಿರುವುದು ಮಾತ್ರ ಸತ್ಯ. ನಕ್ಸಲ್ ಚಟುವಟಿಕೆ ಹೆಚ್ಚುತ್ತಿದೆ ಎಂದು ಹೇಳಿ ಹಲವರನ್ನು ಬಂಧನಕ್ಕೊಳಪಡಿಸಿದರೆ ಹಣದ ಜೊತೆಗೆ ಅತ್ಯಾಧುನಿಕ ಸೌಕರ್ಯಗಳೂ ಎಗ್ಗಿಲ್ಲದೆ ಹರಿದುಬರತೊಡಗುತ್ತದೆ. ಅದರಲ್ಲಿ ಅದೆಷ್ಟು ನಕ್ಸಲರನ್ನು ನಿಗ್ರಹಿಸಲು ಹೋಗುತ್ತೋ, ಅದೆಷ್ಟು ಅವರ ಜೇಬನ್ನೇ ಸೇರುತ್ತೋ, ಆ ಆಚಾರ್ಯನೇ ಬಲ್ಲ.

ವಿಚಿತ್ರ ಸಂಗತಿ ಯಾವುದೆಂದರೆ ಇಲ್ಲಿನ ಜನಸಾಮಾನ್ಯರನ್ನು ಪೀಡಿಸುವುದೇ ತನ್ನ ನಿತ್ಯ ಕಾಯಕವನ್ನಾಗಿಸಿಕೊಂಡಿರುವ ಪೊಲೀಸರೇ ಇವತ್ತು ಭಯದ ವಾತಾವರಣದಲ್ಲಿ ಬದುಕುತ್ತಿರುವಂತಿದೆ. ಎತ್ತರದ ಎರಡಂತಸ್ತಿನ ಪೋಲಿಸ್ ಠಾಣೆಗಳಿಗೆ ರಕ್ಷಣಾ ಕವಚ, ತಡೆ ಗೋಡೆ ನಿರ್ಮಿಸಲಾಗಿದೆ. ಸುತ್ತಮುತ್ತಲು ಕಾಂಪೌಂಡ್ ಎದುರು ದ್ವಾರಗಳಲ್ಲಿ ತಿರುವುಗಳು. ಟೆರೇಸ್‌ನ ಮೂಲೆಮೂಲೆಗಳಲ್ಲಿ ಮರಳ ಮೂಟೆಗಳ ಜೋಡಣೆ. ಎಕೆ 47 ಬಂದೂಕುಗಳು ... ರಾರಾಜಿಸುತ್ತಿವೆ.


ಹೀಗೆ ತಮಗೆ ಭದ್ರತೆ ನಿರ್ಮಿಸಿಕೊಂಡು ಜನಸಾಮಾನ್ಯರನ್ನು ಪೀ... ಇದ್ದರೆ ಜನರು ದಂಗೆ ಏಳದೇ ಬದು...

• ಅಜೇಶ್ ತಿರುಗುಂದ

ನೋವುಭರಿತ ಹಾಸ್ಯ ಪ್ರಬಂಧ



ಚಿಕುನ್ ಗುನ್ಯಾ



ಚಿಕುನ್‌ಗುನ್ಯಾದ ಬೇನೆ ಎಂದಾದರೂ ಕಮ್ಮಿಯಾದೀತು ಎಂಬ ವಿಧಿವಾದದ ನಂಬಿಕೆಯಲ್ಲೇ ಸಾವಿರಾರು ಜನ ಕುಂಟುತ್ತಾ, ತೆವಳುತ್ತಾ, ಪಾದ ಹಿಸುಕುತ್ತಾ ದಿನ ತಳ್ಳತೊಡಗಿದ್ದರು. ಪುಣ್ಯವಶಾತ್, ಗ್ರಾಮೀಣಲೋಕದ ಶಾಪಗಳಾದ ಕೆಇಬಿ, ಫಾರೆಸ್ಟ್, ತಾಲೂಕಾಫೀಸುಗಳೆಲ್ಲಾ ಪಾಲು ಕೇಳತೊಡಗಿ, ಆ ಸಂಕಷ್ಟದಲ್ಲಿ ಚಿಕುನ್‌ಗುನ್ಯಾದ ಬೇನೆ ಲೆಕ್ಕಕ್ಕೆ ಬರಲಿಲ್ಲ, ನಾನೂ ಈ ಬೇನೆಗೆ ಹೊಂದಿ ಕೊಂಡದ್ದು ಬಿಟ್ಟರೆ, ಬೇನೆ ಗುಣವಾದ ಭಾವನೆ ಬರಲೇ ಇಲ್ಲ.

● ಕೆ.ಪಿ. ಸುರೇಶ

ಚಿಕುನ್ ಗುನ್ಯಾ ಎಂಬ ಜ್ವರ ಕೋಳಿಯಿಂದ ಬರುತ್ತೆ ಎಂದು [illegible] ನಂಬಿದ್ದೆ. "ಮಧುಮಾಂಸ ತಿನ್ನುವ ತುಂಡರಿಗಷ್ಟೇ ಅದು ಬರೋದು" ಎಂದು ನನ್ನ ದೂರದ ಅತ್ತೆ ಒಬ್ಬರು ಖಡಾಖಂಡಿತ ತೀರ್ಪು ನೀಡಿದ್ದರು.

ಆದರೆ ಅದು ಸುನಾಮಿ ಥರ ಅಪ್ಪಳಿಸಿದ ರೀತಿ, "ಮನುಷ್ಯ ಜಾತಿ ತಾನೊಂದೆವಲಂ..." ಎಂದು ಸಿದ್ಧಪಡಿಸಿತು. ಅಲ್ಲಿ ಬಂತು, ಇಲ್ಲಿ ಬಂತು, ನನ್ನ ಮನೆ ಬಾಗಿಲಿಗೇ ಬಂತು ಎಂಬಂತಾಗಿ ಇಡೀ ದಕ್ಷಿಣಕನ್ನಡ ಜಿಲ್ಲೆಯೇ ಜ್ವರ ಪೀಡಿತ ವಾಯಿತು.

ಒಂದು ದಿನ ಸಂಜೆ ಮೈಬೆಚ್ಚಗಾಗಿ ಕ್ರೋಸಿನ್ ತಿಂದು ಮಲಗಿದೆ. ಜ್ವರ ಬಿಡಲಿಲ್ಲ. ಅಮೃತಾರಿಷ್ಟ ಕುಡಿದೆ. ಊಹ್ಞೂ... ಪ್ಯಾರನ ಕಾಲಿಂದ ಮೇಲೇರಿದ ಒತ್ತಿಯ ಹಾಗೆ ಏರುತ್ತಾ ಹೋಯಿತು. ಬೆಳಗ್ಗೆ ಬಾಯಿತುಂಬಾ ಹುಣ್ಣು, ಎಲ್ಲೆಂದರಲ್ಲಿ ಬಿಳಿಗುಳಿಗಳು. ನೀರು ಕುಡಿಯುವುದು ಬಿಡಿ, ಉಗುಳು ನುಂಗಲೂ ಕಷ್ಟ. ನಾಲಗೆ ತೂರಲಿಸಿದರೂ ಉರಿ. ಅಕ್ಷರಶಃ ನಳಿಕೆಯಲ್ಲಿ ಎಳನೀರನ್ನು ನೇರ ಗಂಟಲಿಗೆ ಇಳಿಸಿ ಒಂದು ದಿನ ತಳ್ಳಿದೆ. ಉಷ್ಣಾಧಿಕ್ಯ ವಿಟಮಿನ್ ಕೊರತೆ ಎಂದು ವಿಟಮಿನ್ ಮಾತ್ರೆ, ಜ್ವರದ ಮಾತ್ರೆ ತಿಂದೆ. ಎರಡನೇ ದಿನ ಬ್ರೆಡ್ಡನ್ನು ಹಾಲಲ್ಲಿ ಕದಡಿ, ನಳಿಗೆ ಪ್ರಯೋಗದ ಮುಖಾಂತರ ಗಂಟಲಿಗಿಳಿಸಿದೆ. ಜ್ವರ, ಬಾಯಿ ಹುಣ್ಣು ಎರಡೂ ಜಪ್ಪಯ್ಯ ಅನ್ನಲಿಲ್ಲ.

ಮೂರನೇ ದಿನ ಜ್ವರಬಿಟ್ಟಿತ್ತು, ಐದನೇ ದಿನ ಬಾಯಿ ಹುಣ್ಣು ಕಡಿಮೆಯಾಯಿತು. ಜೀವಚ್ಛವದಂತೆ ಬಿದ್ದಿದ್ದ ನಾನು ಇನ್ನು ಪರವಾಗಿಲ್ಲ, ನಿತ್ಯದ ಕಾಯಕ ಮುಂದುವರಿಸಬಹುದು ಅಂದುಕೊಂಡು ಅಂಗಳಕ್ಕಿಳಿದರೆ, ಪಾದದ ಗಂಟು ಗಂಟೂ, ಒಂದೊಂದು ಜಾಯಿಂಟೂ ಕೊಕ್ಕೆ ಹಾಕಿ ಎಳೆದಂತೆ ಝುಮುಗುಟ್ಟಿ ನಡೆಯಲು ಇನ್‌ಕಾರ್ ಮಾಡಿದವು. ಕೊಡೆ ಬಿಡಿಸಲು ನೋಡಿದರೆ ಕೈಬೆರಳುಗಳು ಕೊಕ್ಕೆಗಟ್ಟಿದವು; ಚಿಕುನ್ ಗುನ್ಯ ಹೀಗೆ ನನಗೆ ದಿವ್ಯದರ್ಶನ ಮಾಡಿಸಿತು.

ಈ ಐದು ದಿನವೂ ನಿತ್ಯ ಕರ್ಮ, ತೋಟದ ಕೆಲಸ ಹೇಗೆ ನಡೆಯಿತೋ, ಬಾಕಿ ಬಿದ್ದ ಬ್ಯಾಂಕು, ಸೊಸೈಟಿ, ಕಚೇರಿ ಕೆಲಸಕ್ಕೆಂದು ಕುಂಟುತ್ತಾ ಹೋದೆ. "ಅಯ್ಯೋ, ಎಂತದು ಮಾರಾಯ್ರೋ...ಹೌದಾ... ಛೀಛೀ..." ಎಂದೆಲ್ಲಾ ಅನುಕಂಪ ದೊರೆತೀತು ಎಂಬ ಹುಂಬ ಆಸೆ ಇಟ್ಟುಕೊಂಡಿದ್ದೆ. ಅಲ್ಲೂ ಖೊಟ್ಟಿ ಅದೃಷ್ಟ ನನ್ನದು. ಅಷ್ಟರಲ್ಲಾಗಲೇ ಊರಿನ ಅರ್ಧಾಂಶ ಪ್ರಜಾಕೋಟಿಗೆ ಈ ಕಾಯಿಲೆ ತಗಲಿದ್ದರಿಂದ ನನ್ನನ್ನು ಯಾರೂ ಕ್ಯಾರೇ ಅನ್ನಲಿಲ್ಲ.

ದಾರಿಯಲ್ಲಿ ನಡೆಯುತ್ತಿದ್ದರೆ, ನೆರಳಿದ್ದೆಡೆಯೆಲ್ಲಾ ಕೂತು ಪಾದ ಹಿಸುಕಿಕೊಳ್ಳುವ ವೃದ್ಧರು, ಹೆಂಗಸರು, ಮಧ್ಯ ವಯಸ್ಕರು. ಒಂದೊಂದು ಫರ್ಲಾಂಗಿಗೂ ನಿರಾಶ್ರಿತರಂತೆ ಹೊರೆ ಕೆಳಕ್ಕಿಳಿಸಿ ಕೂತ ಹಳ್ಳಿಗರು. ಸಹ ದುಃಖಿಗಳು ಜೀಪು, ಬೈಕಿನಲ್ಲಿ ರೊಯ್ಯೆಂದು ದಾಟುವವರ ಡ್ರಾಪ್‌ಗೆ ಕಾಯುತ್ತಾ ಪಾದಚಾರಿ ಹುಲುಮಾನವರ ಬಳಿ ಸೊಸಾ ಮಾತಾಡದೆ ಇರುತ್ತಿದ್ದ ನನ್ನಂಥವನಿಗೂ ಊರಿನ ಕುಟುಂಬಗಳೂ, ಅವರ ಕಷ್ಟಗಳೂ ಪರಿಚಯವಾಗತೊಡಗಿತು. ಇಷ್ಟು ದಿನ ಬಾಕಿ ಇದ್ದ ಸುಖ-ದುಃಖ ವಿಚಾರಣೆ, ಉಭಯ ಕುಶಲೋಪರಿ ಸಾಂಪ್ರತ ಸಾಂಗವಾಗಿ ನಡೆಯತೊಡಗಿತು.

ಜತ್ತಪ್ಪ ಗೌಡರ ಬಾವಿಯ ತಳದ ಕಲ್ಲು ಕುಸಿದು ನೀರು ಕೆಸರಾದದ್ದು, ಭಟ್ಯನ್ಯಾಕನ ಬೆಂಡೆಸಾಲಿಗೆ ಮುರುಟುರೋಗ ಬಂದದ್ದು, ಆನಂದ ಮೂಲ್ಯನ ರಬ್ಬರ್ ಗಿಡ ಕಾಟ ತಿಂದದ್ದು, ಪಿಜಣನ ಊರ ದನ ರಬ್ಬರ್ ಸ್ಟ್ರಾಪ್ ತಿಂದು ಸತ್ತದ್ದು, ಎಲ್ಲ ಕಷ್ಟ ಸಂಕಷ್ಟಗಳೂ ಗೊತ್ತಾಗತೊಡಗಿತು. ನೆರೆಮನೆಯವರ ದುಃಖಕ್ಕೆ ಅಳದೇ ಮುಂದೊತ್ತಿ ಹೋಗುತ್ತಿದ್ದವರೂ ಈಗ ಪರಸ್ಪರ ಭಾವಯಂತರಾಗತೊಡಗಿದರು.

ಇಡೀ ಕೃಷಿಲೋಕವೇ ಕುಂಟುತ್ತಾ ಕುಸಿಯುವ ಮೊದಲ ಸೂಚನೆ ಸಿಕ್ಕದ್ದು ತೆಂಗಿನ ಕಾಯಿ ಕೀಳಲು ಭಟ್ಯ ಬಾರದೇ ಇದ್ದಾಗ. ಹುಡುಕಿಕೊಂಡು ಅವನ ಮನೆಗೆ ಹೋದರೆ, ಚಾನಿಯ ಚೋಮ, ಭಟ್ಯ -ಹೀಗೆ ನಮ್ಮ ಕೃಷಿಲೋಕದ ಕುಶಲ ಕಾರ್ಮಿಕ ದಂಡೇ ಬೀಡಿ ಸೇದಿಕೊಂಡು ಕುಕ್ಕರಗಾಲಲ್ಲಿ ಕೂತಿತ್ತು. ಸುಮ್ಮನೆ ಬೆಳಗಿನ ಬಿಸಿಲಿಗೆ, ಹತ್ತಡಿ ದೂರದ ಬೂದಿ ರಾಶಿಯಲ್ಲಿ ಮುರುಟ ಮಲಗಿದ ನಾಯಿಯನ್ನು ನೋಡುತ್ತಾ ಭಟ್ಯನ್ಯಾಕ ಕೂತಿದ್ದ. "ಉಣ್ಣಲೂ ಕೈ ಮಡಚಲಾಗುವುದಿಲ್ಲ, ಬಿಂದಿಗೆ ನೀರು ಹಳ್ಳದಿಂದ ತರುವ ಪ್ರಶ್ನೆಯೇ ಇಲ್ಲ, ಚೊಂಬಿಗೆ ತುಂಬಿಸಿ ಹಾಗೂಹೀಗೂ ಬಿಂದಿಗೆ ತಳ್ಳಿಕೊಂಡು ಬರೋದು..." ಎಂದ ಭಟ್ಯ.

ನಿತ್ಯದ ಅಡುಗೆಗೆ ಸೌದೆ ಒಡೆಯುವ ಬದಲು, ಮುರುಲೆ ತುಂಬ ಅಡುಗೆ ನಡೆಯುತ್ತಿತ್ತು. ಮರವೇರುವ ಕುಶಲ ಕಾರ್ಮಿಕನಾಗಿದ್ದ ಭಟ್ಯನೇ, "ಅಣ್ಣಾ, ನೀವು ಕೊಟ್ಟ ಸಂಬಳ ಸಾಕು. ಹುಲ್ಲೋ ಸೊಪ್ಪೋ ಮಾಡಿ. ಸೋಗೆ ನೇಯ್ದು ಕೊಡುತ್ತೇನೆ... ಹೇಗಾದ್ರೂ ಉಣ್ಣಬೇಕಲ್ಲ" ಎಂದಿದ್ದು ಕೇಳಿ ಎದೆ ಹಾರಿತು.

ಕತ್ತಿ, ಹಾರೆ, ಪಿಕ್ಕಾಸಿ, ಗರಗಸ, ಕೊಡಲಿ-ಹೀಗೆ ಕೃಷಿಲೋಕದ ಸಮಸ್ತ ಶಸ್ತ್ರಾಸ್ತ್ರಗಳೂ ವಿಆರ್‌ಎಸ್ ತೆಕ್ಕೊಳ್ಳುತ್ತಿರುವಂತೆ ನನಗೆ ತೋರಿತು.

ಈ ದುಗುಡದಲ್ಲೇ ಹಾಲು ಕರೆಯುವ ಕಷ್ಟದಿಂದ ಕಳಚಿಕೊಳ್ಳಲು ಒಂದು ಹಸು ಮಾರಲು ಯತ್ನಿಸಿದೆ. ಕುಕ್ಕಜಡ್ಕದಲ್ಲಿ ದನದ ದಳ್ಳಾಳಿ ತಿಮ್ಮಪ್ಪನಲ್ಲಿ ಪ್ರಸ್ತಾಪಿಸುವ ಮೊದಲೇ, ಅವನು ಒಂದು ಡಜನ್ ದನಗಳನ್ನು ಮಾರಿಸಿಕೊಡುವ ಕಷ್ಟದ ಬಗ್ಗೆ ನನ್ನಲ್ಲಿ ಹೇಳಿದ. "ಕೂರುವುದು ಹೇಗೆ ಅಣ್ಣಾ ಹಾಲು ಕರೆಯೋದು ಹೇಗೆ...? ಒಟ್ಟಾರೆ ಹಣೆಬರಹ..." ಎಂದಿದ್ದೇ, ದನ ಮಾರುವ ಸಾಧ್ಯತೆ ಕ್ಷೀಣ ಎಂದು ನನಗೇ ಮನದಟ್ಟಾಯಿತು. ಮನೆಮನೆಯವರೂ "ನನ್ನ ದನ ಮಾರಿಸಿಕೊಡು ಮಾರಾಯಾ..." ಎಂದು ತಿಮ್ಮಪ್ಪನಿಗೆ ದುಂಬಾಲು ಬೀಳುತ್ತಿದ್ದರು. ಇಡೀ ಜಿಲ್ಲೆಯೇ ಕೊರಡುಗಟ್ಟಿ ಕೂತರೆ ಕೊಳ್ಳುವವರು ಯಾರು? ಮಾರುವುದಾದರೂ ಹೇಗೆ...?.

ನಿಂತು ಹರಟೆ ಹೊಡೆಯುತ್ತಿದ್ದವರೆಲ್ಲಾ ಕೂತು ಉಸ್ಸಪ್ಪಾ ಅನ್ನತೊಡಗಿ ವಿಚಿತ್ರ ಸನ್ನಿವೇಶ ನಿರ್ಮಾಣವಾಯಿತು. ಸಾಮಾನ್ಯವಾಗಿ ಅಂಗಡಿ, ಹಾಲಿನ ಡಿಪೋ, ರೇಷನ್ ಶಾಪ್‌ಗಳಲ್ಲಿ, ಊರಿನ ಆಢ್ಯರು ಬಂದಾಗ, ಕುಕ್ಕರಗಾಲಲ್ಲಿ ಕೂತ ಬಡವರು ಪಂಚೆ ಸರಿ ಮಾಡಿಕೊಂಡು ಎದ್ದು ನಿಲ್ಲುವ ಶಿಷ್ಟಾಚಾರಕ್ಕೂ ಧಕ್ಕೆ ಬಂದಿತು. ಎದ್ದರೆ ವಾಲಿ ತತ್ತರಗೊಳ್ಳುವ ಜೋಮು ಹಿಡಿಯುವ ಕಾರಣ ಎದ್ದು ನಿಲ್ಲಲು ಮಂದಿ ಹೆದರುತ್ತಿದ್ದರು. ಈ ವಿಚಿತ್ರ ಬಂಡಾಯ ಚಿಕುನ್‌ಗುನ್ಯಾದ ಕಾರಣಕ್ಕೆ ಎಂದರೆ, ಊರಿನ ಆಢ್ಯರು ಸುತಾರಾಂ ನಂಬಲು ಸಿದ್ಧರಿರಲಿಲ್ಲ. "ಅಹಂಕಾರ, ಬೋಳಿ ಮಕ್ಕಳಿಗೆ..." ಎಂದು ಗೊಣಗುತ್ತಿದ್ದರು.

ಜಿಲ್ಲೆಯ ನಾಲ್ಕು ತಾಲುಕಿನ ಶೇ. 80 ರಷ್ಟು ಮಂದಿಯೂ ಚಿಕುನ್‌ಗುನ್ಯಾದ ಫಲಾನುಭವಿಗಳಾಗಿದ್ದರು ಎಂಬುದು ನಿಸ್ಸಂದೇಹ. ಜನ ಮುಕುರುವಲ್ಲಿ ಠಳಾಯಿಸುತ್ತಿದ್ದ ಜನಪ್ರತಿನಿಧಿಗಳು ಈಗ ಯಾರ ಕೈಗೂ ಸಿಗುತ್ತಿರಲಿಲ್ಲ. ಪುಣ್ಯಕ್ಕೆ ದ.ಕ.ದಲ್ಲಿ ಆಗ ಒಬ್ಬ ಮಾನವಂತ ಡಿಸಿ ಇದ್ದರು. ಅವರು ಸ್ವಂತ ವಿವೇಚನೆ ಬಳಸಿ, ಬಿ.ಪಿ.ಎಲ್. ಕಾರ್ಡುದಾರರಿಗೆ ತಲಾ 30 ಕೆ.ಜಿ. ಅಕ್ಕಿ ಕೊಟ್ಟ ಕಾರಣ, ನೂರಾರು ಬಡವರು ಜೀವ ಬಚಾಯಿಸಿಕೊಂಡರು.

ಸರ್ಕಾರ ಮಾತ್ರಾ ಯಥಾಪ್ರಕಾರ ಚಿಕುನ್‌ಗುನ್ಯಾ ಕನ್‌ಫರ್ಮ್ ಆಗಿಲ್ಲ ಎಂದೇ ಹೇಳುತ್ತಿತ್ತು. ಸರ್ಕಾರಿ ಆಸ್ಪತ್ರೆಗಳಿಗೆ ಸರಾಸರಿ ಸಾವಿರಕ್ಕೂ ಹೆಚ್ಚು ಜನ ಪ್ರತಿದಿನ ತೆವಳಿಕೊಂಡು ಹೋದರೂ, ಆರೋಗ್ಯ ಇಲಾಖೆ ಮಾತ್ರ "ಆರು ಸಾವಿರದ ಏಳುನೂರ ಅರವತ್ತ ಮೂರು ಪ್ರಕರಣಗಳಲ್ಲಿ ಆರು ಮಾತ್ರ ಚಿಕುನ್‌ಗುನ್ಯ ಎಂದು ಸಾಬೀತಾಗಿದೆ" ಎಂದೆಲ್ಲಾ ಹಾಸ್ಯಾಸ್ಪದ ಹೇಳಿಕೆ ಕೊಟ್ಟು ನಮ್ಮ ಬೇನೆಯ ಮೇಲೆ ಬರೆ ಎಳೆಯುತ್ತಿತ್ತು.

ಪಾದಪೂರ್ತಿ ಊರಲಾರದೇ, ಕುಂಟು ನಡಿಗೆಯಲ್ಲಿ ನೂರಾರು ಮಂದಿ ನಡೆಯುವುದನ್ನು ನೀವು ಕಂಡರೆ ಹೇಗಿರುತ್ತದೆ? "ಎಲ್ಲರ ಕಾಲಿಗೆ ಒಂದು ಜೊತೆ ಗೆಜ್ಜೆ ಕಟ್ಟಿದರೆ, ಥಕ್ಕ ಥೈ, ಥಕ್ಕ ಥೈ ಅನ್ನುವ ಕುಂಟು ನಡಿಗೆ ಸೌಂಡ್ ಕೇಳಲು ಚೆಂದ..." ಎಂದು ನನ್ನ ದೊಡ್ಡಪ್ಪನ ಮಗ ಹೇಳಿ, ಸ್ವತಃ ನೋವಲ್ಲಿ ಮುಖ ಕಿವುಚಿಕೊಂಡು ಗೆಜ್ಜೆ ಕಟ್ಟಲು ಅಣಿಯಾಗಿದ್ದ.

ವಯಸ್ಸಾದವರ ಪಾಡಂತೂ, ಛೀ... ನನ್ನ ಚಿಕ್ಕಪ್ಪನ ಕಾಲು ಅರ್ಧ ಮೈಲು ನಡೆದರೇ, ಆನೆಕಾಲಿನಂತೆ ಊದಿಕೊಳ್ಳುತ್ತಿತ್ತು. ಗಮನಿಸುತ್ತಾ ಹೋದರೆ, ಅರವತ್ತು ದಾಟಿದ ಎಲ್ಲರೂ ಹೀಗೆ ಕಾಲು ಊದಿಸಿಕೊಂಡು, ಕಣ್ಣಂಚಲ್ಲಿ ನೀರು ತುಂಬಿಕೊಂಡು, ಹಲ್ಲು ಕಚ್ಚಿ ನಡೆಯಲು ಪ್ರಯಾಸ ಪಡುವ ದೃಶ್ಯ ಕಣ್ಣು ಮನಸ್ಸಿಗೆ ಹಿಡಿದು ಹಿಂಸೆ ನೀಡತೊಡಗಿತ್ತು.

ರಾತ್ರಿ ಎದುರಾದವನು ದೆವ್ವವಾ ಎಂದು ಖಚಿತಪಡಿಸಿ ಕೊಳ್ಳಲು ಕಾಲು ನೋಡುವ ಪರಿಪಾಠ ಇತ್ತು. ಈಗ ಹಗಲೇ ಈ ಚಿಕುನ್‌ಗುನ್ಯಾ ದೆವ್ವ ಮೆಟ್ಟಿ ಕಾಲು ಊದಿಸಿಕೊಂಡವರನ್ನು ನೋಡುತ್ತಾ, ಕಾಲಯಾತನೆ ಮಾಡತೊಡಗಿದೆವು.

ಇದೆಲ್ಲಾ ತಿಂಗಳೊಳಗಿನ ಕತೆ, ಆರು ತಿಂಗಳಾದರೂ ನೋವು ಹಾಗೇ ಇರುತ್ತದಂತೆ ಎಂಬ ವರದಿ ಕೇಳಿದ್ದೇ, ಊರಿಗೆ ಊರೇ ತಲ್ಲಣಿಸಿತ್ತು. ಅಲ್ಲಿಂದ ಔಷಧಿ ಬೇಟೆ ಶುರುವಾಯಿತು. ಹೋಮಿಯೋಪತಿಯಲ್ಲಿ ಔಷಧಿ ಉಂಟಂತೆ ಎಂಬ ಪುಕಾರು ಮೊದಲು ಹುಟ್ಟಿತು. ಇಡೀ ಜಿಲ್ಲೆಯ ಯಾವೊಬ್ಬ ಹೋಮಿಯೋಪತಿ ವೈದ್ಯನ ಕ್ಲಿನಿಕ್ಕಲ್ಲೂ ಕಾಲಿಡಲು ತೆರಪಿಲ್ಲದಂತಾಯಿತು. ಈ ಮೊದಲು ದನ ಜಾನುವಾರು ಕಾಯಿಲೆಗಷ್ಟೇ ಹೋಮಿಯೋಪತಿ ನೆನಪಾಗುತ್ತಿದ್ದದು. ಈಗ ಚಿಕುನ್‌ಗುನ್ಯಾ ಬಾಧೆಗೆ...

ಹೀಗೆ ನಾನೂ ಹೋಮಿಯೋಪತಿ ಕ್ಲಿನಿಕ್ಕಿನಲ್ಲಿ ಕೂತಿದ್ದಾಗ, "ಡಾಕ್ಟ್ರೇ ನಿಜಕ್ಕೂ ಗುಣ ಕಾಣ್ತದಾ...?" ಎಂದು ಮುದುಕನೊಬ್ಬ ಕೇಳಿದಾಗ ನನಗೆ ಮೈ ಉರಿದು ಹೋಗಿತ್ತು. "ಹೌದಪ್ಪಾ, ನಮಗೆಲ್ಲಾ ಒಳಗೆ ಆ ಭಯ ಇದ್ದೇ ಇದೆ... ಆದರೆ ಹೀಗೆ ಸಾರ್ವಜನಿಕ ಧೈರ್ಯ ಕುಂದಿಸುವ ಹೇಳಿಕೆ ಕೊಡುವುದು ಸರಿಯಾ...?" ನನ್ನೊಂದಿಗೇ ಕೂತು ಪಾದ ಹಿಸುಕುತ್ತಿದ್ದ ನಮ್ಮೂರಿನ ಪುರೋಹಿತ ರೇಗಿ "ಅದಕ್ಕೇ ಭಗವಂತ ಗೀತೆಯಲ್ಲಿ 'ಸಂಶಯಾತ್ಮಾ ವಿನಶ್ಯತಿ...' ಅಂತ ಹೇಳಿದ್ದು" ಎಂದು ರೇಗಿದರು.

ಆ ಮುದುಕ ಅದಕ್ಕೇನು ಜಗ್ಗಲಿಲ್ಲ. "ಅಲ್ಲಾ ಭಟ್ರೇ, ಈ ಬೇನೆ ನಿಜ ಅಲ್ವಾ...?" ಎಂದು ನಮ್ಮ ಮೇಲೆ ಹಾವೆಸೆದು ಕೂತ.

ಒಂದಷ್ಟು ದಿನ ಕಳೆದ ಮೇಲೆ, ಹಾಜಪಳ್ಳದಲ್ಲಿ ಯಾರೋ ಬೇರು ಕಷಾಯ ಕೊಡ್ತಾರಂತೆ ಎಂಬ ಸು[...] ಬಂತು. ಸಮಸ್ತ ಮಂದಿ ತೆವಳುತ್ತಾ ಕುಂಟುತ್ತಾ ಅಲ್ಲಿಗ[...] ತೆರಳಿದರು. ಆದಾಗಿ, ಐದು ಬಗೆಯ ಎಲೆಯನ್ನು ಸ[...] ಪ್ರಮಾಣದಲ್ಲಿ ಬೆಳಗ್ಗೆ ಖಾಲಿ ಹೊಟ್ಟೆಗೆ ಹದಿನೈದು ದಿ[...] ತಿಂದರೆ ಬೇನೆ ಮಾಯವಾಗುತ್ತದೆ ಎಂಬು[...] ಜಾಹೀರಾಯಿತು.

ನಮ್ಮ ಮನೆಯಲ್ಲಿ ಸಂಪಿಗೆ ಮರಕ್ಕೆ ಬಂದನಿಕೆ [...] ಹಬ್ಬಿದ್ದ ಅಮೃತಬಳ್ಳಿಯ ಎಲೆಗಳು ಮೂರೇ ದಿ[...] ಖಾಲಿಯಾಯಿತು. 'ಕಹಿಬೇವಿನ ಗಿಡ ನಿಮ್ಮಲ್ಲುಂಟಾ...' ಎಂಬ ಬೆದರಿಕೆಗೆ, ಆಗಲೇ ಕಾಂಡಕೊರಕ ರೋಗ[...] ತುತ್ತಾಗಿ ಬಸವಳಿದಿದ್ದ ಗಿಡ, ಪೂರಾ ಸತ್ತೇ ಹೋಯಿತ[...]

"ಸದ್ಯ ಏನಾದ್ರೂ ಬರೆದ್ರಾ ಸುಬ್ರಾಯಣ್ಣಾ...?" ಎಂ[...] ಸುಬ್ರಾಯ ಚೊಕ್ಕಾಡಿಯವರಲ್ಲಿ ಕೇಳಿದ್ದಕ್ಕೆ ಅವರು "ಪೆ[...] ಹಿಡಿಯುವುದೇ ಕಷ್ಟ ಮಾರಾಯಾ," ಎಂ[...] ನಿಟ್ಟುಸಿರುಬಿಟ್ಟು, "ಆದರೆ, ಪುಟಗಟ್ಲೆ ರದ್ದಿ ಬರೆಯ[...] ಮಂದಿಗೆ ಬ್ರೇಕು ಬಿದ್ದರೆ ಅಷ್ಟೇ ಸಾಕು" ಎಂದರು[...] ಚಿಕುನ್‌ಗುನ್ಯಾದಿಂದ ಕನ್ನಡ ಸಾಹಿತ್ಯಕ್ಕೆ ಅನುಕೂ[...] ವಾಗಿರಲಿಕ್ಕೂ ಸಾಕು.

ಆದರೆ ಚೊಕ್ಕಾಡಿಯವರಿಗಿದ್ದ ಆತಂಕ ಬೇರೆಯ[...] "ಮಾರಾಯ, ನಮ್ಮಲ್ಲಿ ಇರೋದೇ ಇಬ್ಬರು ಕ್ಷೌರಿಕ[...] ಅವರಿಗೆ ಈ ಕಾಯಿಲೆ ಬಾರದಿದ್ರೆ ಸಾಕು ಅಂತ ಹ[...] ಹೊರು. ಇಲ್ಲದಿದ್ರೆ ಊರಿಗೆ ಊರೇ ತಲೆ ಕೆದರಿಕೊಂ[...] ಜೂಲು ನಾಯಿಗಳ ಥರ ಓಡಾಡಬೇಕಾಗುತ್ತೆ" ಎಂ[...] ವಿವರಿಸಿದರು.

ಕ್ಷೌರಕ್ಕೆಂದು ಕೂತಾಗ ನಾನು ಮಿಲಿಟರಿ ಕಟ್[...] ಆಜ್ಞಾಪಿಸಿದೆ. ನನ್ನ ಭಯ ಇದ್ದದ್ದು, ಚಕ್‌ಚಕ್‌ಚಕ್ ಅ[...] ನಿಮಿಷಕ್ಕೆ 120 ಆರ್‌ಪಿಎಂನಲ್ಲಿ ಕತ್ತರಿ ಆಡಿಸು[...] ಬೆರಳುಗಳು ನಿಧಾನವಾದರೆ, ತಲೆಯ ಗತಿಯೇ[...] ಎಂಬುದೇ. ಇದರಲ್ಲೂ ನಾನು ಏಕಾಂಗಿಯಾಗಿರಲಿ[...] ನೂರಕ್ಕೆ 90 ರಷ್ಟು ಜನ ಈ ಭಯದಲ್ಲೇ ಮಿಲಿ[...] ಕಟ್‌ಗೇ ಆಜ್ಞಾಪಿಸಿದ್ದರು.

ಚಿಕುನ್‌ಗುನ್ಯಾದ ಬೇನೆ ಎಂದಾದರೂ ಕಮ್ಮಿಯಾದೀ[...] ಎಂಬ ವಿಧಿವಾದದ ನಂಬಿಕೆಯಲ್ಲೇ ಸಾವಿರಾರು [...] ಕುಂಟುತ್ತಾ, ತೆವಳುತ್ತಾ, ಪಾದ ಹಿಸುಕುತ್ತಾ ದಿನ [...] ತೊಡಗಿದ್ದರು. ಪುಣ್ಯವಶಾತ್, ಗ್ರಾಮೀಣಲೋಕದ ಶಾ[...] ಗಳಾದ ಕೆಇಬಿ, ಫಾರೆಸ್ಟ್, ತಾಲೂಕಾಫೀಸುಗಳೆಲ್ಲಾ ಪಾ[...] ಕೇಳತೊಡಗಿ, ಆ ಸಂಕಷ್ಟದಲ್ಲಿ ಚಿಕುನ್‌ಗುನ್ಯಾದ [...] ಲೆಕ್ಕಕ್ಕೆ ಬರಲಿಲ್ಲ, ನಾನೂ ಈ ಬೇನೆಗೆ ಹೊಂದಿ ಕೊಂಡ[...] ಬಿಟ್ಟರೆ, ಬೇನೆ ಗುಣವಾದ ಭಾವನೆ ಬರಲೇ ಇಲ್ಲ.

"ಎಲ್ಲಿ ಹೋದ್ರೂ ಈಗಿಂದೀಗ ಆಗುವು[...] ಅಷ್ಟರಲ್ಲೇ, ಎಲ್ಲಾ ನಿಧಾನವೇ, ನಡಿಗೆ ನಿಧಾನ ಆ[...] ಆಗ್ತದೆ... ಹೇಗೋ ನಡೀಲಿ... ಸಾಯೋದಿಲ್ಲ ಮತ್ತಿನ್ನೇನು" ಎಂದು ಅಣ್ಣುಭೈರ ಹೇಳಿದ್ದೇ ಪರಮ ಸ್ಥೈರ್ಯದ ಮಾತು[...] ನನಗನ್ನಿಸಿದೆ.

ಆದರೆ ನನಗೆ ನಿಜಕ್ಕೂ ದುಃಖವಾದದ್ದು ನವವಿವಾ[...] ನೊಬ್ಬನ ಕತೆ ಕೇಳಿ. ಅವನ ದೋಸ್ತಿಯೊಬ್ಬ, "[...] ಹೇಳ್ತೀರಿ ಮಾರಾಯ್ರೋ, ಅವನ ಕತೆ, ಸವರೋದು ಮಾ[...] ಹಿಸುಕುವ ಮಾತೇ ಇಲ್ಲ..." ಎಂದು ನಕ್ಕಿದ್ದ.

ನಗುವ ವಿಷಯವೇ ಅದು?

ರ್ತಕರ ಸರಕಾರದಲ್ಲಿ ರೇಟಿಳಸೋರ್‍ಯಾರು ಅಂತ

ಶಾಡದ ಗಾಳಿಗೆ ಮತ್ತೆ ಕಾಳಮಾವ ಮತ್ತು ದುಪಟಗಳಿಂದ ಶರೀರವನ್ನು ಬಿಗಿದಿದ್ದರು. ದೊಗಲೆ ಸ್ವೆಟರ್ ಹಾಕಿದ್ದಳು. ಉಗ್ರಿ ಬಿಗಿದಿದ್ದ. ಮೋಡ ಕವಿದಿದ್ದರೂ ಮಳೆ ತುಂತುರಾಟ ನಡೆಸಿತ್ತು, ಅದನ್ನು ಕಂಡ

ದೇನಿಂಗೆ ಆಟ ಆಡ್ತ ಅದಲ್ಲಾ, ಇತ್ತಗೆ ಹುಯ್ಯಕ್ಕೂ ಇಲ್ಲ, ಸುಮ್ಮನಿರಕ್ಕೂ ಇಲ್ಲ ತ್ವವಂಗೆಯ" ಎಂದು ಸಿಡುಕಿದ.

ಮಲ್ನಾಡಲ್ಲಿ ಮಳಿಡಕಂಡದಂತೆ ಕಣೊ, ಅದ್ಕೆ ಊದಿಕಂಡದೆ" ಎಂದ ಉಗ್ರಿ.


ಲ್ಲಿಗೊ ಒಟ್ಟು ಹುಯ್ಲಿ ಬುಡಪ್ಪ, ಇಲ್ಲ ಕರಂಟೆ ಇರದಿಲವಂತೆ."

ಮ್ಮೂರು ಬಾಗಕ್ಕೆ ಮಳೆ ಹೂದ್ರು ದಿಲ್ಲ, ಹುಯ್ದೆ ಇದ್ರೂ ಕರಂಟರದಿಲ್ಲವಲ್ಲ ಎಂದಳು ಜುಮ್ಮಿ.

ವಮೊಗ್ಗದ ಕಡೆ ಯಾವಾಗ್ಲು ತದಂತೆ ಕಣೆ. ಅದೆ ಇಲ್ಲಿ ನೋಡು ಗ್ಯದೆ."

ಂಗರೆ ಶಿವಮೊಗ್ಗದ ಕಡೆ ಯಾವಾಗ್ಲು ಅನ್ನು?"

ಮತ್ತೆ. ಮುಖ್ಯಮಂತ್ರಿ ಅಲ್ಲಿಯೋನು. ಮಂತ್ರಿ ಈಸ್ಬುರಪ್ಪನೂ ಅದೇ



ಯೋನು. ಅದ್ಕೆ ಅಲ್ಲಿ ಯಾವಾಗ್ಲು ಸ್ತತಂತೆ."

ಂಗೆ ಬೇದ ಮಾಡಬಾರ್ದು ಕಂಡ್ಯ. ಈ ಏನಾರ ಆದ್ರೆ ಅದರಲ್ಲಿ ಯಲ್ಲಾರಿಗೂ ಬೇಕು" ಎಂದ ಕಾಳಮಾವ.

ಮಾತ ನೀನು ದೇವೇಗೌಡನಿಗೂ, ಮಕ್ಕಳಿಗೂ ಹೇಳಬೇಕಾಗಿತ್ತು ಕಣಮಾವ."

ವುರೇನು ಮಾಡಿದ್ರೂ?"

ದೇ ರೇವಣ್ಣ ಇಂಧನ ಸಚಿವಾಗಿದ್ದಾಗ ವಾಸ ಮಾಡೋ ಪದ್ಮನಾಭ ನಗರದಲ್ಲಿ ನ್ನು ಕರಂಟು ಇರಂಗೆ ನೋಡಿಕಂಡಿದ್ದ. ಯ್ಯ ಎಲ್ಲಾರ ಸಭೆ ಮಾಡ್ತಯಿದ್ರೆ, ಅಲ್ಲಿ ತಗಿರಿ ಅಂತ ಆಡ್ರು ಮಾಡಿದ್ದ, ಗೊತ್ತೆ?"

ತ ಕ್ಯಲಸ ಸರಿ ಅಂತ ನಾನೇಳ್ತಿನೇನ್ಲ, ತಪ್ಪು ಮಾಡಿದ್ರೂ ತಪ್ಪು, ಈಗಿವುರು ಮಾಡದು ತಪ್ಪು" ಎಂದ ಕಾಳಮಾವ.

"ಈ ನನಮಕ್ಕಳು ಮಾಡಿರೊ ಹಲ್ಕ ಕ್ಯಲಸದಿಂದ ದ್ಯಾವೇಗೌಡ ಕೈ ಮುರ ಕಂದಿದ್ದನಂತೆ" ಎಂದ ಸೀರ.

"ದ್ಯಾವೇಗೌಡ ಕೈ ಯಾಕ್ ಮುರಕಂಡ?" ಎಂದ ಕಾಳಮಾವ.

"ದ್ಯಾವೇಗೌಡ ಯರಡ ಮಾಡಕ್ಕೆ ಅಂತ ಎದ್ದೋಗಿದ್ನಂತೆ. ಅದೇ ಟೇಮಿಗೆ ಬಿಜೆಪಿ ಬಡ್ಡೆತ್ತವು ಕರಂಟ್ ತಗದರಂತೆ. ಅದ್ಕೆ ದ್ಯಾವೇಗೌಡ ಕಕ್ಸ್ ಮನೇಲಿ ಬಿದ್ದು ಕೈ ಮುರಕಂಡನಂತೆ" ಎಂದ ಸೀರ.

"ಮುರಕಂಡಿಲವಂತೆ ಕಣಮಾವ, ಕೈ ತರಕಂಡಿದ್ದತಂತೆ. ಅದಕವ್ರುನೇನು ಕೇರ್ ಮಾಡದೆ ಬ್ಯಾಂಡೇಜಾಯ್ಕಂಡು ಜೆಡಿಎಸ್ ಸಭೆಗೋದನಂತೆ ಗೊತ್ತೆ?" ಎಂದ ಉಗ್ರಿ.

"ಬ್ಯಾಂಡೇಜಾಯ್ಕಂಡು ಜೆಡಿಎಸ್ ಸಭೆಗ್ಯಾಕೋದ ಗೊತ್ತೇನೊ ಉಗ್ರಿ?" ಎಂದುಕೊಂಡು ವಾಟಿಸ್ಸೆ ಬಂದ.

"ಹೇಳಪ್ಪ ನೀನೆಯ."


"ದ್ಯಾವೇಗೌಡ್ರಿಗೆ ಬ್ಯಾಂಡೇಜು ಕಣ್ಣೀರು ಭಾಳ ಸ್ಫೂರ್ತಿ ಕೊಡ್ತವೆ ಕಣೊ. ನೋಡಿದ ಕಾರ್ಯಕರ್ತರು 'ಪಾಪ ಗೌಡ್ರು ನಮಿಗೋಸ್ಕರ ಕೈ ಮುರಕಂಡಿದ್ರೂ ಕೇರ್ ಮಾಡದಂಗೆ ಪಾರ್ಟಿ ಕಟ್ಟಕ್ಕೆ ಬಂದವುರೆ' ಅಂತ ತಿಳಕೊಂಡು ಕುಮಾರಣ್ಣ ರೇವಣ್ಣನಿಗಾಗಿ ದುಡಿಲಿ ಅಂತ ಅವುನ ಪ್ಲಾನು" ಎಂದ ವಾಟಿಸ್ಸೆ.

"ಏನಾರ ಒಂದು ಕೀಡೆ ಮಾತಾಡದೆ ಇದ್ರೆ ನಿನಿಗೆ ತಿಂದಿದ್ದು ಅರಗದಿಲ್ಲ ಕಂಡ್ಯ" ಎಂದಳು ಜುಮ್ಮಿ.

"ಇರೋ ವಿಷಯ ಹೇಳಿದೆ ಕಣಕ್ಕ. ಇಂತ ಆಶಾಡದಲ್ಲಿ ದೇವೇಗೌಡ್ರು ಮುಕಮುಂದಾಗಿ ಬಿದ್ದವುರೆ ಅಂದ್ರೆ ಇನ್ನವುರು ಚೇತರಿಸಿಗಳದು ಕಷ್ಟ ಕಣಕ್ಕ. ನೋಡಾಗ್ಲೆ ಕೈಹಿಡಿದ ದೇವರ್‍ಯಲ್ಲ ಕೈ ಬುಡತಾ ಅವೆ."

"ಆ ದೇವುರು ನಿನ್ನತ್ರ ಹೇಳಕ್ಕೆ ಬಂದಿದ್ವೆ?"

"ನೋಡಕ್ಕ, ಗೌಡ್ರು ರೇವಣ್ಣನ ಜೊತೆ ಹೋಗಿ ಮನಿ ದೇವರ ಪೂಜೆ ಮಾಡಿಸಿದ್ರು. ಪೂಜೆ ತಟ್ಟೆಲಿ ಒಂದು ಕವರಿತ್ತಂತೆ. ನನ್ನ ಊಹೆ ಪ್ರಕಾರ ಆ ಕವುರ್‍ಲಿ ರೇವಣ್ಣನ ಕೆಎಂಎಫ್ ಅಧ್ಯಕ್ಷಗಿರಿ ಅಂಗೇ ಇರಬೇಕು, ರೆಡ್ಡಿಗಳಿಗೇನಾರ ಆಗಬೇಕು ಅಂತ ಇತ್ತು, ಆದ್ರೆ ಹಾಲೊಕ್ಕೂಟದ ಚುನಾವಣೆಲಿ ರೆಡ್ಡಿ ಕಡಿಯೋರು ಗೆದ್ದವುರೆ. ದೇವೇಗೌಡ್ರು ಮಕಾಡೆ ಬಿದ್ದವುರೆ. ಇದರಿಂದ್ಲೆ ಗೊತ್ತಾಯ್ತುದೆ ಮನೆ ದೇವುರು ಕೈಬುಟ್ಟದೆ ಅಂತ."



"ಅವುತಾನೆ ಎಲ್ಲಿಗಂಟ ತಲಕಾದವುಲ?" ಎಂದ ಸೀರ.

"ರೇವಣ್ಣ ಏನಾರ ಆಗ್ಲಿ ಡೈರಿಯ ಚನ್ನಾಗಿ ನ್ಯಡಿಸಿಗಂಡೋಯ್ತಿದ್ದ" ಎಂದ ಉಗ್ರಿ.

"ಎಷ್ಟೇ ಆಗ್ಲಿ ಊರಲ್ಲಿದ್ದಾಗ ದನ ಮೇಸಿದ್ದೋನಲ್ಲವೇನೊ. ಯಾವಾಗ ಹುಲ್ಲಾಕಬೇಕು, ಯಾವಾಗ ನೀರು ಕುಡುಸಬೇಕು, ಹಾಲು ಕರಿಬೇಕು ಅನ್ನದು ಅವುನಿಗೆ ಚನ್ನಾಗಿ ಗೊತ್ತಿತ್ತು. ಅದ್ನೆ ಡೈರಿಗೂ ಮಾಡಿದ. ಚನ್ನಾಗಿ ನ್ಯಡಿತು. ಈಗ ಈ ರೆಡ್ಡಿ ನನಮಕ್ಕಳು ಏನು ಮಾಡ್ತರೊ ಏನೊ ನೋಡಬೇಕು" ಎಂದ ವಾಟಿಸ್ಸೆ.

"ನೋಡದೇನು, ಇದ್ದಬದ್ದ ದನನ್ಯಲ್ಲ ಹಡಗಿನಲ್ಲಿ ತುಂಬಿ ಕಳುಸ್ತರೆ."

"ಅದ್ಯಾಕ್ ಕಳುಸ್ತರ್ಲ?" ಎಂದ ಸೀರ.

"ಅವುರು ಏನು ಸಿಕ್ಕದ್ರು ಲಾರಿಗೆ ತುಂಬಿ ಹಡಗಿಗೆ ಕಳುಸ್ತರಂತೆ ಕಣಮಾವ. ಕಲ್ಲು ಮಣ್ಣನೆ ಲೋಡು ಮಾಡಿ ಕಳುಸೋರು ಇನ್ನು ದನ ಬುಟ್ಟರೆ?"

"ಮಾಡಬಾರ್ದ ಮಾಡಿದ್ರೆ ಆಗಬಾರದ್ದಾಯ್ತದೆ ಅನ್ನಕ್ಕೆ ಇದೇ ಉದಾರಣೆ ಕಣೊ ಉಗ್ರಿ. ಆ ರೆಡ್ಡಿ ಬಡ್ಡೆತ್ತವು ಎಲ್ಲೊ ಇದ್ವೊ, ಅವುರ ಜೊತೆ ಅಧಿಕಾರ ಹಂಚಿಗಂಡ್ರು. ಇವತ್ತು ಅನುಭವುಸ್ತ ಅವುರೆ."

"ಅಯ್ಯೋ ಯಾರೇನಾರ ಅನುಭವುಸ್ಲಿ, ನಮ್ಮ ಕತೆ ಹೇಳ್ರ?" ಎಂದಳು ಜುಮ್ಮಿ.

"ನಿನಿಗೇನಾಗ್ಯದಕ್ಕ, ಚನ್ನಾಗೇ ಇದ್ದಿ."

"ಅಯ್ಯೋ ಮನಿಗೆ ನಂಟ್ರು ಬಂದವುರೆ ಅಂತ ಅಕ್ಕಿನು ಬ್ಯಾಳೆನು ತರಕ್ಯೋಗಿದ್ದೆ ಕಂಡ್ಯ. ಅಕ್ಕಿ ಮುವ್ವತ್ತೆಂಟು ರೂಪಾಯಿ ಕೆ.ಜಿ., ಬ್ಯಾಳೆ ತೊಂಬತ್ತು ರೂಪಾಯಾಗ್ಯದಲ್ಲ, ಯಂಗ್ಲ ಕಾಲ ಮಾಡದು?" ಎಂದಳು ಜುಮ್ಮಿ.

"ನೋಡಕ್ಕ ನಾವು ರೈತಾಪಿ ಜನಗಳಾಗಿ ಬೇಳೆಕೊಳ್ಳಕ್ಕೆ ಹೋಗಬಾರ್ದು. ಇಟೀಸ್ ಶೇಂ ಟು ಅವರ್ ಪಾರಮರ್ ಕಮ್ಯುನಿಟಿ. ಅವುರೆ ಕಾಳ ಬೆಳದು ಮೂಟೆ ಕಟ್ಟಿಗಂಡು ಮಡಿಕಂಡಿರಬೇಕು. ಇನ್ನ ದೊಡ್ಡಿಬತ್ತ ಬೆಳದು ತುಂಬಿಕೊಂಡಿರಬೇಕು. ಆಗ ನಾವು ಇಂತ ರೇಟನ್ಯಲ್ಲ ಎದುರುಸಬವುದು" ಎಂದ ವಾಟಿಸ್ಸೆ.

"ಅಕ್ಕಿ ಬ್ಯಾಳೆ ರೇಟು ಹೇಳಿಕಂಡು ಬಿಜೆಪಿಗೆ ಓಟು ಕೇಳತಿದ್ದಲ್ಲ, ಅವುಳ್ಯತ್ತಗೋದ್ಲು?"

"ಯಾರಕ್ಕ ಅವುಳು?"

"ಅವುಳ್ಯಾರೊ ನ್ಯಲದಲ್ಲೇ ಉಂಟ್ಯಾಡತಿದ್ಲು ನೋಡು ಮಟ್ಟೆಕೋಳಿಯಂಗೆ, ಅವುಳು ಕಂಡ್ಯ."

"ಓಹೊ ಸುಸುಮಸ್ವರಾಜು, ಅವುಳದಷ್ಟೆ ಕಣಕ್ಕ ಮುಗಿತು. ಗಣಿ ರೆಡ್ಡಿಗಳು ಬೇಕಾದೋಟು ದುಡ್ಡು ಕೊಟ್ರಂತೆ. ಅದ ಮಡಿಕಂಡು ಕಾಲುಮ್ಯಾಲೆ ಕಾಲಾಯ್ಕಂಡು ಡೆಲ್ಲಿಲಿ ಕುಂತವುಳೆ."

"ಅವುಳು ಕಾಲುಮ್ಯಾಲೆ ಕಾಲಾಕಕೆಲ್ಲಾಯ್ತದೊ? ಅಂಗೆ ಬಸ್ಟಾಂಡಲ್ಲಿ ತಿರುಗಾಡೊ ಬುಡ್ಡಸಿನಂಗವುಳೆ. ಬಳ್ಳಾರಿಗೆ ಬಂದ್ಲು ಕಾಸು ಮಾಡಿಕಂಡ್ಲು ಹೋದ್ಲು. ಈಗಕ್ಕಿ ರೇಟಿಗೂ, ಬ್ಯಾಳೆ ರೇಟಿಗೂ, ಅವುಳಿಗೂ ಯಾವ ಸಮುಂಧನೂ ಇಲ್ಲ, ತಿಳಕ."

"ಅಂಗೇ ನೋಡಿದ್ರೆ ಈಗೇರಿರೊ ರೇಟಿಗೂ ಬಿಜೆಪಿಗಳಿಗೂ ಯಾವ ಸಮುಂಧನೂ ಇಲ್ಲ ಕಣೊ ಉಗ್ರಿ. ಹೇಳಿಕೇಳಿ ಬಿಜೆಪಿಗಳು ಮದ್ಲಿಂದ ಸೇಠಾಗಿದ್ದೋರು. ಅದರಲ್ಲೂ ಬಿಜೆಪಿ ಪಾರ್ಟಿಲಿ ಇರೋರ್‍ಯಲ್ಲ ವರ್ತಕರು. ಅಕ್ಕಿ, ಬ್ಯಾಳೆ, ಯಣ್ಣೆ ಮಾರೋರ್‍ಯಲ್ಲ ಅವುರೆಯ. ಅಂತದ್ರಲ್ಲಿ ರೇಟಳಸಯ್ಯ ಅಂತ ಜನಸಾಮಾನ್ಯರು ಎದುರಪ್ಪನ್ನ ಕೇಳಕ್ಯಾದತೆ?"

"ಅಂಗಂತಿಯಾ?!" ■




ದಿವಂಗತ ಶ್ರೀಕಂಠಯ್ಯ

ಮೊನ್ನೆ ಒಬ್ಬರು ಪತ್ರಕರ್ತರು ತೀರಿಕೊಂಡರು. ಸತ್ತವರ ಬಗ್ಗೆ ಕೆಟ್ಟದು ಬರೆಯಲು ಅಳುಕಾಗುತ್ತದೆಯಾದರೂ ಇದನ್ನು ಬರೆಯಲೇಬೇಕು. ಇಂಥ ಸಂಗತಿಗಳು ನಡೆಯುತ್ತಲೇ ಇರುತ್ತವೆ. ಸತ್ತವರ ಹೆಸರು ಶ್ರೀಕಂಠಯ್ಯ. ಇವರ ಅನುಯಾಯಿಗಳ ಪ್ರಕಾರ ಈತ "ಪ್ರಖ್ಯಾತ" ಪತ್ರಕರ್ತ. ಈತ ನಡೆಸುತ್ತಿದ್ದರೆನ್ನಲಾದ ಪತ್ರಿಕೆಗಳ ಹೆಸರು 'ಫೆಡರಲ್ ಇಂಡಿಯಾ' ಮತ್ತು 'ಇಂಡಿಯನ್ ಸ್ಟೇಟ್.' ಇವರನ್ನು ನಾನಾಗಲಿ ನನ್ನ ಗೆಳೆಯರಾಗಲಿ ನೋಡಿರಲಿಲ್ಲ; ಇವರ ಪತ್ರಿಕೆಗಳನ್ನು ಓದುವ ಮಾತು ದೂರವೇ ಆಯಿತು. ಆದರೆ ಂಠಯ್ಯ ಮೊನ್ನೆ ತಾನೆ ವಿಧಾನಪರಿಷತ್ತಿನ ಸದಸ್ಯರಾಗಿದ್ದರು. ಅದು ಅರಸು ಕಾಲದಲ್ಲಿ.

ರಾಜ ಅರಸು ಎಂಥ ಪ್ರಶಂಸಾಪ್ರಿಯರು ಮತ್ತು ವಿಚಿತ್ರ ರೀತಿಯ ಪಾಳೇಗಾರರು ಅಂದರೆ ಶ್ರೀಕಂಠಯ್ಯನವರ ಮಾತಿಗೆ ಮರುಳಾದರು. ಒಂದು ಸುದ್ದಿಯ ಪ್ರಕಾರ ಶ್ರೀಕಂಠಯ್ಯ ಲಕ್ಷ್ಮಿಯ ಪೂಜೆ ಮಾಡಿ ಅರಸು ಅವರನ್ನು ಆಹ್ವಾನಿಸಿ ಅವರನ್ನು ಬಾಯಿತುಂಬ ಹೊಗಳಿ ರು ಪ್ರಮಾಣ ಮಾಡಿಸಿಕೊಂಡು ಶಾಸಕರಾದರು. ಅರಸರನ್ನು ಅಷ್ಟಿಷ್ಟು ಬಲ್ಲ ನಾನು ಇದನ್ನು ಮೊನ್ನೆ ಶ್ರೀಕಂಠಯ್ಯ ಮುದಿದಾಗ ಅವರ ಮಗ ಅಳುಮೋರೆ ಹಾಕಿಕೊಂಡು ಬಂದು, ಂಕೇಶರನ್ನ ನೋಡಬೇಕು ಕಣೋ-ನೋಡಬೇಕು ಕಣೋ ಅಂತಾನೇ ಇದ್ರು ಸಾರ್-ಹೋಗಿಬಿಟ್ರು!" ಅಧಿಸಯ ಚತುರ. ಈ ಬಗ್ಗೆ ವಿಚಾರಿಸಲಾಗಿ ಆ ಮಗರಾಯ ಅಪ್ಪನ ಸಂಸ್ಕಾರಕ್ಕೆ ಕೂಡ ಲ್ಲ!

ಟ್ಟು ಕ್ಷಮಿಸಿ-ಈ ಶ್ರೀಕಂಠಯ್ಯನವರ ಕತೆ ನಮ್ಮ ರಾಜಕಾರಣಿಗಳ ಗುಣದೊಂದಿಗೆ ಂದಿರುವುದರಿಂದ ಮಾತ್ರ ಪೋಲಿಸದನ್ನ ಬರೆದಿದ್ದೇನೆ. ಇಲ್ಲಿ ಭಟ್ಟಂಗಿತನ ಮತ್ತು ಸಿನಿಕತನ ಏನೆಲ್ಲ ವೆ!





"ಬಳೆ ತೊಟ್ಟುಕೊಂಡಿಲ್ಲ!"

ಈ ಚಂದ್ರೇಗೌಡರ ಬಗ್ಗೆ ಬರೆಯುತ್ತಿರುವಾಗಲೇ ಇಷ್ಟೇ ಹಾಸ್ಯಾಸ್ಪದ ವ್ಯಕ್ತಿಗಳಾಗಿರುವವರ ಬಗ್ಗೆ ಬರೆಯಬೇಕು. ಈಗ ತಿರುವಳ್ಳುವರ್ ಸುದ್ದಿಯಲ್ಲಿದ್ದಾರೆ. ಕನ್ನಡ-ತಮಿಳು ಸಂಘದ ಎದುರು ಈ ಮಹಾಕವಿಯ ಪ್ರತಿಮೆ ನಿಲ್ಲಿಸಿದರೂ, ನಿಲ್ಲಿಸದಿದ್ದರೂ ನನಗಂತೂ ವ್ಯಥೆಯಿಲ್ಲ. ಇದರ ಬಗ್ಗೆ ವೃಥಾ ಗದ್ದಲ ನಮ್ಮ ಕನ್ನಡಪ್ರೇಮ ತೋರುವುದೆಂದು ನನಗನ್ನಿಸುವುದಿಲ್ಲ. ಕನ್ನಡ ಈಗ ಮಾರ್ಕೆಟ್, ಆಸ್ಪತ್ರೆ, ವಿಧಾನಸೌಧ, ಕಾರ್ಖಾನೆ- ಎಲ್ಲದರ ಸವಾಲೆತ್ತಿಕೊಂಡು ಬೆಳೆಯಬೇಕಾಗಿದೆ. ಸರ್ಕಾರ ಮೊದಲು ಶಿಕ್ಷಣದ ಬಗ್ಗೆ ಗಮನ ಕೊಡಬೇಕಾಗಿದೆ. ಜನರ ಆರೋಗ್ಯ, ಶಿಕ್ಷಣವನ್ನು ಖಾಸಗಿಯವರಿಗೆ ಒಪ್ಪಿಸಿ ಇಲ್ಲಿ ಕನ್ನಡ ಬೆಳೆಸುವುದು ಕಷ್ಟ. ಹೀಗೇ ಆದರೆ ಇದ್ದಕ್ಕಿದ್ದಂತೆ ಯುವ ಜನಾಂಗ ಕನ್ನಡದಿಂದ ದೂರವಾದ ಸ್ಥಿತಿ ನೋಡಲಿದ್ದೇವೆ.

ಅದಿರಲಿ. ಮೊನ್ನೆ ತಿರುವಳ್ಳುವರ್ ಪ್ರತಿಮೆಯ ವಿರುದ್ಧ ಒಂದು ಸಭೆ. ಅಲ್ಲಿ ಮಿಂಚುತ್ತಿದ್ದವರು ಒಬ್ಬರು ಲಲಿತಾನಾಯಕ್. ಕ್ರಮೇಣ ಯೋಚಿಸುವುದನ್ನೇ ಬಿಡುತ್ತಿರುವ ಈ ಹೆಣ್ಣುಮಗಳು "ಕನ್ನಡಿಗರೆಲ್ಲ ಹೇಡಿಗಳಲ್ಲ, ನಾವೆಲ್ಲ ವೀರಾವೇಶದಿಂದ ಹೋರಾಡುತ್ತೇವೆ. ಪ್ರತಿಮೆ ಸ್ಥಾಪಿಸಲು ಬಿಡುವುದಿಲ್ಲ" ಎಂದು ಝಾನ್ಸಿ ರಾಣಿಯ ವರಸೆಯಲ್ಲಿ ಮಾತಾಡಿದಳು. ಯೋಚನೆ ಕಡಿಮೆಯಾದಷ್ಟೂ ಭಾಷಣದ ಗದ್ದಲ ಹೆಚ್ಚು. ಈಕೆ ಮಾತಾಡಿದ ತರುವಾಯ ಭಾಷಣ ಮಾಡಿದ ನಾರಾಯಣ ಕುಮಾರ್ ಲಲಿತಾ ನಾಯಕ್ ಹೆಣ್ಣೆಂಬುದನ್ನೇ ಮರೆತು, "ಕನ್ನಡಿಗರು ಬಳೆ ತೊಟ್ಟುಕೊಂಡಿಲ್ಲ, ಸೀರೆ ಉಟ್ಟುಕೊಂಡಿಲ್ಲ-ನಾವು ಉಗ್ರವಾಗಿ ಪ್ರತಿಭಟಿಸುತ್ತೇವೆ" ವಗ್ಯೆರೆ ಮಾತಾಡಿದರು.

ಇಲ್ಲಿಯ ತಮಾಷೆ ನಿಮಗೆ ಅರ್ಥವಾದೀತು.

-ಸೆಪ್ಟೆಂಬರ್ 22, 1991


ಜನಸಂಖ್ಯಾ ನಿಯಂತ್ರಣಕ್ಕೆ ಆಜಾದ್ ಬಾಣ

ಜನಸಂಖ್ಯೆ ಸ್ಫೋಟಗೊಳ್ಳುತ್ತಿದೆ. ಯಾರೂ ಸಾಯಲು ಸಿದ್ಧರಿಲ್ಲ! ಯುವಕರು ಹಾಗಿರಲಿ, ಮುದಿಯರಾದವರಾದರೂ ತಯಾರಿದ್ದಾರಾ ಅಂದರೆ ಅವರೂ ಸಾಯ್ತಾನೆ ಇಲ್ಲ. ಒಂದು ಕಾಲ ಇತ್ತು, ಅದು ಪುಣ್ಯವಂತರಿದ್ದ ಕಾಲ. ನಲವತ್ತು ಐವತ್ತು ವರ್ಷಗಳಿಗೆಲ್ಲ ಶಿವನ ಪಾದ ಸೇರುತ್ತಿದ್ದರು. ಈಗ ನೋಡಿದರೆ ಎಪ್ಪತ್ತು ಎಂಭತ್ತು ಆದರೂ ಟಗರೆಮರಿ ತರಹ ಆಡ್ತಾ ಬಿದ್ದವರೆ. ಇದೇ ಪರಿಸ್ಥಿತಿ ಮುಂದುವರೆದರೆ 'ಯುವ ಭಾರತ' 'ಮುದಿ ಭಾರತ' ಆಗುತ್ತೆ ಅಷ್ಟೆ.

ವಯಸ್ಸು ಮೀರಿದರೂ ಆಯುಸ್ಸು ಮೀರಿಲ್ಲ ಅನ್ನುವವರ ಕತೆ ಇದಾದರೆ ಹದಿಹರೆಯದವರದ್ದೇ ಇನ್ನೊಂದು ರೀತಿ. ಮೋಹನದಾಸ ಕರಮಚಂದಗಾಂಧಿ ಮಹಾತ್ಮ ಅಲ್ವಾ. 'ಸಂತಾನಕ್ಕಾಗಿ ಸಂಭೋಗ' ಅನ್ನೋ ಮಂತ್ರ ಜಪಿಸಿದರು. ಆದರೆ ಜನ 'ಮಹಾತ್ಮ' ಅಲ್ವಲ್ಲ. 'ಸಂತೋಷಕ್ಕಾಗಿ ಸಂಭೋಗ' ಅನ್ನುತ್ತಿವೆ. ಈ ಮಹಾತ್ಮನ ಮಾತಿಗಿಂತ ಆಚಾರ್ಯ ಗಿರಿಜಾ ಕಿಶೋರ್ ಹೇಳಿದ ಮಾತು ಇದೆಯಲ್ಲಾ- 'ಮಕ್ಕಳನ್ನು ಹುಟ್ಟಿಸಿ ಹಿಂದೂತ್ವ ಉಳಿಸಿ' -ಇದೇ ಆಪ್ಯಾಯಮಾನವಾಗಿರುವಂತಿದೆ. ಈಪಾಟ ಏರುತ್ತಿರುವ ಜನಸಂಖ್ಯೆ ನೋಡಿದರೆ ಎಲ್ಲಾ ಧರ್ಮದವರಿಗೂ ಆಚಾರ್ಯರ ಮಾತು ವೇದವಾಕ್ಯದಂತಿದೆ! ಯಾಕೆಂದರೆ ಧರ್ಮವನ್ನೂ ಉಳಿಸಿ, ಸಂತೋಷವನ್ನೂ ಪಡುವ ಮಾರ್ಗವಲ್ಲವೇ ಅದು!

▶▶ ಎಚ್.ಎಲ್. ಕೇಶವಮೂರ್ತಿ

ಈ ಧರ್ಮ ಉಳಿಸುವ ಸಂತೋಷದಿಂದ ವಂಚಿತರಾದವರು ಐಟಿ, ಬಿಟಿಯವರು ಅನ್ನಿಸುತ್ತೆ. ಅಲ್ಲಿ ಕೆಲಸ ಮಾಡೋವ್ರೆ ತಿಗ ಹರಿಯ ಕೆಲ್ಸ ಇರ್ತದಂತೆ. ಎಷ್ಟು ಬೇಗ ದಿಂಬಿಗೆ ತಲೆ ಕೊಟ್ಟೇನೋ ಅನ್ನಿಸುತ್ತಂತೆ. ಸಾಲದ್ದಕ್ಕೆ ಆ ಕೆಲಸ ಆಗಿಲ್ಲ, ಈ ಫೈಲು ನೋಡಿಲ್ಲ ಅನ್ನುವ ಮಾನಸಿಕ ಒತ್ತಡ ಬೇರೆ ಇರ್ತದಂತೆ. ಹಿಂಗಾಗಿ ಅವರಿಗೆ ಲೈಂಗಿಕ ಆಸಕ್ತೀನೆ ಹಿಂಗೆ ಹೋಗಿರುತ್ತಂತೆ. ಈ ಸಲದ ಬಜೆಟ್‌ನಲ್ಲಿ ಐಟಿ, ಬಿಟಿಯವರಿಗೆ ಸರ್ಕಾರ ವಿಶೇಷ ರಿಯಾಯಿತಿ ತೋರ್‍ಸಿರೋದು ಜನಸಂಖ್ಯೆ ನಿಯಂತ್ರಣಕ್ಕೇ ಇರಬಹುದು!



ಸಲಿಂಗ ರತಿ ಶಿಕ್ಷಾರ್ಹ ಅಪರಾಧ ಅಲ್ಲ ಅಂತ ದೆಹಲಿ ಹೈಕೋರ್ಟ್ ತೀರ್ಪು ನೀಡಿದೆಯಂತಲ್ಲಾ, ಪೇಜಾವರ ಶ್ರೀಗಳಿಗೆ 'ಸಲಿಂಗರತಿ' ಅನ್ನೋದಕ್ಕೆ ಅಸಹ್ಯ ಆಗುವುದಂತೆ (ಮಠಗಳಲ್ಲಿನ ತಮ್ಮ ಕೆಲವು ಶಿಷ್ಯರು ಬಳಸುತ್ತಿರುವ ಮಾರ್ಗವನ್ನೇ ಜನಸಾಮಾನ್ಯರೂ ಹಿಡಿದಾರು ಎಂಬ ಭಯ ಇರಬೇಕು!). ಅವರ ಜೊತೆಗೆ ಇತರೆ ಧರ್ಮದ ನಾಯಕರೂ ದನಿಗೂಡಿಸಿದ್ದಾರೆ. ಇದರಲ್ಲಾದರೂ ಏಕತೆಯ ಸುಖ ಅನುಭವಿಸುತ್ತಿದ್ದಾರಲ್ಲ! 'ಸಲಿಂಗರತಿ'ಯ ಮಹಿಮೆಯೇ ಇರಬೇಕು! ಎಲ್ಲರೂ ಕಾಮದೇವನನ್ನು ತಣಿಸಲು ತಮ್ಮ ಲಿಂಗದವರನ್ನೇ ಬಳಸಿಕೊಂಡರೆ ಜನಸಂಖ್ಯಾ ನಿಯಂತ್ರಣ ಆಗಬಹುದಾ ಅಂತ!

ಇನ್ನೇನು ಮತ್ತೆ, 1987 ರ ಜುಲೈ 11 ರಂದು ವಿಶ್ವಜನಸಂಖ್ಯೆ ಐನೂರು ಕೋಟಿ ಆದಾಗ ಅಪಾಯದ ಅಂಚಿನಲ್ಲಿದ್ದೇವೆ, ಜನಸಂಖ್ಯೆಯನ್ನು ಕಟ್ಟುನಿಟ್ಟಾಗಿ ನಿಯಂತ್ರಿಸದಿದ್ದರೆ ಅಪಾಯ ತಪ್ಪಿದ್ದಲ್ಲ ಅನ್ನುವುದನ್ನ ನೆನಪಿಸೋಕೆ ಪ್ರತಿ ವರ್ಷ ಅದನ್ನ 'ವಿಶ್ವ ಜನಸಂಖ್ಯಾ ದಿನ' ಅಂತ ಆಚರಿಸಲಾಗುತ್ತಿದೆ. ಇದನ್ನ ಜನ 'ವಿಜಯೋತ್ಸವ' ಅಂತ ತಿಳಿದುಕೊಂಡು 'ಸಂತಾನೋತ್ಸವ'ವನ್ನ ಭರ್ಜರಿಯಾಗಿ ಮಾಡ್ತಿದಾರೆ! 1951 ರಲ್ಲಿ 259 ಕೋಟಿ ಇದ್ದದ್ದು ಈಗ 675 ಕೋಟಿಗೇರಿದೆ. ಇದನ್ನ ಆದಷ್ಟು ಬೇಗ ಸಾವಿರ ಕೋಟಿಗೆ ಏರಿಸಲೇಬೇಕು ಎಂದು ಯುವ ಜನತೆ ಪಣತೊಟ್ಟಿರುವಂತಿದೆ. ಮುದಿಯರೂ ಇದಕ್ಕೆ ತಮ್ಮ ಅಳಿಲು ಸೇವೆ ಮಾಡ್ತಿದಾರೆ ಅನ್ನಿ!

ಇಂತಹ ಬೆಳವಣಿಗೆಗಳಿಂದ ಕೇಂದ್ರ ಆರೋಗ್ಯ ಮಂತ್ರಿ ಗುಲಾಂ ನಬಿ ಆಜಾದ್ ಅವರ ತಲೆ ಗಬ್ಬೆದ್ದುಹೋಗಿದೆಯಂತೆ. ಇಂತಹ ತಲೆ ಒಳಗಿನ ಮೆದುಳಿನಿಂದ ಯೋಚಿಸಿ ಜನಸಂಖ್ಯಾ ನಿಯಂತ್ರಣಕ್ಕೆ ಒಂದು ಅದ್ಭುತ ಸಲಹೆಯನ್ನು ನೀಡಿದ್ದಾರೆ.

ಏನದು ಸಲಹೆ?

ಜನಸಂಖ್ಯಾ ನಿಯಂತ್ರಣಕ್ಕೆ ರಾಮಬಾಣ!

ರಾಮಬಾಣ ಹಾಗಿರಲಿ ಆಜಾದ್ ಬಾಣ ಹೇಳಿ.

ಹಳ್ಳಿಯ ಪ್ರತಿ ಮನೆಗೂ ಟಿವಿ ಕೊಡಿ.

ಟಿವಿ ಚಾಲೂ ಮಾಡಲು ವಿದ್ಯುತ್ ಬೇಕಲ್ಲ?

ನಿರಂತರ ವಿದ್ಯುತ್ ಸರಬರಾಜು ಮಾಡಿ!

(ವಿದ್ಯುತ್ ಮಂತ್ರಿ ಈಶ್ವರಪ್ಪ 'ಲೋಡ್ ಶೆಡ್ಡಿಂಗ್ ಇಲ್ಲ' ಅನ್ನುವ ತರಹ ಕೇಳಿಸುತ್ತಿದೆಯಲ್ಲ!)

ಆಮೇಲೆ ಏನಾಗುತ್ತೆ?

ಹಿಂದೆ ಏನು ಮಾಡುತ್ತಿದ್ದರು? ಮನರಂಜನೆಗೆ ಅವಕಾಶ ಇರಲಿಲ್ಲ. ಗಂಡ ಹೆಂಡತಿ ಉಂಡು ಮಲಗಿ 'ಮನರಂಜನೆ' ಪಡೀತಿದ್ದರು! ಮಕ್ಕಳು ಹುಟ್ಟುತ್ತಲೇ ಇದ್ದವು. ಈಗ ಹಾಗಿಲ್ಲ, ಟಿವಿ ನೋಡ್ತಾ ಕೂರ್‍ತಾರೆ!

ಅನಂತರ?

ಆಯಾಸವಾಗಿರುತ್ತೆ, ತೆಪ್ಪಗೆ ಬಿದ್ಕೊತಾರೆ!

(ಒಂದು ಗುಮಾನಿ. ಎಫ್‌ಟಿವಿ, ಎಂಟಿವಿ ಇಂತಹ ಚಾನೆಲ್ ನೋಡಿದಾಗ 'ಡಾರ್ಕ್ ಷೋ' ಬದಲು 'ಲೈಟ್ ಷೋ'ನೆ ಇರಲಿ ಅನ್ನಿಸಲ್ವಾ....)

ಗಬ್ಬೆದ್ದ ಆಜಾದ್ ತಲೆ ಒಳಗಿನ ಗಬ್ಬೆದ್ದ ಮೆದುಳಿನ ಚಿಂತನೆ ಇಲ್ಲಿಗೇ ಕೊನೆಗೊಂಡಿಲ್ಲ, ತಲೆನೋವಿನ ಮಾತ್ರೆಯ ಜಾಹೀರಾತಿರುವ ಧಾರಾವಾಹಿಯಂತೆ ಮುಂದುವರೆದಿದೆ. ಅವರ ಚಿಂತನೆ ಹೇಳುತ್ತೆ: 'ಮುವ್ವತ್ತು ವರ್ಷದ ನಂತರ ವಿವಾಹವಾಗುವವರಿಗೆ ಸನ್ಮಾನಿಸಿ'

ಯಾಕೆ ಅವರಿಗೆ ಸನ್ಮಾನ?

ಹೆಚ್ಚು ಮಕ್ಕಳಾಗುವ ಸಾಧ್ಯತೆ ಕಡಿಮೆ!

ವಿವಾಹವಾಗದೇ ಇದ್ದರೆ, ಮಕ್ಕಳೇ ಆಗುವುದಿಲ್ಲ ಎಂದ ಹಾಗಾಯಿತು! ಕಾಮದೇವನ ಕಾಟ ಬಲವಾಗಿ ವಿವಾಹಕ್ಕೆ ಮೊದಲೇ ಬೇರೆ ಸಂಬಂಧ ಬೆಳೆಸಿದ್ದರೆ? ಅನಧಿಕೃತ ಮಕ್ಕಳು ಜನ ಅಲ್ಲ!

'ಅಮ್ಮನೋರು ಪಟ್ಟಕ್ಕೆ ಬರೋಕೆ ಮುಂಚೆ ಅಯ್ಯನೋರು ಚಟ್ಟಕ್ಕೇರಿದರು' ಅನ್ನೊ ಮಾತಿದೆ. ಮಕ್ಕಳು ವಯಸ್ಸಿಗೆ ಬರೋಕೆ ಮುಂಚೇನೆ ಯಜಮಾನ ಅನ್ನಿಸಿಕೊಂಡೋನು ಹರಹರ ಅನ್ನೊಲ್ವಾ ಅಂದಿರಾ.... ಈ ಮುದಿಯರು ಸಾಯೋದೆ ಇಲ್ಲ ಅನ್ನೋದು ಆರೋಗ್ಯ ಮಂತ್ರಿಗೆ ತಿಳಿದಿದೆ!

ಅಲ್ಲಾ ಇಳಿವಯಸ್ಸಿನಲ್ಲಿ ಸಂಸಾರದ ಜವಾಬ್ದಾರಿನೆಲ್ಲ ಹೊರಬೇಕಲ್ಲ ಅಂದ್ರೆ ಹೊರಬೇಕು, ಜೀವನಾನ ಸರಿಯಾಗಿ ಪ್ಲಾನ್ ಮಾಡಿಕೊಂಡಿಲ್ಲದ್ದಕ್ಕೆ ಶಿಕ್ಷೆ ಅನುಭವಿಸಬೇಕು!

ಇದರ ಬದಲು ಐದು ವರ್ಷ ಮುಂಚೇನೆ ಮದುವೆ ಆಗಿದ್ದಿದ್ದರೆ?

ಸನ್ಮಾನ ಇರುತ್ತಿರಲಿಲ್ಲ! ■

ಸೋಮಯಾಜಿಗೆ ವಿವಿ ಕಿರುಕುಳ

ಮಂಗಳೂರಿನ ಕ್ರಿಯಾಶೀಲ ಉಪನ್ಯಾಸಕ ಎಚ್. ಪಟ್ಟಾಭಿರಾಮ ಸೋಮಯಾಜಿ ಅವರು ಪಬ್ ದಾಳಿಗೆ ಸಂಬಂಧಿಸಿದಂತೆ ಹೇಳಿಕೆ ನೀಡಿದ್ದರಿಂದ ಈಗ ಮಂಗಳೂರು ವಿವಿ ಸೋಮಯಾಜಿ ಅವರನ್ನೇ ವಿಚಾರಣೆಗೆ ಗುರಿಮಾಡಿದೆ. ಅವರ ಮೇಲೆ ಹೊರಿಸಿರುವ ಆರೋಪಗಳೆಲ್ಲ ಕ್ಷುಲ್ಲಕವು, ಹಾಸ್ಯಾಸ್ಪದವೂ ಆಗಿದ್ದು ಸದರಿ ವಿಚಾರಣೆಯೂ ಅವರಿಗೆ ನೀಡುತ್ತಿರುವ ಹಿಂಸೆಯ ಮುಂದುವರಿಕೆಯೇ ಆಗಿದೆ. ಕರ್ನಾಟಕದ ಎಲ್ಲ ಶಿಕ್ಷಕರು ಮತ್ತು ಪ್ರಜ್ಞಾವಂತರು ಇದನ್ನು ವಿರೋಧಿಸಬೇಕಿದೆ.

ಸೋಮಯಾಜಿ ಅವರಿಗೆ ನೀಡಲಾಗಿರುವ ಆರೋಪ ಪಟ್ಟಿ ನೋಡಿದರೆ, ಯಾರದೋ ಕುಮ್ಮಕ್ಕು ಮತ್ತು ಒತ್ತಡಕ್ಕೊಳಗಾಗಿ ಮಂಗಳೂರು ವಿವಿ ಈ ಕೆಲಸ ಮಾಡುತ್ತಿರುವುದು ಸ್ಪಷ್ಟವಾಗಿ ಕಾಣಿಸುತ್ತದೆ. ಉದಾಹರಣೆಗೆ 28-01-09ರಂದು ಕೋಮು ಪ್ರಚೋದಕ ಹೇಳಿಕೆ ನೀಡಿದ್ದಾರೆಂದು ಆರೋಪಿಸಿ ವಿದ್ಯಾರ್ಥಿ ಸಂಘದವರು ದೂರು ನೀಡಿ ತರಗತಿ ಬಹಿಷ್ಕರಿಸಲು ಒತ್ತಾಯಮಾಡಿ ಕಾಲೇಜು ಮುಚ್ಚಿಸಿದರೆ, ಪ್ರಾಂಶುಪಾಲ ಮಹಾಶಯ ಆ ವಿದ್ಯಾರ್ಥಿಗಳಿಗೆ ಶೋಕಾಸ್ ನೋಟೀಸು ನೀಡುವ ಬದಲು ಉಪನ್ಯಾಸಕನ ಮೇಲೆ ತಗಾದೆ ತೆಗೆಯುವುದೆಂದರೇನು?

ಇದು ಗೊತ್ತಿದ್ದೂ ವಿವಿ ಅಧಿಕಾರಿಗಳು ಕಾನೂನುಬಾಹಿರವಾಗಿ ತರಗತಿ ಮುಚ್ಚಲು ಒತ್ತಾಯಿಸಿದ್ದ ವಿದ್ಯಾರ್ಥಿಗಳ ಮೇಲೆ ಕ್ರಮಕೈಗೊಳ್ಳುವಂತೆ ಪ್ರಾಂಶುಪಾಲರನ್ನು ಒತ್ತಾಯಿಸುವುದಿಲ್ಲ! ಬದಲಾಗಿ ಉಪನ್ಯಾಸಕರನ್ನೇ ವಿಚಾರಣೆಗೆ ಗುರಿಪಡಿಸಲು ಸೂಚಿಸುತ್ತದೆ! ಹಾಗೊಮ್ಮೆ ನಾಳೆ ಬೇರೆ ನಾಲ್ವರು ವಿದ್ಯಾರ್ಥಿಗಳು ಹೀಗೆ ಏನೋ ಪ್ರಾಂಶುಪಾಲರ ಮೇಲೆಯೇ ಆರೋಪ ಹೊರಿಸಿದರೆ ವಿವಿ ಏನು ಮಾಡುತ್ತದೆ? ಪ್ರಿನ್ಸಿಪಾಲ್ ಅವರೇ ಒಪ್ಪಿಕೊಂಡಿರುವಂತೆ ಈ ದೂರಿಗೆ ಕೇವಲ ಎಪ್ಪತ್ತೊಂದು ವಿದ್ಯಾರ್ಥಿಗಳು ಮಾತ್ರ ಸಹಿ ಮಾಡಿದ್ದಾರೆ.

ಒಂದು ಪತ್ರ

ಕಾಲೇಜಿನಲ್ಲಿ ಶೈಕ್ಷಣಿಕ ವಾತಾವರಣ ಹದಗೆಡಲು ಸೋಮಯಾಜಿ ಕಾರಣ ಎಂದು ವಿವಿ ಆರೋಪ ಮಾಡುವಾಗ, ಅಲ್ಲಿ ಸತತವಾಗಿ ಕ್ಲಾಸು ಮುಚ್ಚಿಸುವುದು, ಅಸ್ಪಷ್ಟ ಆರೋಪ ಹೊರಿಸಿ ಬೆದರಿಸುವುದು ಇತ್ಯಾದಿ ಮಾಡುತ್ತಿರುವ ವಿದ್ಯಾರ್ಥಿಗಳ ಮೇಲೆ ವಿವಿ ಅಥವಾ ಪ್ರಿನ್ಸಿಪಾಲ್ ಏನು ಕ್ರಮ ಕೈಗೊಂಡಂತೆ ಕಂಡುಬರುವುದಿಲ್ಲ, ಈ ವಿದ್ಯಾರ್ಥಿ ಗುಂಪಿಗೆ ಬೆದರಿ ಮಣೆ ಹಾಕುತ್ತಿರುವ ಪ್ರಿನ್ಸಿಪಾಲರು ತನ್ನ ಕರ್ತವ್ಯ ನಿಭಾಯಿಸುವಲ್ಲಿ ವಿಫಲರಾಗಿರುವುದರಿಂದಲೇ ಇಮ್ಮತ್ತು ಆ ಕಾಲೇಜಿನ ಶೈಕ್ಷಣಿಕ ವಾತಾವರಣ ಹದಗೆಟ್ಟಿರುವಂತೆ ತೋರುತ್ತಿದೆ.

ತೀರಾ ಅಪಾಯಕಾರಿ ಮತ್ತು ವಿಷಾದದ ಸಂಗತಿಯೆಂದರೆ, ಈ ಜಿಲ್ಲೆಯ ಎಲ್ಲ ಅಧ್ಯಾಪಕರ ಗುಂಪುಗಳೂ ಈ ವಿಚಾರದಲ್ಲಿ ತೆಪ್ಪಗಿರುವುದು. ದಕ್ಷಿಣ ಕನ್ನಡದಲ್ಲಿ ಸಾಹಿತ್ಯ, ಸಾಮಾಜಿಕ ಪ್ರಜ್ಞೆ ಅಂತೆಲ್ಲ ಮಾತಾಡುತ್ತಾ ವೇದಿಕೆ ಮತ್ತು ಪತ್ರಿಕೆಗಳಲ್ಲಿ ರಾರಾಜಿಸುವ ನಮ್ಮ ಉಪನ್ಯಾಸಕ ಲೇಖಕ ವರ್ಗಕ್ಕೇನು ಬಡಿದಿದೆ?

ಪ್ರಾಣಿ ಪ್ರಪಂಚದಲ್ಲಿ ಈ ವರ್ತನೆಯನ್ನು ನಾನು ಗಮನಿಸಿದ್ದೇನೆ: ಒಂದು ಪ್ರಾಣಿ ಅಪಾಯಕ್ಕೆ ಒಳಗಾದರೆ ಉಳಿದವು ಸುಮ್ಮನೆ ಮೇಯುತ್ತ ಓಡಾಡುತ್ತಿರುತ್ತವೆ. ಸೋಮಯಾಯಿ ಪ್ರಕರಣವನ್ನು ನೋಡಿದ ನಂತರ ಪ್ರಾಣಿಗಳಿಗಿಂತ ಮನುಷ್ಯ ವರ್ಗ ಬೇರೆ ಅಂತಂದುಕೊಂಡಿದ್ದೇ ತಪ್ಪು ಅನಿಸುತ್ತೆ.

- ಕೆ.ಪಿ.ಸುರೇಶ, ಬೆಂಗಳೂರು

ಸುಮ್ಮನೆ ಪ್ರಾಮಾಣಿಕವಾಗಿ....!

"ಕಳ್ಳರಿಗೆ ಮಾತ್ರ ಸಂಪೂರ್ಣ ಶ್ರದ್ಧೆ ಸಾಧ್ಯ"

-ಚಾರ್ಲ್ಸ್ ಬೋದಿಲೇರ್



ಪ್ರಾರ್ಥನೆಯ
ಒಂದು ಪ್ರಾಮಾಣಿಕ ಸಂಜೆ
ಹಳೆಯದಾದ ಆದರೆ ಚೆನ್ನಾಗಿ ಮಸೆದ
ಖಡ್ಗವನು ಹೊರತೆಗೆದ ದ್ವೇಷ
ನನ್ನೆದುರು ಬಿಸಾಡಿತು
ಚಲಿಸಲಿದ್ದ ಕೈಯನು ತಡೆದ
ಒಂಟಿತನ
'ಇದು ಸಮಯವಲ್ಲ' ಎಂದು
ನಡೆಯಲಿದ್ದ ಅಚಾತುರ್ಯವನು ತಪ್ಪಿಸಲು
ವಾಯುವಿಹಾರಕ್ಕೆ ಹೊರಟ
ದೇವರು ನಿಟ್ಟುಸಿರು ಬಿಟ್ಟ!


ಆದರೆ; ಧ್ಯಾನಕ್ಕೆ ಕುಳಿತ ಅದು
ನಿರಾಯುಧ ಶತ್ರುವನು
ಬೇಟೆಯಾಡಿ ರಾತ್ರಿಯಿಡೀ
ಉಗುರಿನಿಂದ ಪರಚಿ
ಮುಂಜಾವಿನಲಿ ನಂಜೇರಿಸಿ
ಕೊಂದಿತ್ತು ಮತ್ತು;
ಮರೆದ ಚಾತುರ್ಯವನು ನೆನೆದು
ಜಾವದಿ ಕಣ್ಣುಜ್ಜುತ್ತಿದ್ದ ಸೈತಾನನಿಗೆ
'ಶುಭ ಮುಂಜಾವು ದೋಸ್ತ್!' ಎಂದಿತು
ಹೀಗೆ
ನಾನು ಒಬ್ಬಂಟಿ ಸಿಕ್ಕಾಗಲೆಲ್ಲ
ಮಹಾಪ್ರಾಮಾಣಿಕನಂತೆ
ಮತ್ತು ಕೊಲೆಗಡುಕನಂತಿರಲು
ಕಲಿಸಿಬಿಟ್ಟಿತು!

● ರಮೇಶ್ ಅರೋಲಿ



ಮನೆಗೊಬ್ಬ ಮಂಜುನಾಥ

-ಮೇಡ್ ಇನ್ ಇಂಡಿಯಾ!



'ಎದ್ದೇಳು ಮಂಜುನಾಥಾ!' ನಿಜಕ್ಕೂ ಜಗ್ಗೇಶ್‌ರ 28 ವರ್ಷದ ...ತ್ತಿ ಬದುಕಿನಲ್ಲಿ ಮೈಲಿಗಲ್ಲಾಗುವ ಚಿತ್ರ.

'ಮಠ' ಚಿತ್ರದ ಮೂಲಕ ಚಿತ್ರರಂಗದ ಹೊಸ ಸಾಧ್ಯತೆಗಳಿಗೆ ...ನ್ನುಡಿ ಬರೆದ ನಿರ್ದೇಶಕ ಗುರುಪ್ರಸಾದ್ 'ಮಂಜುನಾಥ'ನ ...ಲಕ ಮತ್ತಷ್ಟು ಭರವಸೆ ಮೂಡಿಸಿದ್ದಾರೆ. ಸಾಮಾನ್ಯವಾಗಿ ...ದಲ ಚಿತ್ರದಿಂದ ನಿರೀಕ್ಷೆಯ ಏಣಿ ಹತ್ತಿಸಿ ನಂತರ ತೊಪ್ಪನೆ ...ಕ್ಕೆ ಕೆಡಹುವ ಮಂದಿಯೇ ಚಿತ್ರರಂಗದಲ್ಲಿ ಹೆಚ್ಚಿರುವಾಗ ...ರುಪ್ರಸಾದ್ ಎರಡನೇ ಪ್ರಯತ್ನದಲ್ಲೂ ಮೊದಲ ಚಿತ್ರದ ಅದೇ ...ಲವಿಕೆ, ಚುರುಕುತನವನ್ನು ಎತ್ತಿಹಿಡಿದಿರುವುದು ಗಮನಾರ್ಹ.

ಬಹುಶಃ ಜಗ್ಗೇಶ್ ಬಿಟ್ಟು ಬೇರಾವ ಜನಪ್ರಿಯ ನಾಯಕನಟನೂ ...ತ್ರದೊಂದು ಪಾತ್ರದಲ್ಲಿ ಕಾಣಿಸಿಕೊಳ್ಳಲು ಸಾಧ್ಯವಿಲ್ಲ. ಯಾಕೆಂದರೆ ಈ ಚಿತ್ರದಲ್ಲಿ ಎಲ್ಲೂ ಹೀರೋಯಿಸಂ ಅನ್ನು ಪ್ರದರ್ಶಿಸಲಾಗಲಿ, ...ರೋಯಿನ್ನುಗಳೊಂದಿಗೆ ಸ್ಟೆಪ್ಸು ಹಾಕುವುದಕ್ಕಾಗಲಿ ಅವಕಾಶವೇ ... ಈ ಚಿತ್ರದಲ್ಲಿರುವುದು ಕಿತ್ತುಹೋದ 10x12 ಅಗಲದ ...ೆ, ಒಂದು ರೂಮು ಅಷ್ಟೇ. ಜೊತೆಗೆ ಮೇಕಪ್ ಇಲ್ಲದ ...ರುಕಿ ಯಜ್ಞಾ ಶೆಟ್ಟಿಯ ಅಳುಮುಂಜಿಮುಖ ಮತ್ತು ಕುರುಡ ...ತ್ರಧಾರಿ ಮೇಕಪ್ ನಾಣಿ. ಇದರೊಂದಿಗೆ ಸಣ್ಣಪುಟ್ಟ ಪಾತ್ರಗಳು ...ಯಾದರೂ ಇಡೀ ಚಿತ್ರವನ್ನು ಗಟ್ಟಿಯಾಗಿ ನಿಲ್ಲಿಸುವುದು ...ರುಪ್ರಸಾದ್ ಬರೆದಿರುವ ಪಾದರಸದಂಥ ಸಂಭಾಷಣೆ.

ಕಳ್ ಮಂಜ, ಸುಳ್ ಮಂಜ

ಚಿಕ್ಕವಯಸ್ಸಿಗೇ ಪೋಲಿ ಬಿದ್ದ ಹುಡುಗ ಮಂಜುನಾಥ. ಅತನನ್ನು ಬದಲಿಸಲು ಹೆಣಗಾಡುವ ಅತನ ತಂದೆ, ತಾಯಂದಿರು ಕಡೆಗೆ ಬೇಸತ್ತು 'ಮದುವೆ ಮಾಡಿದರೆ ಎಲ್ಲಾ ಸರಿಹೋಗುತ್ತೆ' ಎಂದು ಮದುವೆ ಮಾಡಿಬಿಡುತ್ತಾರೆ. ಆದರೂ ಬದಲಾಗದ ಮಂಜುನಾಥಾ ಹೆಂಡತಿಯ ದುಡಿಮೆಯಲ್ಲಿ ಬಿಟ್ಟಿ ಕೂಳು ತಿನ್ನುತ್ತಾ, ಎದುರುಮನೆ ಹುಡುಗಿಗೆ ಕಾಳು ಹಾಕುತ್ತಾ, ಸೋಮಾರಿಕಟ್ಟೆಯಲ್ಲಿ ಕುಳಿತು ಕಾಲಾಹರಣ ಮಾಡುತ್ತಿರುತ್ತಾನೆ.

ಕಡೆಗೆ ಬಾರ್‌ವೊಂದರಲ್ಲಿ ಕೆಲಸಕ್ಕೆ ಸೇರಿಸಿದರೆ ಅಲ್ಲೂ ಗಲ್ಲಾಪೆಟ್ಟಿಗೆಗೆ ಕತ್ತರಿ ಹಾಕಿ ಸಿಕ್ಕುಬೀಳುತ್ತಾನೆ. ಅಲ್ಲಿ ಸಿನಿಮಾ ನಿರ್ದೇಶಕನಾಗಲು ಹೊರಟ ಕಣ್ಣಿಲ್ಲದ ಕುರುಡನೊಬ್ಬ ಮಂಜನಿಗೆ ಜೊತೆಯೊಗುತ್ತಾನೆ. ಇಡೀ ಚಿತ್ರದಲ್ಲಿ ಆ ಕುರುಡನ ಬಳಿ ಮಂಜ ತನ್ನ ಬಯೋಗ್ರಫಿಯನ್ನು ಎಳೆಎಳೆಯಾಗಿ ಬಿಚ್ಚಿಡುತ್ತಾ ಹೋಗುತ್ತಾನೆ.

ಇದು 'ಎದ್ದೇಳು ಮಂಜುನಾಥಾ' ಚಿತ್ರದ ಸಂಕ್ಷಿಪ್ತ ಕಥೆ.

ಇದು ಕೇವಲ ಮಂಜುನಾಥ ಪಾತ್ರಧಾರಿಯ ಕಥೆಯಲ್ಲ. ಬದಲಿಗೆ ನಮ್ಮ ನಡುವೆ, ಮನೆಗೊಬ್ಬರಂತೆ ಕಾಣಬರುವ ಸೋಂಭೇರಿಗಳ, ಬೀದಿಗೊಬ್ಬರಂತೆ ಇರುವ ವಂಚಕರ, ಅಕ್ಕಪಕ್ಕದಲ್ಲಿ ಸಿಗುವ ಸುಳ್ಳುಬುರುಕರ ಬದುಕನ್ನು 'ಮಂಜುನಾಥ' ಎಂಬ ಯೂನಿವರ್ಸಲ್ ಪಾತ್ರದ ಮೂಲಕ ಚಿತ್ರಿಸಿದ್ದಾರೆ.

ಸಿನಿಮಾದ ಆರಂಭದಿಂದ ಕೊನೆಯವರೆಗೂ ಪ್ರೇಕ್ಷಕರ ಹೊಟ್ಟೆ ಹುಣ್ಣಾಗುವಂತೆ ನಗಿಸುವ ನಿರ್ದೇಶಕ ಕ್ಲೈಮ್ಯಾಕ್ಸ್‌ನಲ್ಲಿ ನೋಡುಗರ ಕಣ್ಣಲ್ಲಿ ನೀರುಕ್ಕಿಸುತ್ತಾರೆ. ಅದು ಅವರ ಕಥೆ ಹಾಗೂ ನಿರ್ದೇಶನದ ಗಟ್ಟಿತನಕ್ಕೆ ಸಾಕ್ಷಿ.

ಹಿಂದೆ ಅನಂತ್‌ನಾಗ್ 'ಗೋಲ್‌ಮಾಲ್ ರಾಧಾಕೃಷ್ಣ', 'ಗಣೇಶನ ಮದುವೆ' ತರಹದ ಚಿತ್ರಗಳಲ್ಲಿ ಇಂಥ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಈಗ ಜಗ್ಗೇಶ್ ಆ ಸ್ಥಾನವನ್ನು ತುಂಬಿದ್ದಾರೆ.

ಜಗ್ಗೇಶ್‌ರನ್ನು ಆರಾಧಿಸುವವರೂ, ಅವರ ಚಿತ್ರದ ಬಗ್ಗೆ ಮೂಗುಮುರಿಯುವವರೂ ಯಾವುದೇ ಅಂಜಿಕೆಯಿಲ್ಲದೆ ರಾಜಾರೋಷವಾಗಿ ನೋಡಬಹುದಾದ ಚಿತ್ರ 'ಎದ್ದೇಳು ಮಂಜುನಾಥಾ.'

ಚಿತ್ರ ನೋಡಿ ಹೊರಬಂದಮೇಲೆ ಅನ್ನಿಸುವುದಿಷ್ಟೇ: ಇಷ್ಟು ಚೆಂದನೆಯ ಸಿನಿಮಾ ಮಾಡಿರುವ ನಿರ್ದೇಶಕ ಗುರುಪ್ರಸಾದ್, ನಾಯಕ ಜಗ್ಗೇಶ್ ಮತ್ತು ನಿರ್ಮಾಪಕ ಸನತ್ ಕುಮಾರ್ ನಡುವೆ ಅನವಶ್ಯಕ ಜಗಳ ಬೇಕಿತ್ತಾ? ಎಂದು.

● ಅರುಣ್.ಜಿ



ಅಂದು ಕಣ್ಣಪ್ಪ ಇಂದು ರಕ್ತದಾನಪ್ಪ!

...ಮೊನ್ನೆ ಒಂದೇ ವಾರದ ಅವಧಿಯಲ್ಲಿ ಎರಡು ಬಾರಿ ರಕ್ತದಾನ ಮಾಡುವ ...ಲಕ ನಾಯಕನಟ ಶಿವರಾಜ್‌ಕುಮಾರ್ ಒಂದು ಹೊಸ ವಿವಾದದಲ್ಲಿ ಸಿಲುಕಿದರು.


...ಜುಲೈ 12ರಂದು ತನ್ನ ಹುಟ್ಟುಹಬ್ಬದ ಸಂದರ್ಭದಲ್ಲಿ ರಕ್ತದಾನ ಶಿಬಿರದ ಉದ್ಘಾಟನೆಯನ್ನು ... ತಾವೇ ರಕ್ತದಾನ ಮಾಡುವ ಮುಖಾಂತರ ಆರಂಭಿಸಿದರು. ವಿಶೇಷವೆಂದರೆ ಅದಕ್ಕಿಂತ ...ರು ದಿನ ಮೊದಲು ನಿರ್ದೇಶಕ ಸಾಯಿಪ್ರಕಾಶ್ ಅವರ ಹುಟ್ಟುಹಬ್ಬದಂದು ಕೂಡಾ ...ರಾಜ್‌ಕುಮಾರ್ ರಕ್ತದಾನ ಮಾಡಿದ್ದರು.

...ವಾಸ್ತವವಾಗಿ ಒಬ್ಬ ಆರೋಗ್ಯ ಪೂರ್ಣ ವ್ಯಕ್ತಿ ಒಮ್ಮೆ ರಕ್ತದಾನ ಮಾಡಿದ ನಂತರ ...ರು ತಿಂಗಳ ಕಾಲ ಮತ್ತೊಮ್ಮೆ ರಕ್ತದಾನ ಮಾಡುವ ಹಾಗಿಲ್ಲ. ಆದರೆ ರಕ್ತದಾನ ...ಡುವ ಅತ್ಯುತ್ಸಾಹದಲ್ಲೋ ಏನೋ ಶಿವರಾಜ್‌ಕುಮಾರ್ ಮೂರೇ ದಿನಗಳ ಅಂತರದಲ್ಲಿ ...ಡು ಬಾರಿ ರಕ್ತದಾನ ಮಾಡಿದ್ದರು. ಕೊನೆಗೆ ಶಿವಣ್ಣ ಮಾಡಿದ ಪ್ರಮಾದ ಅವರ ...ೋದರ ರಾಘವೇಂದ್ರ ರಾಜ್‌ಕುಮಾರ್‌ಗೆ ಅರಿವಾಯಿತು.

...ಶಿವರಾಜ್‌ಕುಮಾರ್ ಹುಟ್ಟುಹಬ್ಬದ ಮರುದಿನ ನಡೆದ ಅಭಿಮಾನಿಗಳ ಸಮಾವೇಶದಲ್ಲಿ ...ವೇಂದ್ರ ರಾಜ್‌ಕುಮಾರ್ ಈ ಬಗ್ಗೆ ಸ್ಪಷ್ಟನೆ ನೀಡಿದರು. "ಶಿವಣ್ಣನಿಂದ ಮೊನ್ನೆ ಒಂದು ...ಾದ ಆಗಿಹೋಗಿದೆ. ಮೂರೇ ದಿನದ ಅಂತರದಲ್ಲಿ ಅವರು ಎರಡು ಬಾರಿ ರಕ್ತದಾನ ...ಡಿದ್ದಾರೆ. ಇದು ತಪ್ಪು, ದಯವಿಟ್ಟು. ಅಭಿಮಾನಿಗಳು ಈ ತರಹ ಮಾಡದೇ ...ರು ತಿಂಗಳ ಅವಧಿಯ ನಂತರ ಮಾತ್ರ ಎರಡನೇ ಬಾರಿ ರಕ್ತದಾನ ಮಾಡಬೇಕು" ...ಎಂದು ವಿನಂತಿಸಿಕೊಂಡರು.

...ಅಲ್ಲಿಗೆ ಶಿವರಾಜ್‌ಕುಮಾರ್ ರಕ್ತದಾನದಿಂದ ಸೃಷ್ಟಿಸಿದ ಗೊಂದಲ ಅಂತ್ಯವಾಯಿತು. ●

'ತ್ರಿಶಂಕು'ಗಳ ತಿರುಪತಿ ನಾಮ!



ನೀವು ಸಿನಿಮಾ ನಟರಾಗಬೇಕೇ?

ಹಾಗಿದ್ದಲ್ಲಿ ಕಳೆದ ಶುಕ್ರವಾರದ ಉದಯವಾಣಿ ಸಿನಿಮಾ ಪುಟದಲ್ಲಿ ಪ್ರಕಟಗೊಂಡಿರುವ ಬಿಲ್ಲೆಗಾತ್ರದ ಜಾಹೀರಾತಿನಲ್ಲಿರುವ ಮೊಬೈಲ್ ನಂಬರ್‌ಗೆ ಫೋನ್ ಮಾಡಿ....

ನೀವು ಫೋನ್ ಮಾಡುತ್ತಿದ್ದಂತೆಯೇ ಆ ಕಡೆಯಲ್ಲಿನ ವ್ಯಕ್ತಿ ನಿಮ್ಮ ಹೆಸರನ್ನು ಕೇಳುತ್ತದೆ. ನೀವು ಹೆಸರು ಹೇಳಿದ ಕೂಡಲೇ 'ನೀವು ಇದುವರೆಗೆ ಯಾವ ಚಿತ್ರದಲ್ಲಾದರೂ ನಟಿಸಿದ್ದೀರಾ?' ಎನ್ನುತ್ತದೆ. ಇತ್ತಕಡೆಯಿಂದ ನೀವು 'ಇಲ್ಲ' ಎಂದಕೂಡಲೇ ಖುಷಿಯಿಂದ ಆ ವ್ಯಕ್ತಿ 'ಇಮಿಡಿಯೆಟ್ಟಾಗಿ ಬಸವೇಶ್ವರನಗರ ಸರ್ಕಲ್ ಹತ್ರ ಬಂದು, ಪವಿತ್ರ ಹೋಟೆಲ್ ಮುಂದೆ ನಿಂತುಕೊಂಡು ಫೋನ್ ಮಾಡಿ, ಬಂದು ಕರಕೊಂಡು ಹೋಗ್ತೀವಿ... ಬರೋವಾಗ ಹಂಡ್ರೆಡ್ ರೂಪೀಸ್ ದುಡ್ ತರೋದು ಮರೀಬೇಡಿ' ಎನ್ನುತ್ತದೆ.... 'ಛಾನ್ಸು ಸಿಕ್ತು' ಎಂಬ ಆಸೆಯಿಂದ ಅಲ್ಲಿಗೆ ಹೋದವರ ಹಣೆಗೆ ತಿಕ್ಕಲು ಭರ್ತಿ ಉಂಡೆ ನಾಮ ಅಲ್ಲಿ ಸಿದ್ಧಗೊಂಡಿರುತ್ತದೆ. ದುಡಿದು ತಿನ್ನಲು ಯೋಗ್ಯತೆಯಿಲ್ಲದ ಜನ ಏನೆಲ್ಲಾ ಮಾಡಿ ಹೊಟ್ಟೆ ಹೊರೆಯುತ್ತಾರೆ ಎಂಬುದಕ್ಕೆ ಇದೊಂದು ಉದಾಹರಣೆ.

ಶ್ರೀರಾಘವೇಂದ್ರ ಮೂವೀಸ್ ಇಂಟರ್‌ನ್ಯಾಷನಲ್ ಎಂಬ ಹೆಸರಿನಲ್ಲಿ ಪ್ರದೀಪ್‌ರಾಜ್ ಎಂಬಾತ 'ತ್ರಿಶಂಕು ಎಂಬ ಚಿತ್ರಕ್ಕೆ ನಾಯಕನಟರು- ದ್ವಿತೀಯ ನಾಯಕಿಯರು, ಸಹಕಲಾವಿದರ ಆಯ್ಕೆ ನಡೆಯುತ್ತಿದೆ' ಎನ್ನುವ ಸಣ್ಣ ಜಾಹೀರಾತು ನೀಡಿ ಅದರಲ್ಲಿ ಎರಡೆರಡು ಮೊಬೈಲ್ ನಂಬರು, ಇ ಮೇಲ್ ವಿಳಾಸಗಳನ್ನೂ ನೀಡಿದ್ದಾನೆ. ಆ ಜಾಹಿರಾತು ನೋಡಿದ ಯಾರೇ ಪ್ರಜ್ಞಾವಂತರಿಗಾದರೂ ಅದು ಐನಾತಿ ಗಿರಾಕಿಗಳೇ ನೀಡಿರುವ ಜಾಹಿರಾತು ಎಂಬುದು ಮೇಲ್ನೋಟಕ್ಕೇ ಗೊತ್ತಾಗುತ್ತದೆ.

ಮೊದಲಿಗೆ ಎಂಟ್ರನ್ಸ್ ಫೀಸು ಅಂತ ನೂರು ರೂಪಾಯಿ ಪೀಕುವ ಇವರು ನಂತರ ಸೆಲೆಕ್ಟ್ ಆದ ಮೇಲೆ ಎಷ್ಟು ಕೊಡಬೇಕು ಎಂದು ಹೇಳ್ತೀವಿ ಎಂದೆಲ್ಲಾ ಹೇಳಿ ಮುಗ್ಧ ಜನರನ್ನು, ಸಿನಿಮಾ ಕನಸು ಕಾಣುತ್ತಿರುವ ಯುವಕ, ಯುವತಿಯರನ್ನು ವಂಚಿಸುತ್ತಿದ್ದಾರೆ. ●

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 29-07-2009 RNI No. KARKAN2005/14642

ನರಸಿಂಹರಾಜು ನೆನಪು



ಮೊನ್ನೆ ಹನ್ನೊಂದನೇ ತಾರೀಖಿಗೆ ಹಾಸ್ಯಚಕ್ರವರ್ತಿ ನರಸಿಂಹರಾಜು ಕಾಲವಾಗಿ ಭರ್ತಿ ಮೂವತ್ತು ವರ್ಷವಾಯ್ತು, ಮಾತ್ರವಲ್ಲ ಇದೇ ತಿಂಗಳ 24ರಂದು ನರಸಿಂಹರಾಜು ಅವರ ಜನ್ಮದಿನವೂ ಹೌದು.

ಚಿತ್ರರಂಗಕ್ಕಾಗಿ ಸುಮಾರು ಮೂರೂವರೆ ದಶಕಗಳ ಕಾಲ ತಮ್ಮ ಜೀವವನ್ನೇ ತೇದು ಪ್ರಾಣಬಿಟ್ಟವರು ನರಸಿಂಹರಾಜು. ಆ ಕಾಲಕ್ಕೇ ಡಾ. ರಾಜ್‌ಕುಮಾರ್ ಚಿತ್ರವೊಂದಕ್ಕೆ ಐವತ್ತು ಸಾವಿರ ರೂಪಾಯಿ ಸಂಭಾವನೆ ಪಡೆದರೆ ನರಸಿಂಹರಾಜು ಕಾಲ್‌ಶೀಟ್ ಐದು ಸಾವಿರ ರೂಪಾಯಿಗಳ ಬೆಲೆ ಬಾಳುತ್ತಿತ್ತು. ಎಲ್ಲ ನಟರಿಗಿಂತಲೂ ಮೊದಲು ನರಸಿಂಹರಾಜು ಅವರ ಮನೆ ಮುಂದೆ ಯೂನಿಟ್‌ನ ಕಾರು ಹೋಗಿ ನಿಲ್ಲುತ್ತಿತ್ತು.

ಎಂತಹ ಪರಮ ಸಿಡುಕರ, ಮೂಷಂಡಿಗಳ ಮುಖದಲ್ಲೂ ಕ್ಷಣಾರ್ಧದಲ್ಲಿ ನಗುತರಿಸುತ್ತಿದ್ದ ಮೇರುನಟ ನರಸಿಂಹರಾಜು. ಇಂಥ ನಟನ ಹೆಸರಿನಲ್ಲಿ ಇದುವರೆಗೂ ಯಾವ ಸರ್ಕಾರಗಳೂ ಅವರ ಹೆಸರು ಚಿರಂತನವಾಗಿ ನೆನಪಿನಲ್ಲುಳಿಯುವಂಥ ಒಂದೇ ಒಂದು ಕಾರ್ಯಕ್ರಮ ಮಾಡಿಲ್ಲ, ಕಡೇ ಪಕ್ಷ ಅವರ ಹೆಸರಿನಲ್ಲಿ ವರ್ಷಕ್ಕೊಂದು ಅವಾರ್ಡನ್ನಾದರೂ ಕೊಡಬಹುದಿತ್ತು; ಅದನ್ನು ಸಹಾ ಈವರೆಗೆ ಯಾರೂ ಮಾಡಿಲ್ಲ.



ನರಸಿಂಹರಾಜು ಅವರ ಪುತ್ರಿ ಸುಧಾ ತನ್ನ ತಂದೆ ಬದುಕಿ ಬಾಳಿದ ಜಯಮಹಲ್ ರಸ್ತೆಗೆ 'ನರಸಿಂಹರಾಜು ರಸ್ತೆ' ಎಂಬ ಹೆಸರನ್ನಿಡಿ ಎಂದು ಕಳೆದ ಇಪ್ಪತ್ತು ವರ್ಷಗಳಿಂದ ಎಲ್ಲ ಸರ್ಕಾರಗಳಿಗೂ ಮನವಿ ಸಲ್ಲಿಸುತ್ತಲೇ ಬರುತ್ತಿದ್ದಾರೆ. ಬೆಂಗಳೂರು ಮಹಾನಗರ ಪಾಲಿಕೆ, ಫನ್ ವರ್ಲ್ಡ್ ವೃತ್ತಕ್ಕೆ ನರಸಿಂಹರಾಜು ಅವರ ಹೆಸರನ್ನಿಡುವುದಾಗಿ ಆಶ್ವಾಸನೆ ನೀಡಿತ್ತಾದರೂ ಅದೂ ಕೂಡ ಈವರೆಗೂ ಕಾರ್ಯರೂಪಕ್ಕೆ ಬಂದಿಲ್ಲ.

ಇದು ನರಸಿಂಹರಾಜು ಎಂಬ ಮಹಾನ್ ನಟನಿಗೆ ನಮ್ಮ ಚಿತ್ರರಂಗ ಮತ್ತು ಇಲ್ಲಿನ ಸರ್ಕಾರಗಳು ನೀಡಿರುವ ಅತಿದೊಡ್ಡ ಗೌರವ!



ವಾಯುಪುತ್ರ
ಅಂದ್ರಿತಾ

ಕರಿಯನ 'ತಾಕತ್ತು' ಕಡಿಮೆಯಾಯ್ತು!



'ದುನಿಯಾ' ಖ್ಯಾತಿಯ ವಿಜಯ್ ಈಗ ಗಾಂಧಿನಗರದಲ್ಲಿ ಮಂದಸ್ಮಿತ ಬೀರುತ್ತಿದ್ದಾರೆ. ಅವರ ಅಭಿನಯದ 'ತಾಕತ್'' ಚಿತ್ರ ಈಗಾಗಲೇ ಸುಮಾರು 40 ಕೇಂದ್ರಗಳಲ್ಲಿ ಐವತ್ತು ದಿನ ತುಂಬಿದ ಪ್ರದರ್ಶನ ಕಂಡಿರುವುದೇ ಅವರ ಸಂತೋಷಕ್ಕೆ ಕಾರಣ. 'ತಾಕತ್' ಚಿತ್ರದ ನಿರ್ದೇಶಕ ಎಂ.ಎಸ್. ರಮೇಶ್ ಹೇಳುವ ಪ್ರಕಾರ ಈ ಚಿತ್ರ ಕನಿಷ್ಠವೆಂದರೂ ಏಳು ಕೇಂದ್ರಗಳಲ್ಲಿ ಶತದಿನೋತ್ಸವ ಆಚರಿಸುವುದು ಗ್ಯಾರಂಟಿಯಂತೆ.

ವರ್ಷದ ಆರಂಭದಲ್ಲಿ ವಿಜಿ ಅಭಿನಯದ 'ಜಂಗ್ಲಿ' ಚಿತ್ರ ಕೂಡಾ ಇದೇ ತರಹ ಬಾಕ್ಸಾಫೀಸ್‌ನಲ್ಲಿ ಜಯಭೇರಿ ಬಾರಿಸಿತ್ತು. 'ಜಂಗ್ಲಿ' ನಂತರ 'ತಾಕತ್' ಕೂಡಾ ಗೆದ್ದಿರುವುದರಿಂದ ವಿಜಿಯ ತಾರಾವರ್ಚಸ್ಸನ್ನು ವೃದ್ಧಿಸಿದೆ. ಆರ್ಥಿಕ ಕುಸಿತದ ಈ ಸಂದರ್ಭದಲ್ಲಿ ಕನ್ನಡ ಚಿತ್ರಗಳು ಸಾಲುಸಾಲಾಗಿ ಅಡ್ಡಡ್ಡ ಮಲಗುತ್ತಿರುವ ಇಂತಹ ದುಸ್ಥಿತಿಯಲ್ಲಿ ವಿಜಿ ಚಿತ್ರಗಳು ಗೆಲ್ಲುತ್ತಿರುವುದು ಗಾಂಧಿನಗರದ ಜನರಲ್ಲಿ ಅಚ್ಚರಿಹುಟ್ಟಿಸಿದೆ.

ಈ ಮಧ್ಯೆ ವಿಜಿಯ ಕೋಪ-ತಾಪಗಳು ಕೂಡಾ ಕಡಿಮೆಯಾಗಿದ್ದು, ಆತ ಬದಲಾಗಿರುವ ಸೂಚನೆ ಕಾಣಿಸುತ್ತಿದೆ. ಎಸ್.ನಾರಾಯಣ್ ಮೊನ್ನೆ ವಿಜಿ ಮನೆಗೆ 'ಚಂಡ' ಚಿತ್ರದ ಶತದಿನೋತ್ಸವ ನೆನಪಿನ ಕಾಣಿಕೆಯನ್ನು ಕಳುಹಿಸಿಕೊಟ್ಟರಂತೆ. "ಅದನ್ನು ಅತ್ಯಂತ ಗೌರವದಿಂದ ಸ್ವೀಕರಿಸಿ, ಪ್ರೀತಿಯಿಂದ ತೆಗೆದಿಟ್ಟದ್ದೇನೆ'' ಎಂದು ವಿಜಯ್ ಹೇಳಿದರು. ಸಾಧಾರಣವಾಗಿ ಎಸ್.ನಾಣಿ ತಮ್ಮ ಚಿತ್ರ ಸೆಂಚುರಿ ಬಾರಿಸಿದಾಗ ಮನೆಯಲ್ಲಿ ಪೂಜೆಯಿಟ್ಟುಕೊಂಡು ಚಿತ್ರ ತಂಡದ ಕಲಾವಿದ-ತಂತ್ರಜ್ಞರಿಗೆಲ್ಲ ನೆನಪಿನ ಕಾಣಿಕೆ ಕೊಡುವ ಸಂಪ್ರದಾಯ ಇಟ್ಟುಕೊಂಡಿದ್ದಾರೆ. ಅದೇ ತರಹ 'ಚಂಡ' ಸಮಾರಂಭ ಇಟ್ಟುಕೊಂಡರೂ ಚಿತ್ರದ ನಾಯಕ ವಿಜಿ ಮತ್ತು ನಾಯಕಿ ಶುಭ ಪೂಂಜಾರನ್ನು ಆಹ್ವಾನಿಸದೆ ನೆನಪಿನ ಕಾಣಿಕೆಯನ್ನು ಮನೆಗೆ ಕಳುಹಿಸಿಕೊಟ್ಟಿದ್ದರು.

ವಿಜಿ ಮತ್ತು ನಾರಾಯಣ್ ನಡುವೆ ಚಿತ್ರ ಬಿಡುಗಡೆ ಸಂದರ್ಭದಲ್ಲಿ ಬಹಳ ದೊಡ್ಡ ಗಲಾಟೆಯೇ ನಡೆದಿತ್ತು. ನಾರಾಯಣ್ ಮನೆಗೆ ವಿಜಿ ಅಭಿಮಾನಿಗಳು ಕಲ್ಲು ತೂರಾಟ ಮಾಡಿದ್ದರು. ಇವರಿಬ್ಬರ ನಡುವೆ ಮಾತುಕತೆ ಕೂಡಾ ನಿಂತುಹೋಗಿತ್ತು. ಈಗ ಅದನ್ನೆಲ್ಲ ಮರೆತು ವಿಜಿ ಉದಾರ ಮನೋಭಾವ ಪ್ರದರ್ಶಿಸಿ ನಾರಾಯಣ್ ಕಳುಹಿಸಿಕೊಟ್ಟ ನೆನಪಿನ ಕಾಣಿಕೆಯನ್ನು ಸ್ವೀಕರಿಸಿದ್ದಾರೆ. ಬಹುಶಃ ಎರಡು ಚಿತ್ರಗಳ ಗೆಲುವು ಈ ಒರಟ ವಿಜಿಯ ಹೃದಯವನ್ನು ಮಾಗಿಸಿದೆ.

ಪ್ರಾಣ ಉಳಿಸಿಕೊಂಡ ಮಯೂರ್



ನಟ ಮಯೂರ್ ಪಟೇಲ್ 'ಮುನಿಯಾ' ಚಿತ್ರದ ಶೂಟಿಂಗ್ ಸಂದರ್ಭದಲ್ಲಿ ಸಾವಿನ ಮನೆಯ ಕದ ತಟ್ಟಿಬಂದ ಘಟನೆಯೊಂದು ನಡೆದಿದೆ.

ಪೀಣ್ಯ ಬಳಿ ದೊಡ್ಡ ಆಲದ ಮರವೊಂದರಲ್ಲಿ ಮರದಿಂದ ಮರಕ್ಕೆ ಜಿಗಿಯುವ ಸಾಹಸ ದೃಶ್ಯದಲ್ಲಿ ಪಾಲ್ಗೊಂಡಿದ್ದ ಮಯೂರ್. ಅದೇನು ಯಡವಟ್ಟಾಯಿತೋ ಏನೋ ಮರದ ಮೇಲಿಂದ ಹಾರುವ ಸಮಯದಲ್ಲಿ ರೋಪ್ ಎಳೆಯುವುದು ಸ್ವಲ್ಪ ಹೆಚ್ಚೂಕಮ್ಮಿಯಾದ ಕೂಡಲೇ ಮಯೂರ್‌ನ ದೇಹ ರೊಯ್ಯನೆ ಬಂದು ಮತ್ತೊಂದು ಕೊಂಬೆಗೆ ಸಿಕ್ಕಿಕೊಂಡಿದೆ. ಕೆಳಗೆ ನಿಂತು ಚಿತ್ರೀಕರಿಸಿಕೊಳ್ಳುತ್ತಿದ್ದವರೆಲ್ಲಾ 'ಇನ್ನೇನು ಬುರುಡೆಗೆ ಮರದ ದಿಮ್ಮಿ ತಾಕಿ ತಲೆ ಎರಡು ಹೋಳಾಯಿತು' ಎನ್ನುವಷ್ಟರಲ್ಲಿ ಮಯೂರ್ ಆಶ್ಚರ್ಯಕರ ರೀತಿಯಲ್ಲಿ ಪಾರಾಗಿದ್ದಾನೆ.

'ಸೆಲ್ಯೂಟ್'ಗೆ ಸೆನ್ಸಾರ್ ಬಾಯ್ಕಾಟ್!



ಬಿ.ಸಿ.ಪಾಟೀಲ್ ನಿರ್ದೇಶಿಸಿ ನಟಿಸಿರುವ 'ಸೆಲ್ಯೂಟ್' ಚಿತ್ರಕ್ಕೆ ನೂತನ ಸೆನ್ಸಾರ್ ಆಫೀಸರ್ ನಾಗರಾಜ್ 'ಟಾಟಾ' ಹೇಳಿದ್ದಾರೆ. ಅರ್ಥಾತ್: 'ಸೆಲ್ಯೂಟ್' ಚಿತ್ರ ಅದೆಷ್ಟು ಕೆಟ್ಟದಾಗಿದೆ ಎಂದರೆ ಅದು ಪ್ರದರ್ಶನಕ್ಕೆ ಯೋಗ್ಯವಾಗಿಲ್ಲ ಎಂಬ ಕಾರಣಕ್ಕಾಗಿ ಈ ಚಿತ್ರಕ್ಕೆ ಯಾವುದೇ ಸರ್ಟಿಫಿಕೇಟ್‌ಅನ್ನು ನೀಡಲೂ ಅವರು ನಿರಾಕರಿಸಿದ್ದಾರೆ. ಈಗ ಬೇರೆ ದಾರಿ ಕಾಣದೆ ನಾಯಕನಟ ಪಾಟೀಲ್ ಮುಂಬೈನಲ್ಲಿರುವ ಸೆನ್ಸಾರ್ ಆಫೀಸಿಗೆ ಅಪೀಲು ಹೋಗಿದ್ದಾರೆ.

ಮೊನ್ನೆ-ಮೊನ್ನೆಯಷ್ಟೇ ಕಟ್ಟುನಿಟ್ಟಿನ ಸೆನ್ಸಾರ್ ಅಧಿಕಾರಿ ಚಂದ್ರಶೇಖರ್ ನಿವೃತ್ತಿ ಹೊಂದಿದಾಗ ಕನ್ನಡ ಚಿತ್ರರಂಗದ ಕೆಲವರು ನಿಟ್ಟುಸಿರು ಬಿಟ್ಟು ಇನ್ನು ಮುಂದೆಯಾದರೂ ತಾವು ಕನ್ನಡ ಚಿತ್ರರಂಗವನ್ನು ತಮಗೆ 'ಸೂಕ್ತ' ಕಂಡ ರೀತಿಯಲ್ಲಿ 'ಉದ್ಧಾರ' ಮಾಡಬಹುದು ಎಂದು ಆಲೋಚಿಸಿದ್ದರು. ಅವರ ಪ್ರಕಾರ ಹೊಡಿ ಬಡಿ ದೃಶ್ಯಗಳಿಗೆ, ಅಶ್ಲೀಲ ಸನ್ನಿವೇಶಗಳಿಗೆ ಚಂದ್ರಶೇಖರ್ ಕತ್ತರಿ ಪ್ರಯೋಗಿಸುತ್ತಿದ್ದರಿಂದಲೇ ಕನ್ನಡ ಚಿತ್ರರಂಗ ಪಾತಾಳಕ್ಕಿಳಿದಿತ್ತು.

ಅಂತಹ ಚಂದ್ರಶೇಖರ್ ಅವರ ಬೆನ್ನು ನೋಡಿ ಆನಂದಪಡುತ್ತಿರುವಾಗಲೇ ಈಗ ಅವರ ಸ್ಥಾನಕ್ಕೆ ಬಂದಿರುವ ಹೊಸ ಆಫೀಸರ್ ನಾಗರಾಜ್ 'ಸೆಲ್ಯೂಟ್' ಚಿತ್ರವನ್ನು ಹೀಗೆ ತಿರಸ್ಕರಿಸುವ ಮುಖಾಂತರ ಉದ್ಯಮದವರಿಗೆ ದೊಡ್ಡ ಶಾಕ್ ನೀಡಿದ್ದಾರೆ.

ಈಗ ಹೊಸ ಆಫೀಸರ್‌ಗಿಂತ ಹಳೇ ಆಫೀಸರೇ ಇದ್ದಿದ್ದರೆ ಚೆನ್ನಾಗಿತ್ತು ಎಂದು ಉದ್ಯಮದವರು ಕಣ್ಣೀರಿಡಲು ಆರಂಭಿಸಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises. # 134, 4th Main, Industrial Estate, Rajajinagar, Bangalore-44